# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ


ಸಂಪುಟ–40 ಶೋಭಕೃತ್ ನಾಮ ಸಂವತ್ಸರ, ಪುಷ್ಯ – ಮಾಘ ಮಾಸ, ಫೆಬ್ರವರಿ – 2024, ಸಂಚಿಕೆ–12, ಪುಟಗಳು–36 ಬೆಲೆ ರೂ.15/–

## ಶ್ರೀ ಸೋಂದಾ ಸ್ವರ್ಣವಲ್ಲೀ ಮಠ ಮಹಾಸಂಸ್ಥಾನದ ಶಿಷ್ಯ ಸ್ವೀಕಾರ ಸಮಾರಂಭ





## ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಗಳವರ ಕೊಡಚಾದ್ರಿ ಭೇಟಿ






## ಮೈಸೂರು ಶಾರದಾವಿಲಾಸ ಕಾಲೇಜಿನಲ್ಲಿ ಆಯೋಜಿಸಿದ್ದ ಶತೋತ್ತರ ಸಂಭ್ರಮದ ಅಂಗವಾಗಿ 50 ಮಂದಿ ವೈದಿಕರಿಗೆ ಗೌರವ ಸಮರ್ಪಣೆ ಸಮಾರಂಭ



# PRATIBHA ACADEMY

PRATIBHA SHIKSHANA SAMITHI BENGALURU

**Formerly: Pratibha Bala Mandira**
**Celebrating 60 YEARS of academic excellence**

## ADMISSIONS NOW OPEN!

### KINDERGARTEN | PRIMARY & HIGH SCHOOL



**DIAMOND JUBILEE MERIT SCHOLARSHIPS ARE OFFERED FOR ADMISSIONS 2024-2025**

***Composite Science & Mathematics Lab***
***World-class Basketball & Volleyball court***
***Smart-class and Digital learning***
***STEM-enriched Education***

School Van Facility available

www.pratibhaschool.com +91-80-26710170

No. 9, 18th Main
Banashankari II Stage
Bengaluru

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಟಿ.ಎಲ್.ಎಸ್. ಕುಮಾರ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಪ್ರಾತಃ ಸ್ನಾನಂ ಗವಾಂ ಸೇವಾ ಆರಾಮಃ ಪುಷ್ಪವಾಟಿಕಾ ।**
**ಮಾತಾ ಪಿತ್ರೋಶ್ಚ ಶುಶ್ರೂಷಾ ಶಾಸ್ತ್ರಾಯ ಚ ಸುಖಾಯ ಚ ॥**

'ಬೆಳಿಗ್ಗೆ ಮಾಡುವ ಸ್ನಾನ, ಗೋಸೇವೆ, ತೋಟ, ಉದ್ಯಾನಗಳಲ್ಲಿ ಮಾಡುವ ಕೆಲಸ, ತಾಯಿ–ತಂದೆಯರ ಸೇವೆ ಇವು ಆರೋಗ್ಯವನ್ನು, ಸುಖವನ್ನು ಕೊಡುವುದರಿಂದ, ಇವುಗಳ ಆಚರಣೆ, ಶಾಸ್ತ್ರವೂ ಮತ್ತು ಸುಖವೂ ಕೂಡ.

ವೈದ್ಯಕೀಯ ಸುಭಾಷಿತದಲ್ಲಿ ಬರುವ ಆರೋಗ್ಯ ಭಾಗ್ಯದ ಸೂತ್ರಗಳಿವು, ವಿಪ್ರರಾದ ನಾವು ಪ್ರತಿನಿತ್ಯವೂ ಮುಂಜಾನೆ ಸ್ನಾನ ಮಾಡಬೇಕು. ಇದರಿಂದ ಬಲ, ರೂಪ, ಸ್ವರಶುದ್ಧಿ, ವರ್ಗಶುದ್ಧಿ, ಸುಖ ಸ್ಪರ್ಶ, ಸುಗಂಧ, ಪರಿಶುದ್ಧತೆ, ತೇಜಸ್ಸು, ಕೋಮಲತೆ ಉಂಟಾಗುತ್ತದೆ ಎಂದು ಮಹಾಭಾರತ ತಿಳಿಸುತ್ತದೆ. ದಿನ ಸ್ನಾನದಿಂದ ಶಾರೀರಕ ನೈರ್ಮಲ್ಯ, ಮಾನಸಿಕ ಶುದ್ಧಿ, ಭಾವಶುದ್ಧಿಗಳನ್ನು ಪಡೆಯುತ್ತೇವೆ. ವೇದಗಳು ಮತ್ತು ಸ್ಮೃತಿಗ್ರಂಥಗಳಲ್ಲಿ ವಿವರಿಸಿರುವ ಎಲ್ಲಾ ಕ್ರಿಯೆಗಳಿಗೆ ಸ್ನಾನವೇ ಮೂಲ.

ಎರಡನೆಯದಾಗಿ ಗೋಸೇವೆ. ಈ ಸಾತ್ವಿಕ ಪ್ರಾಣಿಯಲ್ಲಿ 33 ದೇವತೆಗಳು ನೆಲೆಸಿದ್ದಾರೆ ಎಂದು ಸನಾತನ ಹಿಂದೂ ನಂಬಿಕೆ. ನಾವು ನೀಡುವ ಅಲ್ಪ ಹಸಿ–ಒಣಗಿದ ಹುಲ್ಲನ್ನು ಸೇವಿಸಿದ ಹಸುವು ಹಾಲು, ಗೊಬ್ಬರ ಮುಂತಾದ್ದನ್ನು ಮನುಷ್ಯನಿಗೆ ನೀಡುತ್ತದೆ. ಮನೆ ಮುಂದಿನ ಕೈತೋಟದಲ್ಲಿ ಅಥವಾ ಹೊರಗೆ ಇರುವ ಗಿಡಗಳು, ಮರಗಳಿಗೆ ನೀರುಣಿಸಿದಾಗ, ಸಾವಯುವ ಗೊಬ್ಬರ ಹಾಕಿ, ಭೂಸೇವೆ ಮಾಡಿದವರಿಗೆ ದುರ್ಭಿಕ್ಷವಿಲ್ಲ ಎಂದು ಋಗ್ವೇದ ವಾಕ್ಯ. **(ಕೃಷಿತೋ ನಾಸ್ತಿ ದುರ್ಭಿಕ್ಷಮ್)**. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ, ರೈತರಿಗೆ ಉತ್ತಮ ಪ್ರಾಶಸ್ತ್ಯ ದೊರಕಬೇಕು. ಅವರ ಬಾಳು ಹಸನಾಗಬೇಕು. ನಮ್ಮ ನೆಚ್ಚಿನ ಪ್ರಧಾನ ಮಂತ್ರಿಗಳಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿಯವರು 'ಜೈ ಜವಾನ್' ಎಂಬ ವಾಕ್ಯದೊಂದಿಗೆ 'ಜೈ ಕಿಸಾನ್' ಎಂದು ಸೇರಿಸಿ ದೇಶದೆಲ್ಲೆಡೆ ಕೃಷಿಯ ಮಹತ್ವವನ್ನು ಸಾರಿದರು. ಈ ಭೂಮಿಯು ಅಗಣಿತ ರತ್ನಗಳ ಬೀಡು. ಆದ್ದರಿಂದ ಮಹಾಭಾರತದಲ್ಲಿ **'ರತ್ನಗರ್ಭಾ ವಸುಂಧರಾ'** ಎಂದು ಹೊಗಳಲಾಗಿದೆ.

ಇನ್ನು ಕೊನೆಯದಾಗಿ ತಾಯ್ತಂದೆಯರ ಸೇವೆ. ನಮ್ಮ ಹುಟ್ಟಿಗೆ ಕಾರಣರಾದ, ನಮ್ಮನ್ನು ಲಾಲಿಸಿ, ಪೋಷಿಸಿ, ಓದಿಸಿ, ಸತ್ಪ್ರಜೆಗಳಾಗಿಸಿ, ಸಂಸ್ಕಾರವಂತ ನಾಗರಿಕರನ್ನಾಗಿ ಮಾಡುವಲ್ಲಿ ಅವರ ಸೇವೆ–ತ್ಯಾಗ ಅನುಪಮವಾದದ್ದು, ಅಗಣಿತವಾದದ್ದು. ತಾಯ್ತಂದೆಯರ ಋಣವನ್ನು ಎಂದೂ ತೀರಿಸಲು ಸಾಧ್ಯವಿಲ್ಲ. ಅವರಿಗೆ ವೃದ್ದಾಪ್ಯದಲ್ಲಿ ಬೆಂಬಲ, ಸುಖ–ಶಾಂತಿ ಸಮಾಧಾನಗಳನ್ನು ನೀಡತಕ್ಕದ್ದು ಎಲ್ಲ ಮಕ್ಕಳ ಕರ್ತವ್ಯ. ಇವುಗಳನ್ನು ಕ್ರಮಬದ್ಧವಾಗಿ ಮಾಡಿದಾಗ, ನಾವು ಶಾಸ್ತ್ರವಿಧಿಗಳನ್ನು ಆಚರಿಸಿದಂತೆ ಆಗುವುದರ ಜೊತೆಗೆ ಆರೋಗ್ಯ ಭಾಗ್ಯವೂ ಲಭಿಸುತ್ತದೆ.

**– ಪ್ರೊ. ಎಂ.ಕೆ. ಶ್ರೀಧರ್,**
ಪ್ರಧಾನ ಸಂಪಾದಕರು

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**
**– ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ಬ್ರಹ್ಮಜ್ಞಾನಾವಲೀಮಾಲಾ

– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ನಿರಾಧಾರಸ್ವರೂಪೋಽಹಂಸರ್ವಾಧಾರೋಽಹಮೇವ ಚ।**
**ಆಪ್ತಕಾಮಸ್ವರೂಪೋಽಹಮಹಮೇವಾಹಮವ್ಯಯಃ॥15॥**

**ಅನುವಾದ :** ನಾನು ನಿರಾಧಾರಸ್ವರೂಪನು ಹಾಗೂ ಸರ್ವಾಧಾರನು. ನನ್ನ ಸ್ವರೂಪವು ಆಪ್ತಕಾಮವಾಗಿದೆ.

**ವಿವರಣೆ :** ಈ ಲೋಕದಲ್ಲಿ ಪ್ರತಿಯೊಂದು ಪದಾರ್ಥವೂ ಒಂದು ಆಧಾರವನ್ನುಆಶ್ರಯಿಸಿರುತ್ತದೆ. ನಮ್ಮ ಶರೀರವು ಆಸನದ ಮೇಲೆ ಕುಳಿತಿದೆ. ಆಸನವು ಭೂಮಿಯನ್ನು ಆಶ್ರಯಿಸಿದೆ. ಭೂಮಿಯು ಆಕಾಶದಲ್ಲಿದೆ. ಹೀಗೆ ಪ್ರತಿಯೊಂದು ವಸ್ತುವೂ ತನ್ನ ಆಧಾರದ ಮೇಲೆ ನೆಲೆ ನಿಂತಿರುತ್ತದೆ. ಹೀಹೆ ವಿಚಾರವನ್ನು ಮಾಡಿದಾಗ ಪಂಚಭೂತಗಳಿಂದ ಕೂಡಿದ ಈ ಸಮಸ್ತ ಜಗತ್ತು ತನ್ನ ಕಾರಣವಾದ ಪರಮಾತ್ಮನನ್ನೇ ಆಶ್ರಯಿಸಿದೆ ಎಂದು ತಿಳಿದುಬರುತ್ತದೆ. ಹಾಗಾಗಿ ಪರಮಾತ್ಮನು ಸರ್ವಾಧಾರನು. ಈ ಸರ್ವಾಧಾರನಾದ ಪರಮಾತ್ಮನು ಯಾವುದನ್ನು ಆಶ್ರಯಿಸಿರುವನು? ಎಲ್ಲದಕ್ಕೂ ಆಧಾರನಾದಂತಹ ಪರಮಾತ್ಮನ ಆಧಾರವು ಯಾವುದು? ಪರಮಾತ್ಮನಿಗೆ ಯಾವುದೇ ಆಧಾರವೂ ಇಲ್ಲ. ಅವನು ಸ್ವತಂತ್ರವಾಗಿರುವನು. ತನ್ನ ಅಸ್ತಿತ್ವಕ್ಕಾಗಿ ಬೇರೆ ಯಾವುದನ್ನೂ ಆಶ್ರಯದ ಪರಮಾತ್ಮನು ನಿರಾಧಾರಸ್ವರೂಪನು. ಹಾಗಾಗಿ ಛಾಂದೋಗ್ಯೋಪನಿಷತ್ತು ಪರಬ್ರಹ್ಮನನ್ನು "ಸ್ವೇಮಹಿಮ್ನಿಪ್ರತಿಷ್ಠಿತಃ" ಎಂದು ಪ್ರತಿಪಾದಿಸಿದೆ.

**ತಾಪತ್ರಯವಿನಿರ್ಮುಕ್ತೋದೇಹತ್ರಯವಿಲಕ್ಷಣಃ ।**
**ಅವಸ್ಥಾತ್ರಯಸಾಕ್ಷ್ಯಸ್ಮಿಚಾಹಮೇವಾಹಮವ್ಯಯಃ ॥16॥**

**ಅನುವಾದ :** ನಾನು ತಾಪತ್ರಯಗಳಿಂದಮುಕ್ತನಾಗಿರುವೆನು. ನಾನು ಮೂರು ದೇಹಗಳಿಂದವುುಕ್ತನಾಗಿದ್ದುವುೂರು ಅವಸ್ಥೆಗಳಸಾಕ್ಷಿಯಾಗಿರುವೆನು.

**ವಿವರಣೆ :** ಈ ಸಂಸಾರದಲ್ಲಿ ತಾಪತ್ರಯಗಳು ಇವೆ ಎನ್ನುವುದು ಲೋಕದಲ್ಲಿ ಸಾಮಾನ್ಯವಾಗಿ ಕೇಳಿಬರುವ ಮಾತು. ತಾಪ ಎಂದರೆ ಬಿಸಿ. ಸಂಸಾರದ ದುಃಖಗಳು ನಮ್ಮ ತಲೆಯನ್ನು ಬಿಸಿ ಮಾಡುವುದರಿಂದ ಅವುಗಳನ್ನೂ ತಾಪ ಎನ್ನುವ ರೂಡಿ ಇದೆ. ತಾಪತ್ರಯ ಎಂದರೆ ಮೂರು ತಾಪಗಳು: ಆಧ್ಯಾತ್ಮಿಕ, ಆಧಿಭೌತಿಕ ಹಾಗೂ ಆಧಿದೈವಿಕ ಎನ್ನುವ ತಾಪಗಳು. ನಮ್ಮ ಶರೀರದಲ್ಲಿ ಉಟಾಗುವ ರೋಗಾದಿಗಳು ಆಧ್ಯಾತ್ಮಿಕ ತಾಪಗಳು. ಬೇರೆ ಮನುಷ್ಯರು ಹಾಗೂ ಹುಲಿ ಮುಂತಾದಪ್ರಾಣಿಗಳಿಂದ ನಮಗೆ ಉಂಟಾಗುವ ತೊಂದರೆಗಳನ್ನು ಆಧಿಭೌತಿಕ ತಾಪ ಎನ್ನುವರು.ಆಧಿದೈವಿಕ ತಾಪ ಎಂದರೆ ದೈವದಿಂದ ಉಂಟಾಗುವ ಅತಿವೃಷ್ಟಿ ಅನಾವೃಷ್ಟಿ ಇತ್ಯಾದಿ ಪೀಡೆಗಳು. ಸಮಸ್ತ ಜೀವರಾಶಿಯೂ ಈ ಮೂರು ರೀತಿಯ ತಾಪಗಳಿಂದ ನಿರಂತರ ಬಳಲುತ್ತಿರುತ್ತದೆ. ಆದರೆ ಈ ತಾಪಗಳುಯಾವುದೇ ವಿಕಾರಗಳಿಲ್ಲದ ಆತ್ಮನಲ್ಲಿಯಾವುದೇ ದುಃಖವನ್ನೂ ಉಂಟುಮಾಡಲಾರವು. ಆತ್ಮನು ಈ ತಾಪಗಳನ್ನು ಮೀರಿರುವನು. ಹಾಗಾಗಿ ಆತ್ಮನು ನಿತ್ಯ ಮುಕ್ತಸ್ವರೂಪನು. ತಾಪತ್ರಯಗಳು ಶರೀರ ಹಾಗೂ ಮನಸ್ಸಿನಲ್ಲಿ ವಿಕಾರಗಳನ್ನು ಉಂಟುಮಾಡುವವು. ನನ್ನ ಸ್ವರೂಪವನ್ನು ತಾಪತ್ರಯಗಳು ಸ್ಪರ್ಶಿಸಲಾರವು ಎಂದು ಬ್ರಹ್ಮಜ್ಞಾನಿಯಾದವನು ತಿಳಿಯುವನು.

ಸ್ಥೂಲಶರೀರ, ಸೂಕ್ಷ್ಮಶರೀರ ಹಾಗೂ ಕಾರಣಶರೀರ ಎಂದು ಮೂರು ಶರೀರಗಳು ಅಥವಾ ದೇಹಗಳು ವೇದಾಂತಶಾಸ್ತ್ರದಲ್ಲಿ ಪ್ರಸಿದ್ಧವಾಗಿವೆ. ಈ ಮೂರು ಶರೀರಗಳು ಪರಿಚ್ಛಿನ್ನವಾಗಿರುವವು. ಆತ್ಮನು ಈ ಮೂರು ಶರೀರಗಳನ್ನು ಮೀರಿದವನು. ಹಾಗಾಗಿ ಆತ್ಮನು ಈ ಶರೀರಗಳ ಪರಿಚ್ಛೇದಗಳಿಂದ ಪರಿಚ್ಛಿನ್ನನಾಗುವುದಿಲ್ಲ ಹಾಗೂ ಶರೀರಗಳ ವಿಕಾರಗಳಿಂದ ವಿಕೃತನಾಗುವುದಿಲ್ಲ. ಆತ್ಮನುಜಾಗ್ರತ್, ಸ್ವಪ್ನ ಹಾಗೂ ಸುಷುಪ್ತಿ ಎನ್ನುವ ಮೂರು ಅವಸ್ಥೆಗಳ ಸಾಕ್ಷಿಯಾಗಿರುವನ. ಹಾಗಾಗಿ ಆತ್ಮನು ಮೂರು ಅವಸ್ಥೆಗಳನ್ನು ಮೀರಿರುವನು. ಮೂರು ಶರೀರಗಳು ಹಾಗೂ ಎಲ್ಲ ಬಾಹ್ಯ ವಸ್ತುಗಳ ಅನುಭವಗಳು ಈ ಮೂರು ಅವಸ್ಥೆಗಳಲ್ಲಿ ಅಂತರ್ಗತವಾಗಿವೆ. ಅವಸ್ಥಾತ್ರಯಗಳ ಸಾಕ್ಷಿಯಾದ್ದರಿಂದ ಆತ್ಮನು ಅವಸ್ಥೆಗಳಲ್ಲಿ ಉಂಟಾಗುವ ಅನುಭವಗಳಿಂದ ವಿಕೃತನಾಗುವುದಿಲ್ಲ.


**ಬ್ರಹ್ಮ ಸಂಸತ್**

**ಆರ್ಷಶಿಕ್ಷಣ ಶಿಬಿರ – 2024**

ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ವೇದ, ಸ್ತೋತ್ರ, ಸಂಸ್ಕೃತ, ಸಂಸ್ಕೃತಿ ಹಾಗು ಸರಳವಾದ ಭಾರತೀಯ ಜೀವನ ಪದ್ಧತಿಯ ಪರಿಚಯಕ್ಕಾಗಿ ಒಂದು ಆವಾಸ ಶಿಬಿರ

**ವಯೋಮಿತಿ: 10 ರಿಂದ 16 ವರ್ಷ**

ವಿವಿಧ ಸ್ಥಳಗಳಲ್ಲಿ ಶಿಬಿರಗಳು – ನಿಮ್ಮ ಸೌಲಭ್ಯಕ್ಕೆ ತಕ್ಕಂತೆ ಭಾಗವಹಿಸಬಹುದಾಗಿದೆ

| | |
|---|---|
| ಶಿಬಿರ 1 : 12–04–2024 ರಿಂದ 28–04–2024<br>ಒಟ್ಟು 16 ದಿನಗಳು, ಶುಲ್ಕ ₹ 4000/–<br>ಸ್ಥಳ : ಭಾರತೀ ಯೋಗಧಾಮ, ಮೈಸೂರು<br>9845024038, 9448784620 | ಶಿಬಿರ 2 : 02–05–2024 ರಿಂದ 10–05–2024<br>ಒಟ್ಟು 09 ದಿನಗಳು.<br>ಸ್ಥಳ : ಶ್ರೀ ಶ್ರೀ ಅವಧೂತ ಸದ್ಗುರು ನರಸಾರ್ಯರ ಅಧಿಷ್ಠಾನ ಹಾರನಹಳ್ಳಿ, ಅರಸೀಕೆರೆ ತಾಲ್ಲೂಕು<br>9902438531, 7483160051 |
| ಶಿಬಿರ 3 : 13–05–2024 ರಿಂದ 21–05–2024<br>ಸ್ಥಳ : ಶ್ರೀ ವರದಗಣಪತಿ ದೇವಸ್ಥಾನ, ಕೋಣಂದೂರು<br>ಒಟ್ಟು 09 ದಿನಗಳು<br>9148653118, 9480758857 | ಶಿಬಿರ 4 : 13–05–2024 ರಿಂದ 21–05–2024<br>ಸ್ಥಳ : ಶ್ರೀ ಸದ್ಗುರು ವಿದ್ಯಾನಿಕೇತನ, ಬಸರೀಕಟ್ಟೆ<br>ಒಟ್ಟು 09 ದಿನಗಳು<br>9448329924, 9448964366 |

**ಸಂದರ್ಶನದ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಶಿಬಿರದಲ್ಲಿ ಅವಕಾಶವನ್ನು ನೀಡಲಾಗುವುದು.**

**ಪ್ರತಿ ಶಿಬಿರದಲ್ಲೂ ಆಯ್ಕೆಯಾದ 80 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ**

# ಅಧ್ಯಕ್ಷರ ನುಡಿ



**ವಿಪ್ರಬಾಂಧವರಿಗೆ ಮಹಾಶಿವರಾತ್ರಿಯ ಹಾರ್ದಿಕ ಶುಭಾಶಯಗಳು,**

ಮಹಾಸಭೆಯು ಗಣೇಶಚತುರ್ಥಿ ಹಾಗು ಅನೇಕ ಹಬ್ಬಹರಿದಿನಗಳನ್ನು ಆಚರಿಸುತ್ತ ಬಂದಿರುವುದು ತಮಗೆಲ್ಲರಿಗೂ ತಿಳಿದ ವಿಷಯವೇ ಸರಿ, ಅದೇ ರೀತಿ ಕಳೆದ ಸಾಲಿನಿಂದ ಮಹಾಶಿವರಾತ್ರಿಯಂದು ನಾಲ್ಕು ಯಾಮದ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು, ಈ ಬಾರಿಯೂ ಕೂಡ ಕಳೆದಸಾಲಿನಂತೆ ದಿನಾಂಕ 08-03-2024 ರಂದು ಮಹಾಶಿವರಾತ್ರಿಯ ಪ್ರಯುಕ್ತ ಮಹಾಸಭೆಯ ಕೇಂದ್ರ ಕಛೇರಿ ಗಾಯತ್ರಿ ಭವನದಲ್ಲಿ ಸಾಯಂಕಾಲ ಆರುಗಂಟೆಯಿಂದ ಒಂಬತ್ತು ಗಂಟೆಯವರೆಗೆ ಮೊದಲನೇ ಯಾಮದ ಪೂಜಾ ಕಾರ್ಯಕ್ರಮಗಳು, ರಾತ್ರಿ ಒಂಬತ್ತು ಗಂಟೆಯಿಂದ ಹನ್ನೆರಡು ಗಂಟೆಯವರೆಗೆ ದ್ವಿತೀಯ ಯಾಮದ ಪೂಜಾ ಕಾರ್ಯಕ್ರಮಗಳು ರಾತ್ರಿ ಹನ್ನೆರಡು ಗಂಟೆಯಿಂದ ಮೂರು ಗಂಟೆಯವರೆಗೆ ತೃತೀಯ ಯಾಮದ ಪೂಜಾ ಕಾರ್ಯಕ್ರಮಗಳು, ಮೂರು ಗಂಟೆಯಿಂದ ಮುಂಜಾನೆ ಆರುಗಂಟೆಯವರೆಗೆ ಚತುರ್ಥ ಯಾಮದ ಪೂಜಾ ಕಾರ್ಯಕ್ರಮಗಳು ರಾತ್ರಿಯಿಡಿ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ, ಈ ನಿಟ್ಟಿನಲ್ಲಿ ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಭಕ್ತಿ ಭಾವದಿಂದ ಪಾಲ್ಗೊಂಡು ಆ ಮಹಾಶಿವನ ಕೃಪೆಗೆ ಪಾತ್ರರಾಗ ಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ತಮ್ಮೆಲ್ಲರ ಸತತ ಪ್ರಯತ್ನದ ಫಲವಾಗಿ ಮಹಾಸಭೆ ಇಂದು ಅತ್ಯಂತ ಸಂಘಟನಾತ್ಮಕವಾಗಿ ಬೆಳೆದು ನಿಂತಿದೆ, ಹಾಗು ಸಂಘಟನೆ ಜಿಲ್ಲೆ ಜಿಲ್ಲೆಗಳಲ್ಲಿ, ತಾಲೂಕುಗಳಲ್ಲಿ, ಹಳ್ಳಿಗಳಲ್ಲಿ ವ್ಯಾಪಕವಾಗಿ ಬಲಗೊಳ್ಳುತ್ತಿದೆ, ಇದು ಸಂಘಟನೆಯ ಮಹತ್ವವನ್ನು ಸಾರಿ ಹೇಳುತ್ತಿದೆ ಹಾಗು ವಿಪ್ರರಲ್ಲಿ ಸಂಘಟನೆಯ ಮಹತ್ವದ ಬಗ್ಗೆ ಆಲೋಚನೆ ಆರಂಭವಾಗಿರುವದರ ಕುರುಹು ಅಂದರೆ ತಪ್ಪಿಲ್ಲ ಹಾಗೆಂದು ಸಂತೋಷಪಟ್ಟುಕೊಂಡು ಸುಮ್ಮನಿದ್ದರೆ ಸಾಲದು ಈ ಸಂಘಟನೆ ಇನ್ನಷ್ಟು ಪಕ್ವವಾಗಿ ಹೆಚ್ಚು ಹೆಚ್ಚು ಶಕ್ತವಾಗಬೇಕು. ಬದಲಾದ ಸನ್ನಿವೇಶದಲ್ಲಿ ಪೌರೋಹಿತ್ಯದಿಂದ ಅಥವಾ ಪೌರೋಹಿತ್ಯದೊಂದಿಗೆ ಕೃಷಿಯತ್ತ ವಿಪ್ರ ಸಮಾಜ ಮುಖ ಮಾಡಿತು ತದನಂತರ ಆಯಾ ಕಾಲ ಘಟ್ಟದಲ್ಲಿ ವಿಪ್ರ ಸಮಾಜ ದೇವೋಪಾಸನೆಯೊಂದಿಗೆ ಆಯಾ ಕಾಲದ ಹಲವು ವೃತ್ತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ನಿದರ್ಶನಗಳು ನಮ್ಮ ಕಣ್ಮುಂದೆ ಇದೆ ಇದು ವಿಪ್ರರಲ್ಲಿರುವ ಆತ್ಮವಿಶ್ವಾಸವನ್ನು ತೋರಿಸುತ್ತದೆ ಆದರೆ ಹಲವಾರು ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ನಗರಗಳಲ್ಲಿ ಇಂದಿಗೂ ಪುರದಹಿತವನ್ನು ಬಯಸುತ್ತ ಪೌರೋಹಿತ್ಯವನ್ನೇ ನೆಚ್ಚಿಕೊಂಡು ದೇವೋಪಾಸನೆಯೇ ಬದುಕಿನ ಧರ್ಮ ಎಂದು ಜೀವನಸಾಗಿಸುತ್ತಿರುವ ಹಲವಾರು ಕುಟುಂಬಗಳಿವೆ ಇದು ನಮ್ಮೆಲರ ಭಾಗ್ಯವು ಹೌದು ಏಕೆಂದರೆ ನಮ್ಮ ಮುಂದಿನ ತಲೆಮಾರಿಗೆ ಯಾವುದು ಸರಿ ಯಾವುದು ತಪ್ಪು ವೈದಿಕ ಪದ್ದತಿಗಳ ಆಚಾರ ವಿಚಾರಗಳು ತಿಳಿಸುವವರೇ ಇಲ್ಲವೆಂದಾದಲ್ಲಿ ನಾವೆಷ್ಟು ಪರಿತಪಿಸ ಬೇಕಾಗಬಹುದು ಎಂದು ಊಹಿಸುವುದು ಅಸಾಧ್ಯ. ಆಧುನಿಕತೆ ಹಣ, ಅಂತಸ್ತು, ಕಾರು-ಬಂಗಲೆ ಇಂತಹ ಭೌತಿಕ ಅಂಶಗಳೇ ಮೇಲು ಎಂಬ ಭ್ರಮಾಲೋಕವನ್ನು ಸೃಷ್ಟಿಸುತ್ತ ಸಾಗುತ್ತದೆ ಆದರೆ ನೆಮ್ಮದಿ ಎಂಬ ವಿಷಯ ಬಂದಾಗ ನಾವುಗಳು ಮೊರೆಯಿಡುವುದು ಆ ಭಗವಂತನಲ್ಲಿ ಆದರೆ ಇಂದು ಸಮುದಾಯ ಆ ದೇವರೊಡನೆ ಭಂದ ಬೆಸೆಯುವ ನಿತ್ಯಕರ್ಮಗಳತ್ತ ಅದೇಕೋ ಅಷ್ಟಾಗಿ ಗಮನ ಕೊಡುತ್ತಿಲ್ಲ ಈ ಪ್ರವೃತ್ತಿ ಬದಲಾಗಬೇಕು ಹಾಗು ಕಾಲದಿಂದ ಕಾಲಕ್ಕೆ ವೈದಿಕ ನಿಯಮಗಳನ್ನು ಕಾಪಿಟ್ಟುಕೊಂಡು ಮುಂದಿನ ಪೀಳಿಗೆಗೆ ದಾರಿದೀವಿಗೆಯಾಗುವಂತೆ ವೈದಿಕ ಪರಂಪರೆಯನ್ನೇ ಬದುಕಿನ ಧರ್ಮ ಎಂದು ಪೌರೋಹಿತ್ಯವನ್ನೇ ನೆಚ್ಚಿಕೊಂಡಿರುವ ಪುರೋಹಿತ ವರ್ಗದ ಬಗ್ಗೆ ವೈದಿಕ ಮಾರ್ಗದ ಬಗ್ಗೆ ನಮ್ಮಲಿ ನಮ್ಮ ಮುಂದಿನ ಪೀಳಿಗೆಯಲ್ಲಿ ಹೆಚ್ಚಿನ ಕಾಳಜಿ ಮೂಡುವಂತೆ ಮಾಡಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯ, ನಮ್ಮ ಪುರೋಹಿತ ವರ್ಗದ ಬಗ್ಗೆ ನಮ್ಮೆಲ್ಲರಲ್ಲೂ ಹೆಚ್ಚಿನ ಗೌರವವಿದೆ, ಆದರೆ ಕಾಳಜಿ ಇದೆಯೇ ಎಂದು ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ, ಈ ಕಾಳಜಿ ಎಂಬ ಪದದ ಹಿಂದೆ ಹಲವು ಅರ್ಥಗಳಿವೆ ನೀವೆಲ್ಲರೂ ಈ ವಿಷಯನ್ನು ಸುಲಭವಾಗಿ ಗ್ರಹಿಸಿರುತ್ತೀರೆಂಬ ನಂಬಿಕೆಯು ಇದೆ. ಈ ನಿಟ್ಟಿನಲ್ಲಿ ಮೈಸೂರಿನ ವೇದಶಾಸ್ತ್ರ ಪೋಷಿಣಿ ಸಭಾ ಕಾಲದಿಂದ ಕಾಲಕ್ಕೆ ಹಮ್ಮಿಕೊಳ್ಳುತ್ತಿರುವ ವೈದಿಕ ಮಾರ್ಗವನ್ನು ರಕ್ಷಿಸುವ ಹಾಗು ವೈದಿಕರನ್ನು ಗೌರವಿಸುವ ಕಾರ್ಯಕ್ರಮ ನಿಜಕ್ಕೂ ಶ್ಲಾಘನೀಯವಾದುದು ಈ ರೀತಿ ಯಕಾರ್ಯಕ್ರಮಗಳು ನಾಡಿನಾದ್ಯಂತ ಅಲ್ಲಲಿ ಜರುಗಬೇಕು ಆಮೂಲಕ ದೇಶದಲ್ಲಿ ಧರ್ಮ ಉಳಿಸುವ ಕಾಯಕದಲ್ಲಿ ತೊಡಗಿರುವ ವೈದಿಕರಿಗೆ ವೈದಿಕ ಪರಂಪರೆಗೆ ಪ್ರೋತ್ಸಾಹದಾಯಕ ವಾತಾವರಣ ಕಲ್ಪಿಸಿ ಕೊಡುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು.

ಚುನಾವಣೆಯ ಹೊಸ್ತಿಲಲ್ಲಿ ಜಾತಿಗಣತಿಯ ಕೂಗು ಮತ್ತೆ ಕೇಳಿಬರುತ್ತಿದೆ ಮಹಾಸಭೆ ಜಾತಿಗಣತಿ ವರದಿ ವಿರೋಧಿಸಿ ಮೂರು ತಿಂಗಳ ಹಿಂದೆಯೇ ಸರ್ಕಾರಕ್ಕೆ ಪತ್ರಬರೆದಿತ್ತು ಹಾಗು ಸರ್ಕಾರದ ನಡೆಯನ್ನು ಮಹಾಸಭಾ ಸೂಕ್ಷವಾಗಿ ಗಮನಿಸುತ್ತಿದೆ ಈ ಸಂಬಂಧವಾಗಿ ಮುಂದಿನ ದಿನಗಳಲ್ಲಿ ಸಮುದಾಯದ ನಿಲುವು ಏನಾಗಿರಬೇಕೆಂದು ಅಭಿಪ್ರಾಯವನ್ನು ಕಲೆಹಾಕುತ್ತಿದೆ ಅಷ್ಟೇಅಲ್ಲ ವರದಿ ಕುರಿತು ಸರ್ಕಾರ ಮತ್ತೊಮ್ಮೆ ಅಮೂಲಾಗ್ರವಾಗಿ ಪರಾಮರ್ಶಿಸಬೇಕು ಎಂಬುದು ಮಹಾಸಭೆ ಒತ್ತಾಯಿಸಿದೆ.

ಅದಲ್ಲದೆ ಕೆಲವು ತಿಂಗಳುಗಳಿಂದ ನನೆಗುದಿಗೆ ಬಿದ್ದಿದ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರ ನೇಮಕವಾಗಿದೆ, ಅನೇಕ ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ಸೇವೆಸಲ್ಲಿಸಿರುವ ಮತ್ತು ಪಕ್ಷದ ಹಿರಿಯರಾಗಿರುವ ಹಾಗೂ ಬ್ರಾಹ್ಮಣ ಸಂಘಟನೆಯ ಮಂಚೂಣಿಯಲ್ಲಿರುವ ಶ್ರೀ ಅಸಗೋಡು ಜಯಸಿಂಹ ಅವರನ್ನು ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿರುವುದು ನಿಜಕ್ಕೂ ಸಂತಸದ ವಿಷಯ, ಮುಂದಿನ ದಿನಗಳಲ್ಲಿ ಅಭಿವೃದ್ಧಿ ಮಂಡಳಿ ಶ್ರೀ ಅಸಗೋಡು ಜಯಸಿಂಹ ಅವರ ನೇತೃತ್ವದಲ್ಲಿ ವಿಪ್ರ ಸಮುದಾಯದ ಏಳಿಗೆಗೆ ನೂತನವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲ್ಲಿ ಆ ಮೂಲಕ ವಿಪ್ರ ಸಮುದಾಯದ ಶ್ರೇಯೋಭಿವೃದ್ಧಿಯಾಗಲಿ ಎಂದು ಆಶಿಸುತ್ತಾ ಮುಂದಿನ ಸಂಚಿಕೆಯಲ್ಲಿ ಇನ್ನಷ್ಟು ವಿವರಗಳೊಂದಿಗೆ ಭೇಟಿಯಾಗೋಣ.

**ಅಶೋಕ ಹಾರನಹಳ್ಳಿ,**
ಅಧ್ಯಕ್ಷರು,



# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ, ನಮ್ಮ ದೇಶಾದ್ಯಂತ ಇರುವ ಎಲ್ಲ ಭಾರತೀಯರ, ವಿಶ್ವದ 100 ದೇಶಗಳಲ್ಲಿರುವ ಎಲ್ಲ ಹಿಂದೂಗಳ ದೀರ್ಘಕಾಲದ ಕನಸು ನನಸಾಯಿತು, ನಮ್ಮ ಪ್ರಧಾನ ಮಂತ್ರಿ ಶ್ರೀ ನರೇಂದ್ರಮೋದಿಯವರು, ಉತ್ತರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥ್ ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ಜನವರಿ 22, 2024 ರಂದು ಮೃಗಶಿರಾ ನಕ್ಷತ್ರದ ಅಭಿಜಿತ್ ಮುಹೂರ್ತದಲ್ಲಿ, ಮಧ್ಯಾಹ್ನ 12.29 ರಿಂದ 12.30ರ ಒಳಗೆ ಅಯೋಧ್ಯೆಯಲ್ಲಿ ಶ್ರೀ ರಾಮಲಲ್ಲಾನ ವಿಗ್ರಹ ಪ್ರತಿಷ್ಠಾಪನೆ ಮಾಡಿದರು. 51 ಇಂಚಿನ ಕರ್ನಾಟಕದ ಶಿಲೆಯ ಈ ವಿಗ್ರಹ ಪ್ರತಿಷ್ಠಾಪನೆಯಾಗಲು ಭಾರತೀಯರೆಲ್ಲರೂ 500ಕ್ಕೂ ಹೆಚ್ಚು ವರ್ಷ ಕಾಯಬೇಕಾಯಿತು. ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ಪ್ರಭುವಿನ ಬಾಲವಿಗ್ರಹ ಅಲ್ಲಿ ಕಂಗೊಳಿಸುತ್ತಿದ್ದು ಈ ಘಟನೆ ಭಾರತದ ಇತಿಹಾಸ ಪುಟದಲ್ಲಿ ಸುವರ್ಣಾಕ್ಷರಗಳಲ್ಲಿ ಸೇರಿಹೋಗಿದೆ. ಈ ಮಂದಿರ ಸ್ಥಾಪನೆ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆದೇಶ ಅನ್ವಯ ನಿರ್ಮಾಣಗೊಂಡಿರುವುದು ಒಂದು ಹೆಗ್ಗಳಿಕೆ. ಶ್ರೀ ರಾಮನು ಆ ತ್ರೇತಾಯುಗದಲ್ಲಿ ಹುಟ್ಟಿ–ಬೆಳೆದ ಸ್ಥಳದಲ್ಲೇ ಅವನಿಗೆ ದಿವ್ಯ – ಭವ್ಯ ದೇಗುಲ ನಿರ್ಮಾಣವಾಗಿರುವುದು, ಈ ಹಂತದಲ್ಲಿ ಯಾವ ಸಂಘರ್ಷ, ಭಯೋತ್ಪಾದನೆ ಭಯವಿಲ್ಲದೇ, ಹುನ್ನಾರಗಳಿಲ್ಲದೇ ಕೇವಲ ಅಹಿಂಸಾತ್ಮಕ ಮಾರ್ಗದ ಮೂಲಕ ನಿರ್ಮಾಣವಾಗಿರುವುದು ಭಾರತೀಯರೆಲ್ಲರ ಸ್ಥಿರ ಮನಸ್ಥಿತಿ, ತಾಳ್ಮೆ, ಸಹಿಷ್ಣುತೆಗಳನ್ನು ಸೂಚಿಸುತ್ತದೆ.

ಈಗ ದೇಶದ ಎಲ್ಲೆಲ್ಲೂ ರಾಮ ರಾಮ ಎಂಬ ತಾರಕ ಮಂತ್ರದ ಜಪ ಮೊಳಗುತ್ತಿದೆ. ನಮ್ಮ ಮಹಾಸಭೆಯ ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಕ್ರಿಯಾಶೀಲ ಮಾರ್ಗದರ್ಶನದಲ್ಲಿ ಎಲ್ಲ ಪದಾಧಿಕಾರಿಗಳು, ಬ್ರಾಹ್ಮಣರು, ರಾಜ್ಯಾದ್ಯಂತ ಲಕ್ಷಾಂತರ ರಾಮ ತಾರಕ ಜಪಗಳನ್ನು ಪೂರೈಸುವಂತೆ ಮಾಡಿ ಹೋಮಗಳಲ್ಲಿ ಭಾಗವಹಿಸಿ, ಪ್ರೇರೇಪಿಸಿದ್ದು, ಹಾಗೆಯೇ ದೇಶಾದ್ಯಾಂತ ಇಂತಹ ಧಾರ್ಮಿಕ ಚಟುವಟಿಕೆಗಳು ಒಂದು ವರ್ಷಕಾಲ ನಡೆದು 'ಆಧ್ಯಾತ್ಮಿಕ ಅಲೆ' ಸ್ಪಂದನ ನಿರ್ಮಾಣವಾಗಿದೆ ಎಂದರೆ ಬಹುಶಃ ತಪ್ಪಾಗಲಾರದು. ಅಂತೆಯೇ ಈ ಅಯೋಧ್ಯಾ ರಾಮ ಪ್ರತಿಷ್ಠಾಪನಾ ಸಂದರ್ಭದಲ್ಲಿ ನಮ್ಮ ಅಧ್ಯಕ್ಷರು ಧರ್ಮ ಪತ್ನಿಯೊಂದಿಗೆ ಆಹ್ವಾನಿತರಾಗಿ ಭಾಗವಹಿಸಿದ್ದು ಮತ್ತೊಂದು ವಿಶೇಷ ಸಂಗತಿ.

ಒಂದು ಆಧ್ಯಾತ್ಮಿಕ ವ್ಯಾಖ್ಯಾನದಂತೆ ಭಾರತವು ಸ್ವಯಂಪ್ರಕಾಶದೇಶ, ಸಂಸ್ಕೃತದಲ್ಲಿ 'ಭಾ' ಎಂದರೆ ಹೊಳೆಯುವುದು, ಪ್ರಕಾಶಿಸುವುದು ಎಂದರ್ಥ. 'ರತ'ವೆಂದರೆ ನಿಮಗ್ನವಾಗಿರುವುದು. ಭಾರತವೆಂದರೆ ಜ್ಞಾನ ಪಡೆಯುವುದರಲ್ಲಿ ಪ್ರಖ್ಯಾತ ಹೊಂದುವುದರಲ್ಲಿ ಮಗ್ನವಾಗಿರುವುದು ಎಂದರ್ಥ. ಹೀಗಾಗಿ ಸಾವಿರಾರು ವರ್ಷಗಳಿಂದ ಈ ನಾಡು ಜ್ಞಾನ ಅರಸುವವರ ಭೂಮಿ. ಅಸಾಮಾನ್ಯ ಸಾಧು–ಸಂತರ ನೆಲಬೀಡು, ಭಾರತವು ನಮ್ಮೆಲ್ಲರ ದೇಹವಿದ್ದಂತೆ, ಈ ದೇಶದ ಹೃದಯ ಸ್ಥಾನವೇ ಅಯೋಧ್ಯೆ. ಎಲ್ಲರಿಗೂ ಆನಂದವನ್ನುಂಟು ಮಾಡುವ, ಎಲ್ಲರ ಹೃದಯದಲ್ಲಿ ನೆಲಸಿರುವ ರಾಮನು ಆನಂದಸ್ವರೂಪಿ, ಸೀತೆಯು ತ್ಯಾಗ, ಶುದ್ಧತೆಯ ಪ್ರತಿ ಮೂರ್ತಿ. ರಾಮನ ವನವಾಸದಲ್ಲಿ ಅಯೋಧ್ಯೆಯನ್ನು ಪಾಲಿಸಿದ ಭರತನ ತ್ಯಾಗ ಅನ್ಯಾದೃಶ, ಸೀತಾರಾಮರ ಸಂಗಮವು ಜೀವ–ಪರಬ್ರಹ್ಮನ ಐಕ್ಯತೆಯನ್ನು ಸಾರುತ್ತದೆ.


ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ದ್ವಾರಕೆಯಿಂದ ಅರುಣಾಚಲ ಪ್ರದೇಶದವರೆಗೆ ದೇಶ ರಾಮಮಯವಾಗಿದ್ದು ಭಾವಪರವಶವಾಗಿದ್ದು ಸೋಜಿಗ. ಕೇವಲ ಮೂರು ವರ್ಷಗಳಲ್ಲಿ ಆದ ರಾಮ ಮಂದಿರ ನಿರ್ಮಾಣ ಇಡೀ ಜಗತ್ತನ್ನು ಒಂದುಗೂಡಿಸುವ ಕೆಲಸ ಮಾಡಿದೆ. ರಾಮ ರಾಜ್ಯದ ಕನಸು ನನಸಾಗುತ್ತಿದೆ. ಎಪ್ಪತ್ತೈದು ವರ್ಷಗಳ ಹಿಂದೆ ಬ್ರಿಟಿಷ್ ತತ್ವಶಾಸ್ತ್ರಜ್ಞ, ಇತಿಹಾಸಜ್ಞ ಆರ್ನಾಲ್ಡ್ ಟಾಯನ್‌ಬಿ ಹೇಳಿದ ಮಾತಿದು: 'ಭಾರತವು ಈ ಶತಮಾನದ ಕೊನೆಯಲ್ಲಿ ಜಗತ್ತನ್ನು ಆಧ್ಯಾತ್ಮಿಕತೆಯ ಮೂಲಕ ವಶಪಡಿಸಿಕೊಳ್ಳುತ್ತದೆ, ರಾಜಕೀಯವಾಗಲ್ಲ, ಸಾಮಾಜಿಕವಾಗಲ್ಲ', ಆ ಕಾಲ ಸನ್ನಿಹಿತವಾಗಿ ಫೆಬ್ರವರಿ 14 ರಂದು ಮುಸ್ಲಿಂ ರಾಷ್ಟ್ರ ಅಬುಧಾಬಿಯಲ್ಲಿ ಸ್ವಾಮಿ ನಾರಾಯಣ ಮಂದಿರ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಲೋಕಾರ್ಪಣೆಗೊಂಡಿತು. ಸ್ವಾಮಿ ನಾರಾಯಣ್ ಅಭಿಯಾನವು ಇಂದು ವಿಶ್ವದ್ಯಾಂತ 1000 ದೇವಾಲಯಗಳನ್ನು ನಿರ್ಮಿಸಿದ್ದು ಸನಾತನ ಹಿಂದೂ ಮತಧರ್ಮ ಪುನರುಜ್ಜೀವನವಾಗುತ್ತೀದೆ. ಉತ್ತರ ಅಮೆರಿಕಾದಲ್ಲಿ 400 ಭಾರತೀಯ ದೇಗುಲಗಳಿದ್ದು ಸಾವಿರಾರು ಜನರು ಭೇಟಿ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂದೆ ಐರೋಪ್ಯ ಸಾಂಸ್ಕೃತಿಕ ಪುನರುತ್ಥಾನವಾದಂತೆ ಭಾರತೀಯ ಸಾಂಸ್ಕೃತಿಕ ಪುನರುತ್ಥಾನ'ವಾಗಲಿದ್ದು, ಭಾರತವು ವಿಶ್ವಗುರುವಾಗಿ ಪ್ರಕಾಶಿಸುವುದರಲ್ಲಿ ಸಂದೇಹವಿಲ್ಲ. ವಿಶ್ವದ ಬೇರೆರಾಷ್ಟ್ರಗಳಲ್ಲಿ ನಿರ್ಮಾಣವಾಗಿರುವ, ಆಗುತ್ತಲಿರುವ ಭಾರತೀಯ ದೇವಾಲಯಗಳಿಂದಾಗಿ ಅಂತಾರಾಷ್ಟ್ರೀಯ ಸಾಂಸ್ಕೃತಿಕ, ರಾಜತಾಂತ್ರಿಕ ಸಂಬಂಧಗಳು ದೃಢವಾಗಿ ಜಾಗತಿಕ, ಶಾಂತಿ, ಸೌಹಾರ್ದತೆ ಮೂಡಲಿದೆ.

ಈ ಅಯೋಧ್ಯೆಯ ರಾಮ ಮಂದಿರವು ಮಾದರಿಯಾಗಿ, ಆಕರ್ಷಣೆಯ ಸೆಲೆಯಾಗಿ ಭವಿಷ್ಯದಲ್ಲಿ ಅಂತಾರಾಷ್ಟ್ರೀಯ ಆಧ್ಯಾತ್ಮಿಕ, ಸಾಂಸ್ಕೃತಿಕ ಕೇಂದ್ರವಾಗಿ **'ವಸುಧೈವ ಕುಟುಂಬಕಂ'** ಎಂಬ ಭಾರತೀಯರ ತತ್ವವನ್ನು ಸಾಕಾರಗೊಳಿಸಲಿ ಎಂದು ಆಶಿಸೋಣ, ಸತ್ಯ, ನ್ಯಾಯ, ಧರ್ಮಗಳ ಮೂರ್ತಿವೆತ್ತ ಸ್ವರೂಪನಾದ, ಪರಿಪೂರ್ಣನಾದ, ಆದರ್ಶಪುರುಷ, ಪ್ರಾಯೋಗಿಕ ಪುರುಷ ರಾಮನ ಸದ್ಗುಣಗಳನ್ನು ಜೀವನದಲ್ಲಿ ನಾವೆಲ್ಲರೂ ಅಳವಡಿಸಿಕೊಳ್ಳೋಣ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕರು

# ಸ್ವರ್ಣವಲ್ಲಿಯಲ್ಲಿ ಅವಿಸ್ಮರಣೀಯ ಶಿಷ್ಯ ಸ್ವೀಕಾರ ಮಹೋತ್ಸವ
## ಗುರುಗಳ ಸಂಕಲ್ಪ ಶಿಷ್ಯರ ಶ್ರಮದಿಂದ ಸಾಕಾರ





ತಾಲ್ಲೂಕಿನ ಸ್ವರ್ಣವಲ್ಲೀ ಮಠದಲ್ಲಿ ಐದು ದಿನಗಳ ಕಾಲ ನಡೆದ ಶಿಷ್ಯ ಸ್ವೀಕಾರ ಮಹೋತ್ಸವ ಮಠದ ಚರಿತ್ರೆಯಲ್ಲಿ ಮಾತ್ರವಲ್ಲ, ಜನಮಾನಸದಲ್ಲಿ ಎಂದೂ ಅಳಿಸದಂತೆ ದಾಖಲಾಯಿತು. ಪರಮಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳಿಗೆ ಶಿಷ್ಯರಾಗಿ, ಮಠದ ಭವಿಷ್ಯದ ಉತ್ತರಾಧಿಕಾರಿಯಾಗಿ ಶ್ರೀ ಆನಂದ ಬೋಧೇಂದ್ರ ಸರಸ್ವತೀ ಮಹಾಸ್ವಾಮಿಗಳಾಗಿ ಸನ್ಯಾಸ ಸ್ವೀಕರಿಸಿದ ಕ್ಷಣ ಅನಂದಭಾಷ್ಪ ಸಮ್ಮಿಳಿತಗೊಂಡ ಭಕ್ತಿ–ಭಾವೋದ್ವೇಗದ ಪ್ರವಾಹವಾಯಿತು.

ಐದು ದಿನಗಳ ಕಾರ್ಯಕ್ರಮದಲ್ಲಿ ಸುಮಾರು 60 ಸಾವಿರಕ್ಕೂ ಅಧಿಕ ಶಿಷ್ಯ ಭಕ್ತರು ಬಂದು ಹೋಗಿದ್ದು, 45 ಸಾವಿರಕ್ಕೂ ಅಧಿಕ ಜನರು ಊಟೋಪಚಾರ ಸ್ವೀಕರಿಸಿದ್ದು ದಾಖಲೆಯಾಯಿತು. ಮಠಗಳ ಮಹತ್ವ, ಆಧ್ಯಾತ್ಮದ ಮೇಲಿನ ನಂಬಿಕೆಗಳನ್ನು ಭಕ್ತರೇ ಸಾಬೀತುಗೊಳಿಸಿದರು.

ಪೂರ್ವ ಸಿದ್ಧತೆ ಹಾಗೂ ಉತ್ಸವದ ಆರು ದಿನ ರಾತ್ರಿ ಹಗಲು ಮಠದ ಅವಾರದಲ್ಲಿ ಜನರ ಜಮಾವಣೆ ಕಡಿತವೇ ಆಗಿರಲಿಲ್ಲ. ರಾತ್ರಿಯೂ ಹಗಲಾಗಿತ್ತು. ಕಾರ್ಯಕರ್ತರು, ಪ್ರಮುಖರು ಮರುದಿನದ ಸಿದ್ಧತೆಗೆ ರಾತ್ರಿ 2 ಗಂಟೆ ತನಕ ಕೆಲಸ ಮಾಡುತ್ತಿದ್ದರೆ, 2–3 ಂಟೆಗೆ ಋತ್ವಿಜರು ಕೆಲ ಸಮಯದ ವಿಶ್ರಾಂತಿಯಿಂದ ಎದ್ದು ಅನುಷ್ಠಾನದ ಸಿದ್ಧತೆಗೆ ಕೆಲಸ ಆರಂಭಿಸುತ್ತಿದ್ದರು. ಬೆಳಿಗ್ಗೆ 8 ಗಂಟೆ ವೇಳೆಗೆ ಮಠಕ್ಕೆ ಬಕ್ತರು, ಸೇವಾಕರ್ತರು ಆಗಮಿಸಲು ಮುಂದಾಗಿದ್ದರು.

ಐದೂ ದಿನಗಳ ಕಾಲ 600ಕ್ಕೂ ಅಧಿಕ ಕಾರ್ಯಕರ್ತರು ಎಲ್ಲಾ ವಿಭಾಗದಲ್ಲಿ ನಿರಂತರ ಕಾರ್ಯ ಮಾಡಿದರೆ ಕೊನೇ ಎರಡು ದಿನ ಮೂರು ಸಾವಿರಕ್ಕೂ ಅಧಿಕ ಕಾರ್ಯಕರ್ತರು ಬೆರಗು ಮೂಡಿಸುವಂತೆ ಕೆಲಸ ಮಾಡಿದರು. ಎಲ್ಲೂ ಯಾವುದೇ ಲೋಪ ಆಗದಂತೆ ದುಡಿದರು. ಪಾರ್ಕಿಂಗ್, ಊಟೋಚಚಾರ, ರಕ್ಷಣೆ, ಮೂಲಭೂತ ಸೌಲಭ್ಯ, ವೇದಿಕೆ ಹೀಗೆ ಯಾವುದೇ ವಿಭಾಗದಲ್ಲೂ ಸಮಯ ಪಾಲನೆ, ಅಚ್ಚುಕಟ್ಟುತನ, ದೃಢವಾದ ವಿಶ್ವಾಸದ ಜೊತ ಸೇವಾ ಮನೋಭಾವನೆ ಸ್ಫುರಿಸುತ್ತಿತ್ತು.

ಸ್ವರ್ಣವಲ್ಲೀ ಮಠದ ಪರಮಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮೀಜಿ ಅವರು ಶಿಷ್ಯ ಸ್ವೀಕಾರ ಕುರಿತು ಪ್ರಕಟಿಸಿದಾಗ ಶಿಷ್ಯರಲ್ಲಿ ರೋಮಾಂಚನ ಮೂಡಿತು. ಸ್ವತಃ ಗುರುಗಳೂ ನಮಗೆ ಬ್ರಹ್ಮಾನಂದವಾಗಿದೆ ಎಂದಾಗ, ಶಿಷ್ಯ ಸ್ವೀಕಾರ ಮಹೋತ್ಸವ ಶಿಷ್ಯ ಭಕ್ತರ ಉತ್ಸಾಹ ಹೆಚ್ಚಿಸಿತ್ತು. ಇದೇ ಕಾರಣದಿಂದ ಗುರುಗಳು ಹೇಳಿದ ಸೂಚನೆಯನ್ನು ಆಜ್ಞೆಯಾಗಿಸಿಕೊಂಡರು. ಶಿರಸಾವಹಿಸಿ ಹಗಲಿರಳೂ ಕೆಲಸ ಮಾಡಿದರು. ನಿರಂತರ ಜನ ಸಂಪರ್ಕದಲ್ಲಿ ಇರದ ಶಿಷ್ಯರು, ದೊಡ್ಡ ಕಾರ್ಯಕ್ರಮದಲ್ಲಿ ಕೆಲಸ ಮಾಡಿ ಅರಿವಿರದವರೂ ಇಲ್ಲಿ ಹೆಗಲಿಗೆ ಹೆಗಲಾದರು. ಗುರುಗಳ ಆನಂದಕ್ಕೆ ಧಕ್ಕೆ ಬಾರದು ಎಂದೇ ಕೆಲಸ ಮಾಡಿದರು. ಕೊನೆಗೂ ಗುರುವಿನ ಅನುಗ್ರಹ ಶಿಷ್ಯರ ನಂಬಿಕೆ ಎರಡೂ ಕೆಲಸ ಮಾಡಿತು.

ಕೊನೆಯ ದಿನ ಸೇರಿದ್ದ 30 ಸಾವಿರಕ್ಕೂ ಅಧಿಕ ಭಕ್ತರಿಗೆ ಕೇವಲ ಮೂರು ತಾಸಿನಲ್ಲಿ ಊಟೋಪಚಾರ ಒದಗಿಸಿದ್ದೂ ದಾಖಲಾರ್ಹ ನಡೆಯಾಯಿತು.

ಮಠದ ಶಿಷ್ಯನೇ ಗುರುವಾಗುವ, ಮಠದ ಗುರುಗಳಿಗೆ ಪಟ್ಟದ ಶಿಷ್ಯರಾಗುವ ಕ್ಷಣವನ್ನು ಕಣ್ತುಂಬಿಸಿಕೊಂಡರು. ಮಾತೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಯುವಕರೂ ನಿರಂತರ ಸೇವಾಕರ್ತರಾಗಿ ಪಾಲ್ಗೊಂಡರು. ಮಕ್ಕಳಿಗೂ ಸೇವಾ ಮನೋಭಾವನೆಯ ಪಾಠ ಸದ್ದಿಲ್ಲದೇ ಬೋಧನೆಯಾಯಿತು.

ಶಿಷ್ಯ ಸ್ವೀಕಾರ ಮಹೋತ್ಸವಕ್ಕೆ ಶಿಷ್ಯ ಭಕ್ತರ ಸೇವೆ ಅನನ್ಯ. ಗುರುಗಳ ಸಂಕಲ್ಪ ಹಾಗೂ ಪ್ರಭಾವ ಮತ್ತು ದೇವರ ಆಶೀರ್ವಾದ ಇದರ ಯಶಸ್ಸಿನ ಮೂಲ.

**ವಿ.ಎನ್. ಹೆಗಡೆ, ಬೊಮ್ಮನಳ್ಳಿ, ಆಡಳಿತ ಮಂಡಳಿ ಅಧ್ಯಕ್ಷ.**

ಗುರುಗಳು ಸಣ್ಣ–ಸಣ್ಣ ಸಂಗತಿಯನ್ನೂ ಬಿಡುವಿಲ್ಲದ ವೇಳಾಪಟ್ಟಿ ನಡುವೆಯೂ ಗಮನಿಸಿದ್ದು ವಿಶೇಷವಾಗಿತ್ತು. ಗುರುಗಳು ಹೇಳಿದ್ದನ್ನು ಶಿಷ್ಯನೂ ಶಿರದ ಮೇಲೆ ಇಟ್ಟು ನಡೆಸಿದರು.

**ಅನಂತ ಭಟ್ಟ, ಸಂಚಾಲಕ ಹುಳಗೋಳ, ಅನ್ನ ಪ್ರಸಾದ ಸಮಿತಿ**

ಮಾತೆಯರಿಗೆ ನೀಡಿದ ಒಂದು ಸೂಚನೆಗೆ ಇನ್ನೊಂದು ಪ್ರತಿಕ್ರಿಯೆ ಸರ್ವರ ಸಹಕಾರದಿಂದ ಎಲ್ಲರಿಗೂ ಧನ್ಯತಾಭಾವ ಉಂಟಾಗಿದೆ.

**ಗೀತ ಹೆಗಡೆ ಶೀಗೇಮನೆ, ಕೇಂದ್ರ ಮಾತೃ ಮಂಡಳಿ ಅಧ್ಯಕ್ಷೆ.**

# ವಿಶಿಷ್ಠ ಪರಂಪರೆ ಮಠ ಸ್ವರ್ಣವಲ್ಲೀ – ಶ್ರೀ ಅಶೋಕ ಹಾರನಹಳ್ಳಿ



ಶಿರಸಿ: ಸ್ವರ್ಣವಲ್ಲೀ ಮಠದ ಪರಂಪರೆ ಬಹಳ ವಿಶಿಷ್ಠವಾದ ಪರಂಪರೆ,ಶ್ರೀ ಶ್ರೀ ಗಂಗಾಧರೇಂದ್ರಸರಸ್ವತಿ ಶ್ರೀಗಳು ಸಮಾಜಮುಖಿಯಾಗಿ ಅತ್ಯುತ್ತಮ ಕಾರ್ಯ ಮಾಡುತ್ತಿದ್ದಾರೆ. ಮಠದಲ್ಲಿ ಇದೇ ಭಾಗವದವರು ಶಿಷ್ಯರಾಗಿ ಬಂದು ಮುನ್ನಡೆಸುವುದು ವಿಶೇಷ. ಅತ್ಯುತ್ತಮವಾದ ಕೆಲಸ ಮಾಡುತ್ತಿರುವ ಮಠ ಮತ್ತು ಶ್ರದ್ದೆ, ಭಕ್ತಿಗಳ ಪ್ರತಿರೂಪ, ದೈವ ಭಕ್ತರು ಆದ ಶ್ರೀಗಳು ಇಂದಿನ ದಿನಗಳಲ್ಲಿ ಕಷ್ಟ ಸಾಧ್ಯವಾದ ಸಾಧನೆ ಮಾಡುತ್ತಿದ್ದಾರೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರು, ಲೋಕ ಶಿಕ್ಷಣ ಟ್ರಸ್ಟ್‌ನ ಧರ್ಮದರ್ಶಿಗಳಾಗಿರುವ ಶ್ರೀ ಅಶೋಕ ಹಾರನಹಳ್ಳಿ ಅವರು ಹೇಳಿದರು.

ತಾಲೂಕಿನ ಶ್ರೀ ಸೋಂದಾ ಸ್ವರ್ಣವಲ್ಲೀ ಮಠದ ಸುಧರ್ಮಾ ಸಭಾಭವನದಲ್ಲಿ ಮಹಾಸಂಸ್ಥಾನದ ಶಿಷ್ಯ ಸ್ವೀಕಾರ ಮಹೋತ್ಸವದ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಅನೇಕ ಮಠದಲ್ಲಿ ಅನೇಕ ಸಮಸ್ಯೆಗಳು ಕಂಡು ಬರುತ್ತವೆ. ಅದ್ಯಾವುದೇ ಸಮಸ್ಯೆ ಇಲ್ಲದೇ ಮುನ್ನಡೆಸುತ್ತಿರುವ ಶ್ರೀಗಳ ಮಾರ್ಗದರ್ಶನದಿಂದ ರಾಷ್ಟ್ರಮಟ್ಟದಲ್ಲಿ ಪ್ರಕಾಶಮಾನವಾಗಲಿ,ಶ್ರೀಗಳ ಮಾರ್ಗದರ್ಶನದಿಂದ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುವ ಶಕ್ತಿಯನ್ನು ಶ್ರೀಗಳು ತುಂಬಲಿ ಎಂದು ಆಶಿಸಿದರು.

ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪೀಠಾಧೀಶರಾದ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮೀಜಿಗಳು ಆಶೀರ್ವಚನ ನೀಡಿದರು. ಸ್ವರ್ಣಶ್ರೀ ಚಿತ್ರವನ್ನು ಸಂಸತ್ ಸಚಿವ ಮಂಕಾಳು ವೈದ್ಯ ಬಿಡುಗಡೆಗೊಳಿಸಿದರು. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿದರು. ಅತಿಥಿಗಳಾಗಿ ಭೀಮಣ್ಣ ಹಾಗೂ ಯಲ್ಲಾಪುರ ಶಾಸಕ ಶ್ರೀ ಶಿವರಾಮ ಹೆಬ್ಬಾರ್‌ರವರು ಉಪಸ್ಥಿತರಿದ್ದರು.

ELEGANT TOURS
ELEGANT TOURS
First Floor, No 44, South End Road, Above Axis Bank,
Opp Bharathi Nursing Home, Bengaluru - 560 004


ಆಧ್ಯಾತ್ಮಿಕ ಕಾಶಿ ಮತ್ತು ಆಯೋಧ್ಯ ಯಾತ್ರೆ
(5ರಾತ್ರಿಗಳು – 6ದಿನಗಳು)

ಕೆಳಕಂಡವು ಒಳಗೊಂಡಿರುತ್ತದೆ
- ಬೆಂಗಳೂರಿನಿಂದ ಹೋಗಲು ಮತ್ತು ಬರಲು ವಿಮಾನ ದರ
- ಎ/ಸಿ ಡೀಲಕ್ಸ್ ರೂಮ್‌ಗಳು (ಇಬ್ಬರಿಗೆ 1 ರೂಮ್)
- ದಿನಕ್ಕೆ 3 ಬಾರಿ ಸಸ್ಯಹಾರಿ ಊಟ ನಮ್ಮದೇ ಅಡುಗೆಯವರಿಂದ
- ಎ/ಸಿ ಡೀಲಕ್ಸ್ ಬಸ್ 2X2
- ಎಲ್ಲಾ ಸ್ಥಳಗಳಲ್ಲಿ ಶ್ರಾದ್ಧ ಮಾಡಲು ಅವಕಾಶ
- ಜೊತೆಯಲ್ಲಿ ಕನ್ನಡ ಗೈಡ್ ಇರುತ್ತರೆ.

Departure Dates
Feb 15th to 20th | March 11th to 16th
Feb 22nd to 27th | March 18th to 23rd
March 01st to 06th | March 28th to Apr 2nd
ಒಬ್ಬರಿಗೆ ರೂ. 37000/-

ಹೋಗುವ ಸ್ಥಳಗಳು
ಅಯೋಧ್ಯ । ಪ್ರಯಾಗ್‌ರಾಜ್ । ಕಾಶಿ
ಗಯ । ಬೋಧ್‌ಗಯಾ
ಪ್ರತೀ ವಾರವೂ ಪ್ರವಾಸ ಇರುತ್ತದೆ.

SHREE JAGANNATHA TEMPLE PURI YATRA



5 Nights & 6 Days
Konark | Taratarini Shakti Peeth | Chilika Lake
Bhubaneswar | Kolkata
Per Head
37000/-
Including Flight Charges
For more Information/Reservation
Please Contact this Numbers
Manoj : 90358 05575

# ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾಗಿ ಅಸಗೊಡು ಜಯಸಿಂಹ



ಬ್ರಾಹ್ಮಣರಲ್ಲಿ ದ್ವೇಷದ ರಕ್ತ ಹರಿಯುತ್ತಿಲ್ಲ. ಬದಲಿಗೆ ಪ್ರೀತಿಯ ರಕ್ತ ಹರಿಯುತ್ತಿದೆ. ಲೋಕಕಲ್ಯಾಣ ಬಯಸುವ ಯಾವುದಾದರೂ ಸಮುದಾಯ ಇದ್ದರೆ ಅದು ಬ್ರಾಹ್ಮಣರು ಎಂದು ಬ್ರಾಹ್ಮಣ ಅಬಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಹೇಳಿದರು. ನಗರದ ಗಾಯತ್ರಿ ಭವನದಲ್ಲಿ ಅಭಿಜಾತೆ ಸಮಾವೇಶ ಯಶಸ್ವಿಗೊಳಿದವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಬ್ರಾಹ್ಮಣರು ಸರ್ವೇಜನ ಸುಖಿನೋ ಭವಂತು ಎಂದು ಪ್ರಾರ್ಥಿಸುತ್ತಾರೆಂದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಹುದ್ದೆಯನ್ನು ಇನ್ನು ಅಲಂಕರಿಸಿಲ್ಲ. ಶೀಘ್ರದಲ್ಲೇ ಸ್ವೀಕಾರ ಪಡೆದು ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ನಮ್ಮ ಸರ್ಕಾರ ಮಂಡಳಿಗೆ 10 ಲಕ್ಷ ರೂ. ಅನುದಾನ ಕೊಟ್ಟಿದೆ. ಇದನ್ನು ಸಮುದಾಯದ ಅಭಿವೃದ್ಧಿಗೆ ಬಳಸುತ್ತೇನೆ. ಸಮುದಾಯದ ಬಡವರ ಪರವಾಗಿ ಮಂಡಳಿ ಇರುತ್ತದೆ ಎಂದು ಹೇಳಿದರು.ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಕೋರ್ಟ್ ಕಲಾಪಕ್ಕೆ ಹಾಜರಾದರೆ ಲಕ್ಷಗಟ್ಟಲೆ ಸಂಭಾವನೆ ಪಡೆಯುತ್ತಾರೆ. ಆದರೆ ಅವರು ತಮ್ಮ ಅಮೂಲ್ಯ ಸಮಯವನ್ನು ಸಮುದಾಯದ ಸಂಘಟನೆ ಹಾಗೂ ಅಭಿವೃದ್ಧಿಗೆ ಮೀಸಲಿಟ್ಟಿದ್ದಾರೆಂದು ಶ್ಲಾಘಿಸಿದರು.

ಅಭಿಜಾತೆ ಸಮ್ಮೇಳನದ ಕಾರ್ಯಾಧ್ಯಕ್ಷೆ ಶ್ರೀಮತಿ ಮೇದಿನಿ ಉದಯ ಗರುಡಾಚಾರ್ ಮಾತನಾಡಿ ಅಭಿಜಾತೆ ಸಮ್ಮೇಳನವನ್ನು ಎಲ್ಲರೂ ಸೇರಿ ಒಂದು ತಂಡವಾಗಿ ಕೆಲಸ ಮಾಡಿದ್ದರಿಂದ ಯಶಸ್ವಿಯಾಯಿತು. ಸಣ್ಣಪುಟ್ಟ ಲೋಪದೋಷಗಳ ಹೊರತಾಗಿ ಕಾರ್ಯಕ್ರಮ ಯಶಸ್ವಿಯಾಯಿತು.

ಬ್ರಾಹ್ಮಣ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ದಂಪತಿಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಸನ್ಮಾನಿಸಲಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಶುಭಮಂಗಳ ಸುನೀಲ್, ಮಹಾಸಭಾದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಶ್ರೀಧರಮೂರ್ತಿ, ಮಹಾಸಭಾ ಖಜಾಂಚಿ ಶ್ರೀ ವೆಂಕಟೇಶ್ ಎಸ್. ನಾಯಕ್, ರಾಜ್ಯ ಉಪಾಧ್ಯಕ್ಷರಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಶ್ರೀ ವೈ.ಎ. ಸುಧಾಕರ ಬಾಬು, ಶ್ರೀ ಹೆಚ್.ಆರ್. ಸುರೇಶ್, ಶ್ರೀ ಹೆಚ್.ಎನ್. ಛಾಯಾಪತಿ, ಮಹಾಸಭಾ ಸಂಘಟನಾ ಕಾರ್ಯದರ್ಶಿ ಶ್ರೀ ಕಾರ್ತಿಕ್ ಎಸ್. ಬಾಪಟ್, ಶ್ರೀ ಮುರಳೀ, ಕೆ.ಆರ್.ಪುರ ಹಾಗೂ ಮತ್ತಿತರಿದ್ದರು.



ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿ ನೂತನ ಅಧ್ಯಕ್ಷರಾದ ಜಯಸಿಂಹರವರಿಗೆ ಬಿಎಸ್ ರಾಘವೇಂದ್ರ ಭಟ್, ರಾಜೇಂದ್ರ ಪ್ರಸಾದ್ ಮತ್ತು ಪುರುಷೋತ್ತಮ್‌ರವರಿಂದ ಅಭಿನಂದನೆ!

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬ್ರಾಹ್ಮಣ ಸಮಾಜದ ಎರಡು ಕಣ್ಣುಗಳಿದ್ದಂತೆ, ನೂತನವಾಗಿ ಅಧ್ಯಕ್ಷರಾಗಿ ನೇಮಕವಾಗಿರುವ ಜಯಸಿಹ್ಮ ರವರು ಸಮಾಜದ ಏಳಿಗೆಗಾಗಿ ಮಾಡುವ ಎಲ್ಲ ಕಾರ್ಯಗಳಿಗೆ ಮಹಾಸಭೆ ಬೆಂಬಲಿಸುವುದು ಎಂದು ಅವರನ್ನು ಭೇಟಿ ಮಾಡಿ ಹಾರ್ದಿಕವಾಗಿ ಅಭಿನಂದಿಸಿದ ಸಂದರ್ಭ

## ವಿಜಯ ಮುಳುಗುಂದ್ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕ



ವಿಜಯ ಮುಳುಗುಂದ್ ಅವರನ್ನು ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ರಾಜ್ಯ ಸರ್ಕಾರ ನೇಮಿಸಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಜಂಟಿ ಕಾರ್ಯದರ್ಶಿಯೂ ಆಗಿರುವ ಶ್ರೀ ವಿಜಯ್ ಮುಳುಗುಂದ್ ಅವರಿಗೆ ಹಾರ್ದಿಕ ಅಭಿನಂದನೆಗಳು

# ಹೆಚ್ಚಿದ ಬ್ರಾಹ್ಮಣ ಸಂಘಟನೆ ಜಿಜ್ಞಾಸೆ

## ಯಲ್ಲಾಪುರದಲ್ಲಿ ತ್ರಿಮತಸ್ಥ ವಿಪ್ರ ಸಮಾವೇಸ ಉದ್ಘಾಟಿಸಿದ ಶ್ರೀ ಅಶೋಕ ಹಾರನಹಳ್ಳಿ



ಯಲ್ಲಾಪುರ: ಬ್ರಾಹ್ಮಣರಿಗೆ ತಮ್ಮ ಸಂಘಟನೆ ಕುರಿತೇ ಉಂಟಾಗಿರುವ ಜಿಜ್ಞಾಸೆ ಇತ್ತೀಚೆಗೆ ಅಧಿಕಗೊಳ್ಳುತ್ತಿದ್ದು ಪರಂಪರಾಗತ ಕಾನೂನು ಮತ್ತು ವಿಧಿಗಳಿಗೆ ಅನುಸಾರವಾಗಿ ಸಮುದಾಯ ತನ್ನ ನಡೆ ಕಾಪಾಡಿಕೊಂಡು ಬಂದಿದೆ. ಇಂತಹ ಸನಾತನ ಧರ್ಮದ ಸಂರಕ್ಷಣೆ ಬದಲಾದ ಕಾಲಘಟ್ಟದಲ್ಲಿ ಅನಿವಾರ್ಯವಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಹೇಳಿದರು.

ಅವರು ಪಟ್ಟಂದ ಎಪಿಎಂಸಿ ರೈತ ಸಭಾಭವನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಶಭಾ ಸಂಘಟನೆ–ಸ್ವಾವಲಂಬನೆ–ಸಂಸ್ಕಾರ ಎಂಬ ಘೋಷವಾಕ್ಯದಡಿ ಹಮ್ಮಿಕೊಂಡಿದ್ದ ತ್ರಿಮತಸ್ಥ ವಿಪ್ರ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ನಮ್ಮೊಳಗೆ ಹುಟ್ಟಿದ ಒಳಪಂಗಡಗಳಿಂದಲೇ ಸಂಘಟನೆ ಅಸ್ತಿತ್ವಕ್ಕೆ ಧಕ್ಕೆಯಾಗಿದ್ದರೂ ಅಂತಹ ಒಳಪಂಗಡಗಳು ಬಹುಕಾಲ ಉಳಿಯಲಾರವು ಎಂದರು.

ವಿಪ್ರ ಸಮುದಾಯದ ಅಭಿವೃದ್ಧಿಗಾಗಿ ಸಂಘಟನೆ ಮಾಡಬೇಕಿರುವ ಕೆಲಸಗಳು ಸಾಕಷ್ಟಿವೆ. ಕೃಷಿ ಕ್ಷೇತ್ರ ಮತ್ತು ವಧುಕ್ಷಾಮ ಸೇರಿದಂತೆ ವಿವಿಧ ಬಗೆಯ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ನಮ್ಮ ಮಹಿಳಾ ಸಂಘಟನೆ ಮತ್ತಷ್ಟು ಬಲಗೊಳ್ಳಬೇಕಾಗಿದ್ದು, ಪ್ರತಿ ಜಿಲ್ಲೆಯಲ್ಲಿಯೂ ನಮ್ಮ ಸಮುದಾಯದವರಿಗೆ ಸಂಸ್ಕಾರ ನೀಡುವ ಕೇಂದ್ರಗಳು ಸ್ಥಾಪನೆಯಾಗಬೇಕಿದೆ ಎಂದು ಹೇಳಿದರು.

ಶಾಸಕ ಶಿವರಾಮ ಹೆಬ್ಬಾರ ಮಾತನಾಡಿ, ಬ್ರಾಹ್ಮಣರ ಸಂಖ್ಯೆ ಕಡಿಮೆ ಇರುವಲ್ಲಿ ಕ್ರಿಯಾಶೀಲವಾಗಿದೆ. ಆದರೆ, ಹೆಚ್ಚು ಜನ ಇರುವ ಪ್ರದೇಶದಲ್ಲಿ ಸಂಘಟನೆ ಕ್ಷೀಣವಾಗಿರುವುದು ವಿಪರ್ಯಾಸದ ಸಂಗತಿ. ನನ್ನನ್ನೂ ಸೇರಿದಂತೆ ಪ್ರತಿಯೊಬ್ಬರೂ ಸಂಘಟನೆಗಾಗಿ ಯಾವ ಕೊಡುಗೆ ನೀಡಿದ್ದೇನೆ ಎಂದು ಪ್ರಶ್ನಿಸಿಕೊಳ್ಳಬೇಕಿದೆ ಎಂದ ಅವರು, ಬ್ರಾಹ್ಮಣರೆಂದು ಹೇಳಿಕೊಳ್ಳಲು ನಾವೆಂದಿಗೂ ಭಯ ಪಡಬೇಕಾಗಿಲ್ಲ. ಆದರೆ ವೈಚಾರಿಕವಾಗಿ ಬಲಿಷ್ಠವಾಗಿರುವ, ಎಲ್ಲರ ಹಿತ ಬಯಸುವ ನಾವು ನಮ್ಮ ಸಂಘಟನೆ ಕುಸಿತವಾಗುತ್ತಿರುವ ಕಾಲಘಟ್ಟದಲ್ಲಿ ಗಂಭಿರವಾಗಿ ಯೋಚಿಸಬೇಕಾಗಿದೆ. ಸಂಘಟನೆಯ ಒಳಿತಿಗಾಗಿ ಸಾಧ್ಯವಿರುವ ಎಲ್ಲಾ ನೆರವನ್ನೂ ಸದಾ ನೀಡಲು ಸಿದ್ಧ ಎಂದರು.

ಸಂಕಲ್ಪ ಸೇವಾ ಸಂಸ್ಥೆಯ ಅಧ್ಯಕ್ಷ ಶ್ರೀ ಪ್ರಮೋದ ಹೆಗಡೆ ಮಾತನಾಡಿ, ಸರ್ಕಾರ ಮಾಡುತ್ತಿರುವ ಅಭಿವೃದ್ಧಿ ಕುರಿತಾದ ವ್ಯಾಖ್ಯಾನವೇ ಅವೈಜ್ಞಾನಿಕವಾಗಿದೆ. ಜನಸಂಖ್ಯೆ ಆಧರಿಸಿ ತಲಾನುದಾನ ನೀಡುವ ಪದ್ಧತಿ ಬ್ರಾಹ್ಮಣರಿಗೆ ಅಪಾಯಕಾರಿಯಾಗಿದೆ. ಇನ್ನಾದರೂ ಸಂಘಟಿತರಾಗಿ ಚಿಂತಿಸದಿದ್ದರೆ ಇದರ ಪರಿಹಾರ ಎಂದಿಗೂ ಅಸಾಧ್ಯ. ನಮ್ಮ ಮತಗಳು ಒಂದಾದರೆ ಮಾತ್ರ ನಮ್ಮ ಸಮುದಾಯದವರು ಅಭಿವೃದ್ಧಿ ಸಾಧಿಸಬಹುದಾಗಿದೆ. ಹಳ್ಳಿಗಳ ಮನೆಗಳು ವೃದ್ಧಾಶ್ರಮ ಆಗುತ್ತಿರುವ ಗಂಭೀರ ಪರಿಸ್ಥಿತಿಯಲ್ಲಿ ಪಿತ್ರಾರ್ಜಿತ ಆಸ್ತಿ ಸಂರಕ್ಷಣೆ ಕೂಡಾ ಸವಾಲಾಗಿ ಸಪರಿಣಮಿಸಿದೆ. ಸರ್ಕಾರದ ಮೀಸಲಾತಿ ನಿಯಮದ ಅಪಾಯ ನಮ್ಮೆಲ್ಲರನ್ನೂ ಕಂಗೆಡಿಸಿದ್ದು, ವಾಸ್ತವವಾದರೆ ನಮ್ಮ ಸಮುದಾಯದ ಭವಿಷ್ಯ ಅರ್ಥವಾಗುವ ಪ್ರಶ್ನೆಯಾಗಿ ಉಳಿದಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆ, ನಮಗೆದುರಾಗಿರುವ ಸವಾಲುಗಳ ಪರಿಹಾರಕ್ಕಾಗಿ ಅಗತ್ಯವಿರುವ ಸಂಘಟನೆಯ ಬಲಕ್ಕೆ ಒತ್ತು ಕೊಡದಿದ್ದರೆ ನಮಗೆಂದಿಗೂ ಪರಿಹಾರ ಸಿಗದು. ನಾಡಿನ 33 ತ್ರಿಮತಸ್ಥ ಬ್ರಾಹ್ಮಣರ ಮತಗಳೂ ಇಂತ ಸಂಕಷ್ಟ ಸಂದರ್ಭದಲ್ಲಿ ಒಂದಾಗಿ ಸಮುದಾಯದ ಅಸ್ತಿತ್ವ ಕಾಪಾಡಲು ಗಮನ ನೀಡಬೇಕು ಮತ್ತು ಸಮುದಾಯದ ಪ್ರತಿಯೊಬ್ಬರೂ ಸಂಘಟಿತರಾಗಬೇಕು ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಡಾ.ಬಿ.ಎಸ್. ರಾಘವೇಂದ್ರ ಭಟ್ಟ ಮಾತನಾಡಿ, ಸ್ವಾವಲಂಬನೆ ನಮ್ಮ ಸಮುದಾಯದ ಸಹಜ ರಕ್ತ ಗುಣವಾಗಿದೆ. ಆದರೆ, ಸರ್ಕಾರ ನಾಡಿನಲ್ಲಿರುವ 47 ಲಕ್ಷ ಬ್ರಾಹ್ಮಣರ ಸಂಖ್ಯೆಯನ್ನು ವ್ಯವಸ್ಥಿತವಾಗಿ 16 ಲಕ್ಷ ಎಂದು ಬಿಂಬಿಸುತ್ತಿದೆ. ಬ್ರಾಹ್ಮಣ ಎಂದರೆ ಕೇವಲ ಜಾತಿರಾಗಿರದೇ, ಇದು ವರ್ಗಾವಾಗಿದೆ. ಸಮುದಾಯದ ಪ್ರತಿಯೊಬ್ಬರೂ ಸಂಸ್ಕಾರವಂತರಾಗಿ ಪರಂಪರಾಗತ ವಿಧಿಗಳನ್ನು ಆಚರಿಸಬೇಕು. ಸಂಘಟನೆಗಳಿಗೆ ತ್ರಿಮತಸ್ಥ ಬ್ರಾಹ್ಮಣರು ಹಿಂಜರಿಯಬಾರದು ಎಂದರು.

ಅಭ್ಯಾಗತರಾಗಿದ್ದ ನೆಲೆಮಾವು ಮಠದ ಜಿ.ಎಂ. ಹೆಗಡೆ ಹೆಗ್ಗನೂರು, ಮಲೆನಾಡು ಕೃಷಿ ಅಭಿವೃದ್ಧಿ ಸಹಕಾರಿ ಸಂಘದ ಅಧ್ಯಕ್ಷ ಎಂ.ಆರ್. ಹೆಗಡೆ ಕುಂಬ್ರಿಗುಡ್ಡೆ, ಸಾಮಾಜಿಕ ಕಾರ್ಯಕರ್ತ ಗೋವಿಂದ ಭಟ್ಟ ಅಡವೆ, ಮಹಾಸಭೆಯ ಜಿಲ್ಲಾ ಸಂಚಾಲಕಿ ನಿರ್ಮಲಾ ಹೆಗಡೆ, ಗೋಣಿಕೊಪ್ಪ ವೇದಿಕೆಯಲ್ಲಿದ್ದರು.

ವೆಂಕಟರಮಣ ಭಟ್ಟ ಮೊಟ್ಟಡಗದ್ದೆ ಸಂಗಡಿಗರ ವೇದಘೋಷ, ಕವಿತಾ ಭಟ್ಟ ಸಂಗಡಿಗರ ಪ್ರಾರ್ಥನೆ, ವಿ. ಗಣಪತಿ ಭಟ್ಟ ಕೋರ್ಲಿಬೇಣ ಅವರ ವೇದಿಕೆ ಪೂಜೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಮಹಾಸಭಾ ಜಿಲ್ಲಾ ಪ್ರತಿನಿಧಿ ಶಂಕರಭಟ್ಟ ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಚಂದ್ರಕಲಾ ಭಟ್ಟ ನಿರ್ವಹಿಸಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಶ್ರೀಪಾದ ರಾಯ್ಸದ ಪ್ರಾಸ್ತಾವಿಕ ಮಾತನಾಡಿದರು. ತಾಲ್ಲೂಕು ಕಾರ್ಯದರ್ಶಿ ಕುಮಾರ ಭಟ್ಟ ವಂದಿಸಿದರು.

# ಹಾವೇರಿಯಲ್ಲಿ ಮಹಾಸಭೆಯಿಂದ ನಿವೇಶನ ಖರೀದಿ





29–1–24 ರಂದು ಹಾವೇರಿ ಜಿಲ್ಲೆ ಹಾವೇರಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ 11 ಗುಂಟೆ ಜಾಗವನ್ನು ಖರೀದಿ ಮಾಡಲಾಯಿತು, ಇದಕ್ಕೆ ಸಹಕಾರ ನೀಡಿದ ಮಾಜಿ ಶಾಸಕರು ಸಮಾಜಕ್ಕೆ ಅತಿ ಆತ್ಮೀಯರಾದ ಮಾನ್ಯ ಶ್ರೀ ನೆಹರು ಓಲೇಕಾರ್ ಸಾಹೇಬರನ್ನು ಸನ್ಮಾನಿಸಲಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರು, ಮಾಜಿ ಅಟಾರ್ನಿ ಜನರಲ್ ಆದ ಮಾನ್ಯ ಶ್ರೀ ಅಶೋಕ್ ಹಾರನಹಳ್ಳಿ ಅವರನ್ನು ಹಾವೇರಿ ಜಿಲ್ಲಾ ಬ್ರಾಹ್ಮಣ ಸಮಾಜದ ಮುಖಂಡರು ಸನ್ಮಾನಿಸಿದರು. ಈ ಸಮಯದಲ್ಲಿ ವಿಪ್ರ ಸಮಾಜದ ಹಾವೇರಿ ಜಿಲ್ಲಾ ಉಸ್ತುವಾರಿ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿಯಾದ ಶ್ರೀ ವಿಜಯ ನಾಡಜೋಶಿ ಉಪಸ್ಥಿತರಿದ್ದರು. ಸನ್ಮಾನವನ್ನು ಜಿಲ್ಲೆಯ ಹಿರಿಯರಾದ ಶ್ರೀ ಪ್ರಭಾಕರ್ ಮಂಗಳೂರು, ಜಿಲ್ಲಾಧ್ಯಕ್ಷರಾದ ವಸಂತ ಮುಕ್ತಾಲಿ ರಮೇಶ್ ಕಡಕೋಳ. ಶ್ರೀಯುತ ಬಾದಾಮಿ ನಾಯಕ್. ಶ್ರೀಮತಿ ದೀಪಾ ಪಾಟೀಲ್, ಬಾಬಣ್ಣ ಹುದ್ದಾರ್, ವಿನಾಯಕ ಹುದ್ದಾರ್,. ಉದಯ್ ಕುಲಕರ್ಣಿ, ಉಮೇಶ್ ಕುಲಕರ್ಣಿ, ಉಮೇಶ್ ರಟ್ಟಿಹಳ್ಳಿ ಹಾಗೂ ಅನೇಕ ವಿಪ್ರ ಮುಖಂಡರು ಉಪಸ್ಥಿತರಿದ್ದು ಸನ್ಮಾನಿಸಿದರು. ಈ ಕಾರ್ಯಕ್ರಮಗಳು ಮಾನ್ಯ ಶ್ರೀ ಪವನ್ ಬಹದ್ದೂರ್ ದೇಸಾಯಿ ಇವರ ಮನೆಯಲ್ಲಿ ನಡೆದವು. ಈ ಜಾಗದ ಖರೀದಿಗೆ ಕಾರಣೀಭೂತರಾಗಿ ಹೆಚ್ಚು ಪ್ರಯತ್ನ ಮಾಡಿ ಪಡೆದುಕೊಳ್ಳುವಲ್ಲಿ ಯಶಸ್ವಿಯಾದ ಮಾನ್ಯ ಶ್ರೀ ಪವನ್ ಬಹದ್ದೂರ್ ದೇಸಾಯಿ ಮತ್ತು ವಿಜಯ ನಾಡ ಜೋಶಿ., ಬಾಬಣ್ಣ ಹುದ್ದಾರ್ ಇವರೆಲ್ಲರಿಗೂ ಸಮಾಜದ ವತಿಯಿಂದ ರಾಜ್ಯಾಧ್ಯಕ್ಷರಾದ ಮಾನ್ಯ ಶ್ರೀ ಅಶೋಕ ಹಾರನಹಳ್ಳಿ ಅವರು ಅಭಿನಂದಿಸಿದರು. ಸಮಾಜಕ್ಕೆ ಇಂತಹ ಕೆಲಸ ಕಾರ್ಯಗಳು ಮೇಲಿಂದ ಮೇಲೆ ನಡೆಯಲಿ ಎಂದು ಶುಭ ಹಾರೈಸಿದರು.

# ಚಿಕ್ಕಬಳ್ಳಾಪುರದಲ್ಲಿ ಮಹಿಳಾ ಮಂಡಳಿ ಉದ್ಘಾಟನೆ



**ಚಿಕ್ಕಬಳ್ಳಾಪುರದಲ್ಲಿ ಜ್ಞಾನಮುದ್ರ ವಿಪ್ರ ಮಹಿಳಾ ಮಂಡಳಿಯನ್ನು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿಯವರು ಉದ್ಘಾಟಿಸಿದರು.**

# ಆಚಾರ್ಯತ್ರಯರ ಜಯಂತಿ ಆಚರಣೆ



ದಿನಾಂಕ ಸೆಪ್ಟೆಂಬರ್ 3, 2023 ರಂದು ಮಹಾಸಭಾ ಅಂಗಸಂಸ್ಥೆಯಾದ ಕೊಳ್ಳೇಗಾಲ ತಾಲೂಕು ಬ್ರಾಹ್ಮಣ ಮಹಾ ಸಭಾವು ಆಯೋಜಿಸಿದ್ದ ಶ್ರೀ ಆಚಾರ್ಯತ್ರಯರ ಜಯಂತಿಯಲ್ಲಿ ವಿಶೇಷ ಉಪನ್ಯಾಸಕಾರರಾಗಿ ಭಾಗವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಂಗದ ಸಹ ನಿರ್ದೇಶಕರಾದ ಡಾ. ಬಿ.ಎಸ್.ಅನಿಲಕುಮಾರ್ ಇವರು, ಇಂದಿನ ಬದುಕಿಗೆ ಜೀವನಾದರ್ಶಗಳು ಬಹಳ ಮುಖ್ಯ. ಜೀವನಾದರ್ಶಗಳನ್ನು ರೂಢಿಸಿಕೊಳ್ಳುವ ಮಾರ್ಗಗಳನ್ನು ಆಚಾರ್ಯತ್ರಯರು ತಾವು ಆಚರಿಸಿ, ತಮ್ಮ ಶಿಷ್ಯ ಬಳಗವನ್ನು ಆಚರಿಸುವಂತೆ ಉಪದೇಶಿಸಿದರು. ಶುದ್ಧ ನಡೆ, ಆಚಾರ, ವಿಚಾರ, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಅಗತ್ಯ ಗೌರವ ನೀಡುವುದು, ಅಂದಂದಿನ ಸಮಾಜದ ಕ್ಷೋಭೆಗೆ ಪರಿಹಾರಾತ್ಮಕ ಮಾರ್ಗಗಳನ್ನು ಕಂಡುಕೊಂಡು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಕಾರ್ಯನಿರ್ವಹಿಸುವುದು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಮಧ್ವಾಚಾರ್ಯರ ಜೀವನ ಸಾಧನೆಗಳು ಮತ್ತು ಅವರ ಶಿಷ್ಯರಾದ ವ್ಯಾಸರಾಯರು ಶ್ರೀ ರಾಘವೇಂದ್ರ ಸ್ವಾಮಿಗಳವರು ನುಡಿದಂತೆ ನಡೆದು ಸರ್ವಕಾಲಕ್ಕೂ ಆದರ್ಶಪ್ರಾಯವಾಗಿ ಕಂಡರು ಎಂದು ತಿಳಿಸಿದರು. ಇಂತಹ ಬದುಕಿಗೆ ಶುದ್ಧ ಚಾರಿತ್ರ್ಯ, ಧರ್ಮದ ಆಚರಣೆ, ಕೌಟುಂಬಿಕ ಸಾಮರಸ್ಯ ಮತ್ತು ಜೀವನಾದರ್ಶನಗಳನ್ನು ರೂಢಿಸಿಕೊಂಡರೆ ಅದೇ ಸ್ವರ್ಗ. ಇಲ್ಲದಿದ್ದರೆ ಅದೇ ನರಕ ಎಂದು ಹರಿದಾಸರ ಅನುಭವವಾಣಿಯ ಹಿನ್ನೆಲೆಯಲ್ಲಿ ಅನಿಲಕುಮಾರ ಅವರು ವಿಶ್ಲೇಷಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ನಂ ಶ್ರೀಕಂಠ ಕುಮಾರ್ ರವರು ಮಾತನಾಡಿ ವಿಪ್ರ ಸಂಘಟನೆಯ ಅವಶ್ಯಕತೆಯನ್ನು ತಿಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಹಾಸಭಾ ಸದಸ್ಯರಾಗುವಂತೆ ಕೋರಿದರು. ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷರಾದ ಡಿ ವಿ ರಾಜೇಂದ್ರ ಪ್ರಸಾದ್, ಸಂಘಟನಾ ಕಾರ್ಯದರ್ಶಿ, ಹೆಚ್ ಸಿ ಪುರುಷೋತ್ತಮ, ಚಾಮರಾಜ ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಜಿ ಎಂ ಹೆಗಡೆ, ವಾಗ್ದೇವಿ ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಮಲ್ಲಿಕಾ, ಮಹಿಳಾ ಮುಖಂಡರಾದ ಗೀತಕ್ಕ, ಕಾರ್ಯದರ್ಶಿ ಚಂದ್ರಚೂಡ, ಖಜಾಂಚಿ ವೆಂಕಟೇಶ್, ರಾಜ್ಯ ಸಮಿತಿ ಸದಸ್ಯರಾದ ಸುರೇಶ್ ಋಗ್ವೇದಿ, ಶಂಕರನಾರಾಯಣ, ಬಾಲಸುಬ್ರಮಣ್ಯಂ ಹಾಗೂ ತಾಲ್ಲೂಕು ಸಂಘದ ಅಧ್ಯಕ್ಷರಾದ ಆರ್ ಶೇಖರ್ ಶಾಸ್ತ್ರಿ ರವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

# ಎಲ್.ಟಿ. ತಿಮ್ಮಪ್ಪ ಹೆಗಡೆ ಪುಣ್ಯ ಸಂಸ್ಮರಣ



ಸಾಗರದ ಮಾಜಿ ಶಾಸಕರು, ಸಹಕಾರಿ ಕ್ಷೇತ್ರದ ಧುರೀಣರು ಮತ್ತು ವಿಪ್ರ ಸಮುದಾಯದ ಮುಖಂಡರು ಆಗಿದ್ದ ದಿವಂಗತ ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆಯವರ ಮೊದಲನೇ ವರ್ಷದ ಸಂಸ್ಮರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಸ್ಪೀಕರ್ ಆಗಿದ್ದ ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಮಾಜಿ ಶಾಸಕರಾದ ಸ್ವಾಮಿರಾವ್ ಅವರೂ ಸಹ ಭಾಗವಹಿಸಿದ್ದರು.

# ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರ ಕೊಡಚಾದ್ರಿ ಭೇಟಿ





ಕೊಲ್ಲೂರಿಗೆ ಬಂದಿದ್ದ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರು ಈ ದಿನ ಕೊಡಚಾದ್ರಿಗೆ ಆಗಮಿಸಿ ಬೆಟ್ಟದ ಮೇಲೆ ಸುಮಾರು ಮೂರು ಕಿ. ಮೀ ಕಾಲ್ನಡಿಗೆಯಲ್ಲಿ ಹತ್ತಿ ಸರ್ವಜ್ಞ ಪೀಠದಲ್ಲಿ ಶಂಕರ ಭಗವತ್ಪಾದರ ಮೂರ್ತಿಗೆ ಪೂಜೆ ಮಾಡಿ ಆಶೀರ್ವಚನವನ್ನು ನೀಡಿದರು. ಈ ಸಂದರ್ಭದಲ್ಲಿ ಮಹಾಸಭಾ ಅಧ್ಯಕ್ಷರು ಶ್ರೀ ಅಶೋಕ್ ಹಾರನಹಳ್ಳಿ, ಬ್ರಾಹ್ಮಣ ಸಭಾದ ಉಪಾಧ್ಯಕ್ಷರಾದ ಶ್ರೀ ಕೃಷ್ಣಾನಂದ ಛಾತ್ರ ಮತ್ತು ಅನೇಕರು ಸರ್ವಜ್ಞ ಪೀಠದ ದರ್ಶನ ಪಡೆದರು.

ಇತ್ತೀಚೆಗೆ ಕೊಲ್ಲೂರಿಗೆ
ಶ್ರೀ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಗಳವರು ಆಗಮಿಸಿದ್ದರು.
ಇದೇ ಸಂಧರ್ಭದಲ್ಲಿ ನೂತನವಾಗಿ ಆಡಳಿತಾಧಿಕಾರಿಗಳಾಗಿ
ನೇಮಕಗೊಂಡಿರುವ ಶ್ರೀ ಮುರಳಿ ಅವರನ್ನು
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭೆಯ ವತಿಯಿಂದ
ಅಧ್ಯಕ್ಷರು ಗೌರವಿಸಿದರು.

# ಮಾನ್ಯ ಅಧ್ಯಕ್ಷರಿಂದ ಮೈಸೂರ್ ಸೂಪರ್ ಮಾರ್ಕೆಟ್ ಭೇಟಿ



ಮೈಸೂರಿನಲ್ಲಿ ಇತ್ತೀಚೆಗೆ ಪ್ರಾರಂಭವಾದ ಸಮಗ್ರ ಸೂಪರ್ ಮಾರ್ಕೆಟ್‌ಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಮಾನ್ಯ ಅಶೋಕ ಹಾರನಹಳ್ಳಿ ರವರು ಭೇಟಿ ನೀಡಿ ಶುಭ ಕೋರಿದರು. ಟ್ರಸ್ಟ್ ನ ಅನಂತ್ ನಾಗರಾಜ್, ಸುಬ್ಬರಾಯ, ಶ್ಯಾಮ್ ಸುಂದರ್, ಪ್ರಭಾಕರ ರಾವ್, ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ಕಾರ್ತೀಕ್ ಎಸ್. ಬಾಪಟ್, ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂಠ ಕುಮಾರ್, ಸಮಿತಿ ಸದಸ್ಯರಾದ ವೆಂಕಟೇಶ್ ರವರು ಉಪಸ್ಥಿತರಿದ್ದರು.

# ತಾಲ್ಲೂಕು ಬ್ರಾಹ್ಮಣ ಸಮಾಜ ಸೇವಾ ಸಂಘದಿಂದ ದಾವಣಗೆರೆಯ ಗೃಹೋದ್ಯಮಿಗಳನ್ನು ಉತ್ತೇಜಿಸಲು ಭವನದಲ್ಲಿ ಸ್ಫೂರ್ತಿ-2024 ವಸ್ತು ಪ್ರದರ್ಶನ ಮತ್ತು ಆಹಾರ ಮೇಳ



ನಗರದ ರಿಂಗ್ ರಸ್ತೆಯಲ್ಲಿನ ಶಾರದಾಂಬೆ ದೇವಸ್ಥಾನ ಪಕ್ಕದಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಇತ್ತೀಚೆಗೆ ವಿವಿಧ ಆಹಾರ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಕರಕುಶಲ ವಸ್ತುಗಳು, ಬೆಡ್‌ಶೀಟ್, ಬೆಡ್‌ಸ್ಪ್ರೆಡ್ ಸೇರಿ ನಾನಾ ವಸ್ತುಗಳ ಪ್ರದರ್ಶನ ಮಾರಾಟ ಮೇಳ ನಡೆಯಿತು.



ತಾಲ್ಲೂಕು ಬ್ರಾಹ್ಮಣ ಸಮಾಜ ಸೇವಾ ಸಂಘದಿಂದ ದಾವಣಗೆರೆಯ ಗೃಹೋದ್ಯಮಿಗಳನ್ನು ಉತ್ತೇಜಿಸಲು ಭವನದಲ್ಲಿ ಸ್ಫೂರ್ತಿ-2024 ವಸ್ತು ಪ್ರದರ್ಶನ ಮತ್ತು ಆಹಾರ ಮೇಳ ಆಯೋಜಿಸಲಾಗಿತ್ತು. ನಗರ ಹಾಗೂ ಜಿಲ್ಲೆ ವ್ಯಾಪ್ತಿಯ ವ್ಯಾಪಾರಗಳು, ಅಹಾರೋತ್ಪನ್ನ ಉತಾದ್ಪಕರು ಮೇಳದಲ್ಲಿ ಭಾಗವಹಿಸಿದ್ದರು. ಒಟ್ಟು 40 ಮಳಿಗೆಗಳಲ್ಲಿ ಗೃಹೋಪಯೋಗ, ಗೃಹಾಲಂಕಾರ ವಸ್ತುಗಳು, ಸೌಂದರ್ಯವರ್ಧಕ ಸಾಮಗ್ರಿ, ಕರಕುಶಲ ವಸ್ತುಗಳು, ಪೂಜಾ ಸಾಮಗ್ರಿ, ಗಡಿಯಾರ, ಆರ್ಟಿಫಿಷಲ್ ಜ್ಯುವೆಲ್ಲರಿ, ಹೋಮ್ ಥಿಯೇಟರ್ ಮೊದಲಾದ ಉತ್ಪನ್ನಗಳು ಗ್ರಾಹಕರನ್ನು ಆಕರ್ಷಿಸಿದವು. ಇನ್ನೊಂದೆಡೆ ಸ್ಯಾಂಡ್ವಿಚ್, ಚೆಕ್ಕುಲಿ, ನಿಪ್ಪಟ್ಟು, ರವೆ ಉಂಡೆ, ಕೊಬ್ಬರಿ ಬರ್ಫಿ, ಹಲಸಿನ ಹಣ್ಣಿನ ವಡೆ, ಅತಿರಸ, ಪಾನಿಪುರಿ, ತರಹೇವಾರಿ ಹಪ್ಪಳ, ಸಂಡಿಗೆ, ತುಪ್ಪದ ಮಂಡಿಗೆ, ಕಾಫಿ, ಟೀ, ಮಸಾಲೆ ಮಜ್ಜಿಗೆ, ನಾರು ಬೇರಿನ ಜ್ಯೂಸ್ ಮೊದಲಾದ ತಿನಿಸು, ಪಾನೀಯಗಳು ಆಹಾರ ಪ್ರಿಯರ ಹೊಟ್ಟೆ ಹಸಿವು ತಣಿಸಿದವು.

ಮೇಳ ಕುರಿತು ಮಾತನಾಡಿದ ಬ್ರಾಹ್ಮಣ ಸಮಾಜ ಸೇವಾ ಸಂಘದ ತಾಲ್ಲೂಕು ಅಧ್ಯಕ್ಷ ಡಾ. ಶಶಿಕಾಂತ್, ಸ್ಥಳೀಯ ಗೃಹೋದ್ಯಮಿಗಳು ಮತ್ತು ವ್ಯಾಪಾರಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಹಾಗೂ ಅವರ ಉತ್ಪನ್ನಗಳನ್ನು ಎಲ್ಲರಿಗೂ ತಲುಪಿಸುವ ಉದ್ದೇಶದಿಂದ ಮೇಳ ಹಮ್ಮಿಕೊಳ್ಳಲಾಗಿದೆ. ಯುವಜನತೆ ಉದ್ಯೋಗಕ್ಕಾಗಿ ಬೆಂಗಳೂರಿಗೆ ಹೋಗುವ ಬದಲು ತಮ್ಮ ಊರಲ್ಲೇ ಸ್ವಂತ, ಸಣ್ಣ ಉದ್ಯಮ ಆರಂಭಿಸುವ ಮೂಲಕ ಸ್ವಂತ ಕಾಲಮೇಲೆ ನಿಲ್ಲಬೇಕು. ಆ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಸಂಕಲ್ಪಕ್ಕೆ ಸಹಕಾರ ನೀಡಬೇಕು ಎಂದರು.



ಹಿರಿಯ ವಕೀಲ ಜೆ.ಎಚ್. ವಸಂತ ಕುಮಾರ್ ಹಾಗೂ ಬಾಪೂಜಿ ಸಂಸ್ಥೆ ನಿರ್ದೇಶಕ ಡಾ. ಸಂಪಣ್ಣ ಮುತಾಲಿಕ್, ಸಮಾಜದ ಕಾರ್ಯದರ್ಶಿ ಗೋಪಾಲ್ ದಾಸ್, ನಿರ್ದೇಶಕರಾದ ಸತ್ಯನಾರಾಯಣ, ಡಿ. ಶೇಷಾಚಲ, ಭಾಸ್ಕರ ಭಟ್, ರಾಮಚಂದ್ರರಾವ್, ಉಮೇಶ್ ಕುಲಕರ್ಣಿ, ಉಮಾಕಾಂತ ದೀಕ್ಷಿತ್, ಶಂಕರ ಸಮುದಾಯ ಭವನದ ಅಧ್ಯಕ್ಷ ಡಾ. ಬಿ.ಟಿ. ಅಚ್ಯುತ್ ಇತರರಿದ್ದರು.



# ಶ್ರೀ ಮಧ್ವಾಚಾರ್ಯರು




ದ್ವೈತ ಮತ ಪ್ರಚಾರಕರಾದ ಮಧ್ವಾಚಾರ್ಯರು ಉಡುಪಿಗೆ ಸಮೀಪದಲ್ಲಿರುವ ಪಾಜಕವೆಂಬ ಊರಿನಲ್ಲಿ ಜನ್ಮತಾಳಿದರು. ಇವರ ಬಾಲ್ಯದ ಹೆಸರು ವಾಸುದೇವ. ಇವರು ಉಡುಪಿಯಲ್ಲಿದ್ದ ಅಚ್ಯುತಪ್ರೇಕ್ಷರೆಂಬ ಭಾಗವತ ಸಂಪ್ರದಾಯದ ಸನ್ಯಾಸಿಗಳಿಂದ ಸನ್ಯಾಸವನ್ನು ಸ್ವೀಕರಿಸಿ ಆನಂದತೀರ್ಥರೆಂಬ ಹೆಸರನ್ನು ಪಡೆದರು. ಇವರು ಅನಂದಕರವಾದ ಮೋಕ್ಷಕ್ಕೆ ಕಾರಣವಾದ ದ್ವೈತ ಶಾಸ್ತ್ರವನ್ನು ಬೋಧಿಸಿದುದರಿಂದ ಮಧ್ವಾಚಾರ್ಯರೆಂದು ಪ್ರಸಿದ್ಧರಾದರು. ಇವರು ತತ್ತ್ವವಾದವೆಂಬ ಸನಾತನ ಸಿದ್ಧಾಂತವನ್ನು ಪ್ರಚಾರಕ್ಕೆ ತಂದು ಸರ್ವಜ್ಞ ಪೀಠವನ್ನೇರಿ ಸರ್ವಜ್ಞಾಚಾರ್ಯರೆನಿಸಿದರು.

ಅವರ ಕಾರ್ಯವನ್ನು ನೋಡಿ ಶಂಕರಾಚಾರ್ಯರನ್ನು ಶಂಕರನ ಅವತಾರವೆಂದು ಹೇಳಿದಂತೆ, ರಾಮಾನುಜಾಚಾರ್ಯರನ್ನು ಆದಿಶೇಷನ ಅವತಾರವೆಂದೂ ಹೇಳುವಂತೆ, ಮಧ್ವಾಚಾರ್ಯರನ್ನು ವಾಯುದೇವರ ಅವತಾರವೆಂದೂ, ಜೀವೋತ್ತಮರೆಂದು ಹೇಳುತ್ತಾರೆ.

# ಮಹಿಳೆಯ ಕೊಲೆ ತನಿಖೆಗೆ ಒತ್ತಾಯಿಸಿ ಮನವಿ ಸಲ್ಲಿಕೆ



ಅರಣ್ಯ ಇಲಾಖೆಯ ಬೆಂಗಳೂರು ಕಚೇರಿಯಲ್ಲಿ ಶೀಘ್ರಲಿಗಾರರಾಗಿದ್ದ ಸಮಾಜದ ಅನ್ನಪೂರ್ಣ ರಾನಡೆ ಅವರು ಬೆಂಗಳೂರಿಗೆ ಹಿಂದಿರುಗುವ ವೇಳೆ ಘಟನೆ ನಡೆದಿತ್ತು. ಘಟನೆ ನಡೆದು ಒಂದು ವಾರ ಕಳೆದರೂ ದುಷ್ಕರ್ಮಿಗಳನ್ನು ಪೋಲೀಸ್ ಇಲಾಖೆ ಪತ್ತೆ ಹಚ್ಚಿಲ್ಲ. ರೈಲು ಪ್ರಯಾಣ ಮಹಿಳೆಯರಿಗೆ ಎಷ್ಟು ಸುರಕ್ಷಿತ?, ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಿ ಮಹಿಳಾ ಪ್ರಯಾಣಿಕರಿಗೆ ವಿಶೇಷ ಭದ್ರತೆ ಒದಗಿಸಬೇಕಾದ ಅಗತ್ಯವಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಬೆಂಗಳೂರು ರೈಲಿನ ಮಹಿಳಾ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭ ಜನವರಿ 30ರಂದು ಮಹಿಳೆಯೊಬ್ಬರನ್ನು ಕೊಲೆ ಮಾಡಿ ದರೋಡೆ ನಡೆಸಿದ ಘಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೂಕ್ತ ತನಿಖೆ ನಡೆಸಬೇಕು ಹಾಗೂ ಕುಟುಂಬಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಸೂಕ್ತ ಪರಿಹಾರ ಒದಗಿಸಿಕೊಡುವ ಕುರಿತು ಆಗ್ರಹಿಸಿ ಮುಖ್ಯಮಂತ್ರಿ ಅವರಿಗೆ ಬೆಳ್ತಂಗಡಿ ತಹಸೀಲ್ದಾರ್ ಮೂಲಕ ತಾಲ್ಲೂಕು ಚಿತ್ಪಾವನ ಬ್ರಾಹ್ಮಣರ ಸಂಘದ ವತಿಯಿಂದ ಇತ್ತೀಚೆಗೆ ಮನವಿ ಸಲ್ಲಿಸಲಾಯಿತು.

ಪದಾಧಿಕಾರಿಗಳಾದ ವಿವೇಕ್ ಕೇಳ್ಕರ್, ಯಶವಂತ ಪಟವರ್ಧನ್, ಯೋಗೀಶ್ ಭಿಡೆ, ಗಣೇಶ ಶೆಂಡ್ಯೆ, ಲಾಯಿಲ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗಿರೀಶ್ ಡೋಂಗ್ರೆ, ಸೂರ್ಯನಾರಾಯಣ ಪಾಳಂದೆ, ಮುಂಡಾಜೆ ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಅಶ್ವಿನಿ ಹೆಬ್ಬಾರ್, ಲತಾ ಭಟ್ ಅರೆಕಲ್ಲು, ರಶ್ಮಿ ಪಟವರ್ಧನ, ಡಾ. ದೀಪಾಲಿ ಡೋಂಗ್ರೆ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯೆ ವಿಷ್ಣು ಮರಾಠೆ, ನ್ಯಾಯವಾದಿ ಶೈಲೇಶ್ ಠೋಸರ್, ಪತ್ರಕರ್ತ ಅರವಿಂದ ಹೆಬ್ಬಾರ್ ಮತ್ತಿತ್ತರರು ಉಪಸ್ಥಿತರಿದ್ದರು.

# ವೇದಶಾಸ್ತ್ರ ಮಾತನಾಡುವವರಿಗೆ ಕೋಮು ಬಣ್ಣ





ಮೈಸೂರು: ವೈದಿಕ ಶಾಸ್ತ್ರವನ್ನು ಸಾರ್ವಜನಿಕವಾಗಿ ಮಾತನಾಡಿದರೆ ರಾಜಕೀಯ ಅಧಿಕಾರದ ಲಾಲಸೆಯಿಂದಾಗಿ ಕೆಲವರು ಕೋಮುವಾದದ ಬಣ್ಣ ಕಟ್ಟುತ್ತಿರುವ ಪ್ರಸಂಗಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಇದು ಹೀಗೆ ಮುಂದುವರೆದರೆ ರಾಜಕೀಯ ಮೂಲ ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಅವರು ಆತಂಕ ವ್ಯಕ್ತಪಡಿಸಿದರು.

ಮೈಸೂರು ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಕಾಲೇಜಿನಲ್ಲಿ ಶತಮಾನೋತ್ಸವ ವೇದಶಾಸ್ತ್ರ ಪೋಷಿಣೀ ಸಭಾ ವತಿಯಿಂದ ಆಯೋಜಿಸಿದ್ದ ಶತೋತ್ತರ ಸಂಭ್ರಮದ ಅಂಗವಾಗಿ 50 ಮಂದಿ ವೈದಿಕರಿಗೆ ಗೌರವ ಸಮರ್ಪಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಆದರೆ ಭಾರತದಲ್ಲಿ ನೂರಾರು ವರ್ಷಗಳಿಂದ ವಿದೇಶಿ ರಾಜರ ಆಕ್ರಮಣ, ರಾಜಕೀಯ ತಲ್ಲಣ, ಸಾಮಾಜಿಕ ಸ್ಥಿತಿಗತಿಗಳು ಏರುಪೇರಾದರೂ ವೈದಿಕರ ತ್ಯಾಗದ ಫಲವಾಗಿ ಹಿಂದೂ ಧರ್ಮ ಉಳಿದಿದೆ. ಮುಂದೆಯೂ ಈ ಧರ್ಮ ಉಳಿಯಬೇಕಾದರೆ, ಯುವಕರಿಗೆ ವೇದಶಾಸ್ತ್ರ ಕಲಿಸುವ ಜವಾಬ್ದಾರಿ ಹಿರಿಯರ ಮೇಲಿದೆ ಎಂದರು.

ಎಲ್ಲಾ ಜಾತಿಗಳಲ್ಲಿ ಇರುವಂತೆ ಬ್ರಾಹ್ಮಣರಲ್ಲೂ ಅನೇಕ ಸಮಸ್ಯೆಗಳಿವೆ. ವೈದಿಕರಿಗೆ ಹೆಣ್ಣು ಕೊಡುತ್ತಿಲ್ಲ. ಬ್ರಾಹ್ಮಣ ಯುವಕರಿಗೆ ಸರ್ಕಾರ ನೌಕರಿ ಸಿಗುತ್ತಿಲ್ಲ. ಆಧುನಿಕತೆಯ ಭರಾಟೆಯಲ್ಲಿ ವೈದಿಕ ಜೀವನ ಪದ್ಧತಿಯಲ್ಲಿ ಬದಲಾವಣೆ ಸೇರಿದಂತೆ ಸಾಲುಸಾಲು ಸಮಸ್ಯೆಗಳನ್ನು ಸ್ವರ್ಣವಲ್ಲಿ ಮಠದ ಶ್ರೀಗಳು ನನ್ನ ಗಮನಕ್ಕೆ ತಂದಿದ್ದಾರೆ ಎಂದು ತಿಳಿಸಿದರು.

**50 ಮಂದಿ ವೈದಿಕರಿಗೆ ಸನ್ಮಾನ :** ಹಿರಿಯ ವೈದಿಕರಾದ ವಿ.ಎಸ್. ವಿಶ್ವೇಶ್ವರ ಜೋಯಿಸ್, ಕೆ.ಜಿ. ಶಂಕರನಾರಾಯಣ ಶಾಸ್ತ್ರೀ, ಬಿ.ಆರ್. ನರಸಿಂಹಸ್ವಾಮಿ, ಜಗನ್ನಾಥ ಸೀತಾರಾಮ ಜೋಶಿ, ಹಿ.ಕೃ. ಶ್ರೀನಿವಾಸ ಶರ್ಮಾ, ಸುಬ್ರಹ್ಮಣ್ಯ ಗಣಪತಿ ಭಟ್ಟ, ಕೃಷ್ಣಶಂಕರ ಭಟ್ಟ, ರಾಮಕೃಷ್ಣ ಭಟ್ಟ, ಶಂಕರಲಿಂಗ, ಕೃಷ್ಣಮಂಜ ಭಟ್ಟ, ಹೆಚ್. ಬಾಲಚಂದ್ರ ಜೋಯಿಸ್, ತಿರುಮಲ್ಲೇಶ್ವರ ರಾಮಕೃಷ್ಣ ಭಟ್ಟ, ಮಹಾಬಲೇಶ್ವರ ನಾಗಭಟ್ಟ, ರಘುಪತಿ ನಾರಾಯಣ ಭಟ್ಟ, ರಮೇಶ ಗಂಗಾಧರ ಭಟ್ಟ ಜೋಶಿ, ತಿರುಮಲಾಚಾರ್, ನರಸಿಂಹ ಪರಮೇಶ್ವರ ಜೋಶಿ, ನಾರಾಯಣ ನಾಗಭಟ್ಟ, ಗಣಪತಿ ವೆಂಕಟರಮಣ ಭಟ್ಟ, ಎನ್.ಎ. ಚಂದ್ರಶೇಖರ ಶಾಸ್ತ್ರಿ, ವಿ. ಚಂದ್ರಶೇಖರ ಸಣ್ಣ ಭಟ್ಟ, ಅನಂತಾಚಾರ್ಯ ಜಹಾಗೀರದಾರ್, ಟಿ.ಎಂ. ಚಂದ್ರಶೇಖರ ಭಟ್ಟ, ಚಿದಂಬರ ಭಟ್ಟ, ರಾಮಶಾಸ್ತ್ರಿ ಜೋಶಿ, ವೆಂಕಟರಮಣ ಕೃಷ್ಣ ಜೋಶಿ, ಗಣಪತಿ ಗೋಪಾಲ ಭಟ್ಟ, ಟಿ.ಎ. ಶೇಷಾದ್ರಿ ಶಂಕರ ಭಟ್ಟ, ನಾಗೇಶಭಟ್ಟ ಜೋಶಿ, ಟಿ.ಎಸ್. ಸುಬ್ರಹ್ಮಣ್ಯ, ಅನಂತ ಭಟ್ಟ ದೇವಧರ್, ಜಯತೀರ್ಥಾಚಾರ್ ಒಡೇರ್, ಕೃಷ್ಣಭಟ್ಟ ಅಪ್ಪಣ್ಣಭಟ್ಟ ಜೋಶಿ, ರಾಮಚಂದ್ರ ಶಂಭುಭಟ್ಟ, ಹೆಚ್.ಸಿ. ವಾಸುದೇವ, ಕೆ.ಎಸ್. ಅನಂತರಾಘವನ್, ಶಿವರಾಮ ತಿಮ್ಮಣ್ಣ ಭಟ್ಟ, ಕೃಷ್ಣಾನಂದ ಶಿವರಾಮಭಟ್ಟ, ನಾರಾಯಣ ಶಂಭು ಭಟ್ಟ, ಶಂಕರ ಭಟ್ಟ ಮಲ್ಹಾರ ಭಟ್ಟ ಅಗ್ನಿಹೋತ್ರಿ, ನಾಗಾನಂದ ಕುಮಾರ ಮಾರಿಗೋಳಿ, ಉಮೇಶ್ ಚಕ್ರವರ್ತಿ, ಗಣಪತಿ ಹೇರಂಬ ಭಟ್ಟ, ರಾಮಕೃಷ್ಣ ಸೀತಾರಾಮ ಭಟ್ಟ ಅಲೇಖ, ಎಂ.ಎಸ್. ಶಿವಕುಮಾರ ಅವಧಾನಿ, ಡಿ. ಸತ್ಯನಾರಾಯಣ ಆಚಾರ್ಯ ಸೇರಿದಂತೆ ಒಟ್ಟು 50 ಮಂದಿ ವೈದಿಕರನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ವೇದಶಾಸ್ತ್ರ ಪೋಷಿಣೀ ಸಭಾ ಅಧ್ಯಕ್ಷ ಪ್ರೊ; ಬಿ.ಎಸ್. ನಾಗರಾಜ ಭಟ್ಟ, ವಿದ್ವಾನ್ ಎ.ಎಂ. ಚಂದ್ರಶೇಖರ್, ವಿದ್ವಾನ್. ಡಾ.ಬಿ.ವಿ. ಸತ್ಯನಾರಾಯಣ ಉಪಸ್ಥಿತರಿದ್ದರು.



## ಶೃಂಗೇರಿ ಶಂಕರಮಠದ ಪ್ರಧಾನ ಸಲಹೆಗಾರರಾದ ಡಾ. ವಿ.ಆರ್. ಗೌರೀಶಂಕರರವರಿಗೆ ಸನ್ಮಾನ




ದಿನಾಂಕ 12/02/2024 ರಂದು ಶೃಂಗೇರಿಯಲ್ಲಿ ನಡೆದ ಅಭಿನಂದನಾ ಸಭೆಯಲ್ಲಿ ಅದ್ವೈತ ತತ್ವವಿಭೂಷಣ, ಗುರು ಸೇವಾಧುರೀಣ ಪದ್ಮಶ್ರೀ ಪುರಸ್ಕೃತ, ಶ್ರೀ ಶೃಂಗೇರಿ ಶಂಕರಮಠ ಪ್ರಧಾನ ಸಲಹೆಗಾರರಾದ ಡಾ॥ ಗೌರಿಶಂಕರ್ ಅವರಿಗೆ ಅವರು ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ ಅವಧಿಯ ಸೇವೆಯನ್ನು ಸ್ಮರಿಸಿ ನಡೆಸಿದ ಸನ್ಮಾನ ಸಮಾರಂಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಹಾಗೂ ಕರ್ನಾಟಕ ಶುಕ್ಲ ಯಜುರ್ವೇದ ಪರಿಷತ್ ವತಿಯಿಂದ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ವೈ.ಎ. ಸುಧಾಕರಬಾಬು ಅವರು ಹಾಗೂ ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸುನಿಲ್ ಲಕ್ಯ ಅವರು ಅವರ ಸೇವೆಯನ್ನು ಸ್ಮರಿಸಿ ಅಭಿನಂದಿಸಿ ಸನ್ಮಾನಿಸಿದರು .

## ಶ್ರೀ ರಾಮ ಜೈಯಂ ಪುಸ್ತಕ ಬಿಡುಗಡೆ



6,7, ಜನವರಿಯಂದು ಸಹಸ್ರಾರು ಜನರಿಂದ ಕೂಡಿದ
ವಿಪ್ರ ಮಹಿಳಾ ಸಮಾವೇಶ ಸಂಪನ್ನಗೊಂಡಿತ್ತು.
ಈ ಸಂದರ್ಭದಲ್ಲಿ ಶ್ರೀಯುತ ಕಾ.ಶ್ರೀ.ನಾಗರಾಜ್ ವಿರಚಿತ
ಶ್ರೀ ರಾಮ ಜಯಂ ಪುಸ್ತಕವನ್ನು
ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರು ಹಾಗು
ಖ್ಯಾತ ನ್ಯಾಯವಾದಿಗಳೂ ಆದ
ಶ್ರೀಯುತ ಅಶೋಕ್ ಹಾರನಹಳ್ಳಿಯವರು
ಲೋಕಾರ್ಪಣೆ ಮಾಡಿದರು.

ಜಾಹಿರಾತು

**ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ**

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು-560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080-26793054 ಮೊಬೈಲ್ 8277433666**

# ಕಷ್ಟದಲ್ಲಿದ್ದ ಕಲಾವಿದೆಗೆ ನೆರವು



ಕೊಲ್ಲುವವನಿಗೆ ಕಾಯುವವನೊಬ್ಬ ಎಂಬ ಮಾತು ಇಂದು ಅಕ್ಷರಶಃ ನಿಜವಾಯಿತು. ಬೆಳಗಾವಿಯ 'ಸಂಯುಕ್ತ ಕರ್ನಾಟಕ" ಪ್ರಾದೇಶಿಕ ಕಛೇರಿ ಇಂತಹ ಅಪರೂಪದ ಸಂದರ್ಭಕ್ಕೆ ಸಾಕ್ಷಿಯಾಯಿತು.

ಮಗಳ ಮದುವೆಯ ಸಹಾಯಾರ್ಥ ನಾಟಕ ಪ್ರದರ್ಶನ ಏರ್ಪಡಿಸಿ ಕೈ ಸುಟ್ಟುಕೊಂಡಿದ್ದ ರಂಗನಟಿ ಭಾರತಿ ದಾವಣಗೆರೆ ಅವರಿಗೆ ನಿರೀಕ್ಷೆಗೂ ಮೀರಿ ಆರ್ಥಿಕ ನೆರವು ಒದಗಿಸಿಕೊಡುವ ಮೂಲಕ ಅತ್ತು ಅತ್ತು ಕೆಂಪಾಗಿದ್ದ ಕಣ್ಣುಗಳಲ್ಲಿ ಮಿಂಚು, ಮುಖದಲ್ಲಿ ಮಂದಹಾಸ ಮೂಡಿಸುವಲ್ಲಿ ಯಶಸ್ವಿಯಾಯಿತು.

ಜಿಲ್ಲಾ ಲೇಖಕಿಯರ ಸಂಘದ ಸದಸ್ಯರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಳಗಾವಿ ಜಿಲ್ಲಾ ಯುವ ಘಟಕದವರು ದಿನಾಂಕ 19.02.2024ರಂದು ಸಂಯುಕ್ತ ಕರ್ನಾಟಕ ಕಚೇರಿಗೆ ಬಂದು ರಂಗನಟಿಯ ನೆರವಿಗೆ ಸ್ಪಂದಿಸಿದರು.

ಭಾರತಿಯವರ ಸಂಕಷ್ಟದ ಪರಿಸ್ಥಿತಿಯ ಬಗ್ಗೆ ಅರಿತು ಸಂಘದ ಅಧ್ಯಕ್ಷೆ ಜಯಶೀಲಾ ಬ್ಯಾಕೋಡ, ಕಾರ್ಯದರ್ಶಿ ಭಾರತಿ ಮಠದ ಅವರ ನೇತೃತ್ವದಲ್ಲಿ ಕೇವಲ ಒಂದೇ ದಿನದಲ್ಲಿ ಸಹಾಯ ನಿಧಿ ಸಂಗ್ರಹಿಸಿದ ಸದಸ್ಯೆಯರು ಬೆಳಗಾವಿಯ ಸಂಯುಕ್ತ ಕರ್ನಾಟಕ ಕಛೇರಿಗೆ ಆಗಮಿಸಿ ಕಲಾವಿದೆಯರನ್ನು ಶಾಲು ಹೊದಿಸಿ ಸನ್ಮಾನಿಸಿ ಆರ್ಥಿಕ ನೆರವು ನೀಡಿ ಗೌರವಿಸಿದರು.

ಲೇಖಕಿಯರ ಸಂಘದ ಸದಸ್ಯರು ಕಲಾವಿದೆಯ ಅನುಭವವನ್ನು ಕೇಳಿ ಭಾವುಕರಾದರು. ನಿಮ್ಮೊಂದಿಗೆ ನಾವಿದ್ದೇವೆ ಎಂದು ಸಾಂತ್ವನ ಹೇಳಿ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಕಲಾವಿದೆ ರೇಷ್ಮಾ ಅಳವಂಡಿ, ಬ.ಎ. ಪಾಟೀಲ, ಬೆಳಗಾವಿ ಮಹಾನಗರ ಪಾಲಿಕೆ ಪಿಡ್ಲ್ಯುಡಿ ಕಮಿಟಿಯ ಅಧ್ಯಕ್ಷೆ ವಾಣಿ ವಿಲಾಸ ಜೋಶಿ ಮತ್ತಿತ್ತರರು ಇದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಳಗಾವಿ ಜಿಲ್ಲಾ ಯುವ ಘಟಕದ ವತಿಯಿಂದಲೂ ನೊಂದ ಕಲಾವಿದೆಗೆ ಆರ್ಥಿಕ ನೆರವು ನೀಡಲಾಯಿತು. ಅಕ್ಷಯ ಕುಲಕರ್ಣಿ, ಪ್ರಜ್ವಲ್ ಕುಲಕರ್ಣಿ, ಅನಿಲ್ ಕುಲಕರ್ಣಿಯವರು ಸಹಾಯ ಹಸ್ತವನ್ನು ನೀಡಿದರು.

# ಮುಂಡಾಜೆಯಲ್ಲಿ ರಂಗನಾಥ ಭಟ್ ಸಂಸ್ಮರಣೆ

ಬೆಳ್ತಂಡಿ: 20ನೇ ಶತಮಾನದ ಪೂರ್ವಾರ್ಧದಲ್ಲಿ ಸುಮಾರು 20 ವರ್ಷ ಶ್ರೀ ಅಂಬಾ ಪ್ರಸಾದಿತ ಕರ್ನಾಟಕ ಸಂಗೀತ ನಾಟಕ ಮಂಡಳಿ ಸ್ಥಾಪಿಸಿ, ಕರ್ನಾಟಕದಾದ್ಯಂತ ಸಾವಿರಾರು ಪ್ರದರ್ಶನ ನೀಡಿ, ನೂರಾರು ಕಲಾವಿದರನ್ನು ಪರಿಚಯಿಸುವ ಮೂಲಕ ಹೆಸರು ಗಳಿಸಿದ್ದ ಮುಂಡಾಜೆ ರಂಗನಾಥ ಭಟ್ ತಮನ್ಕರ್ ನಿಧನರಾಗಿ 50 ವರ್ಷಗಳಾದ ಹಿನ್ನೆಲೆಯಲ್ಲಿ ಸಂಸ್ಮರಣೆ ಕಾರ್ಯಕ್ರಮ ಜರುಗಿತು.


ಮುಂಡಾಜೆ ಕೆರೆ ಶ್ರೀ ಪರಶುರಾಮ ದೇವಸ್ಥಾನದ ವಠಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ, ಪತ್ರಕರ್ತ ಶ್ರೀಕರ ಭಟ್ ನುಡಿ ನಮನ ಸಲ್ಲಿಸಿ, "ರಂಗನಾಥ ಭಟ್ ತಮನ್ಕರ್ ಅದ್ವಿತೀಯ ಸಾಧನೆ ಮೂಲಕ ಮನೆ ಮಾತಾದವರು. ಹಲವು ಏಳು–ಬೀಳುಗಳ ಮೂಲಕ ಜೀವನ ನಡೆಸಿದವರು. ಕಂಪನಿ ನಷ್ಟದಲ್ಲಿ ನಡೆದಾಗ ತಮಗೆ ಬಂದ ಪಾರಿತೋಷಕ, ಫಲಕಗಳನ್ನು ಮಾರಾಟ ಮಾಡಿ ಕಲಾವಿದರ ಬದುಕು ಕಟ್ಟಿದವರು. ನಾಟಕದ ಜತೆ ಅಪಾರ ಸಂಗೀತ ಜ್ಞಾನವೂ ಅವರಲ್ಲಿ ಮೇಳೈಸಿತ್ತು. ರಂಗಭೂಮಿಯ ಧ್ರುವ ನಕ್ಷತ್ರ ಆಗಿದ್ದವರು. ಕ್ರಾಂತಿಕಾರಿ ವ್ಯಕ್ತಿತ್ವದ ಮೂಲಕ ಐತಿಹಾಸ ನಿರ್ಮಿಸಿದವರು ಎಂದು ಹೇಳಿದರು.

ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಮುಖ್ಯ ಪ್ರಬಂಧಕ ಹೇಮಂತ ಭಿಡೆ ಅಧ್ಯಕ್ಷತೆ ವಹಿಸಿದ್ದರು. ಉಜಿರೆ ರಬ್ಬರ್ ಸೊಸೈಟಿ ಅಧ್ಯಕ್ಷ ಶ್ರೀಧರ ಜಿ. ಭಿಡೆ ಮಾತನಾಡಿ, "ದೊಡ್ಡ ಮನೆತನದ ಸರಸ್ವತಿ ಪುತ್ರರಾದ ಇವರು ಬಾಲ್ಯದಲ್ಲೇ ನಾಟಕ ಕಂಪನಿ ಸೇರುವಾಗ ಅವರಿಗೆ ನಾಟಕಗಳ ಯಾವುದೇ ಜ್ಞಾನ ಇರಲಿಲ್ಲ. ಆದರೆ ಅವರು ತಮ್ಮ ಸಾಧನೆ ಮೂಲಕ ರಾಜ್ಯದಲ್ಲಿ ಮೊದಲ ಟೆಂಟ್ ಕಂಪನಿ ಆರಂಭಿಸಿದವರು. ಕಲಾವಿದನ ನಿಜ ಬದುಕು ಯಾವ ರೀತಿ ಇರುತ್ತದೆ ಎಂಬುದಕ್ಕೆ ಇವರು ಸಾಕ್ಷಿ." ಎಂದರು.

ದೇವಸ್ಥಾನದ ಆಡಳಿತ ಮೊಕ್ತೇಸರ ರಾಮಚಂದ್ರ ಫಡಕೆ, ಜಗದೀಶ್ ಆರ್. ಫಡಕೆ, ಮುಂಡಾಜೆ, ಸಿತಪಾವನ ಸಂಘಟನೆ ಅಧ್ಯಕ್ಷೆ ಸುಷ್ಮಾ ಎನ್. ಭಿಡೆ, ಕಾರ್ಯದರ್ಶಿ ರಂಗನಾಥ ಹೆಬ್ಬಾರ್, ಮಧುಕರ ತಾಮನ್ಕರ್, ರಾಧಾ ವಿ. ಫಡಕೆ, ಕಿರಣ್ ಖಾಡಿಲ್ಕರ್ ಉಪಸ್ಥಿತರಿದ್ದರು. ಆರ್.ಬಿ.ಐ.ಯ ಸಲಹಾ ಸಮಿತಿ ಸದಸ್ಯ ಡಾ. ಶಶಾಂಕ ಭಿಡೆಯವರನ್ನು ಸನ್ಮಾನಿಸಲಾಯಿತು. ವಾಸುದೇವ ಗೋಖಲೆ ಸ್ವಾಗತಿಸಿದರು. ನಾರಾಯಣ ಫಡಕೆ ಕಾರ್ಯಕ್ರಮ ನಿರೂಪಿಸಿದರು.

# ನಾಲ್ವರು ಅತಿ ಗಣ್ಯರಿಗೆ "ಭಾರತ ರತ್ನ" ಪ್ರಶಸ್ತಿ

**ಕೇಂದ್ರ ಸರ್ಕಾರವು 2024ರಲ್ಲಿ ನಾಲ್ವರು ಗಣ್ಯಾತಿಗಣ್ಯರಿಗೆ "ಭಾರತ ರತ್ನ" ಪ್ರಶಸ್ತಿ ನೀಡಿ ಗೌರವಿಸಿದೆ. ನಮ್ಮ ದೇಶದ ಉಪಪ್ರಧಾನಿಗಳಾಗಿದ್ದ ಶ್ರೀ ಲಾಲ್‌ಕೃಷ್ಣ ಅಡ್ವಾಣಿಯವರಿಗೆ, ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಡಾ. ಪಿ.ವಿ. ನರಸಿಂಹರಾವ್, ಚೌಧರಿ ಚರಣ್‌ಸಿಂಗ್ ಅವರಿಗೆ ಮೂರು ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ಪಡೆದಿದ್ದ ಕೃಷಿ ವಿಜ್ಞಾನಿ ದಿ. ಡಾ.ಎನ್.ಎಸ್. ಸ್ವಾಮಿನಾಥನ್ ಅವರು ಈ ಅತ್ಯುನ್ನತ ಪ್ರಶಸ್ತಿಗೆ ಭಜನರಾಗಿದ್ದಾರೆ.**



**ಶ್ರೀ ಎಲ್.ಕೆ. ಅಡ್ವಾಣಿಯವರು** ದೇಶದ ಎಲ್ಲ ರಾಜಕೀಯ ಮುಖಂಡರಿಗೆ ಆದರ್ಶಪ್ರಾಯರು. 1944ರಲ್ಲಿ ಜನಸಂಘದ ಸ್ವಯಂಸೇವಕರಾಗಿ ಸೇರಿ, ಹಂತ ಹಂತವಾಗಿ ಮುನ್ನಡೆದು ರಾಷ್ಟ್ರಕ್ಕೆ ತಮ್ಮನ್ನು ಸಮರ್ಪಿಸಿಕೊಂಡವರು. ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಚಾರ ಸಚಿವರಾಗಿದ್ದವರು. ಜನಾದೇಶ ಯಾತ್ರೆ, ಸ್ವರ್ಗ ಜಯಂತಿ ರಥ ಯಾತ್ರೆ, ರಾಮಜನ್ಮಭೂಮಿ ಆಂದೋಳನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದವರು. ಅವರ ಪಕ್ಷನಿಷ್ಠೆ, ದೇಶನಿಷ್ಠೆ ಪ್ರಶ್ನಾತೀತ.

**ಡಾ.ಪಿ.ವಿ. ನರಸಿಂಹರಾವ್** ಅವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿ, ದೇಶದ ಪ್ರಧಾನಮಂತ್ರಿಗಳಾಗಿದ್ದ ಅವರು ಭಾರತವನ್ನು ಔದ್ಯೋಗಿಕರಣ, ಜಾಗತೀಕರಣಕ್ಕೆ ತೆರೆದವರು. ಬಹುಭಾಷಾ ಕೋವಿದರು, ಬಹುಶಾಸ್ತ್ರಜ್ಞರು, ಸಹೃದಯಿಗಳಾಗಿದ್ದವರು.





ಭಾರತ ಹಸಿರು ಕ್ರಾಂತಿ ಹರಿಕಾರ ಎಂದೇ ಪ್ರಸಿದ್ಧರಾದ ವಿಶ್ವವಿಖ್ಯಾತ **ಡಾ.ಎಂ.ಎಸ್. ಸ್ವಾಮಿನಾಥನ್** ಅವರ ನಿರಂತರ ಶ್ರಮದಿಂದಾಗಿ ನಮ್ಮ ದೇಶದ ಕೃಷಿ ಉತ್ಪನ್ನಗಳ ವಹಿವಾಟು ಜಾಗತಿಕ ಸ್ತರದಲ್ಲಿ ನಿಲ್ಲುವಂತಾಯಿತು. ಫಿಲಿಫೈನ್ಸ್‌ನ ಅಂತಾರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆಯ ಮಹಾನಿರ್ದೇಶಕರಾಗಿದ್ದವರು. ಜೀವಮಾನ ಸಾಧನೆಗಾಗಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿ ಪಡೆದ ಎಲ್ಲರಿಗೂ ಮಹಾಸಭೆಯ ಅಭಿನಂದನೆಗಳು.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |


**ಕ್ರಿಕೆಟ್ ಆಟಗಾರ್ತಿಗೆ ಅಭಿನಂದನೆಗಳು...**



**ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಮೈಸೂರಿನ ಕುಮಾರಿ. ಶುಭ ಸತೀಶ್ ರವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗೌರವ ಸದಸ್ಯತ್ವವನ್ನು ನೀಡಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂಠ ಕುಮಾರ್, ಸಮಿತಿ ಸದಸ್ಯರಾದ ಕೆ ಆರ್ ಸತ್ಯನಾರಾಯಣ, ಜಿ ಆರ್ ಮೋಹನ್, ಶಂಕರನಾರಾಯಣ, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ. ಕೆ ವಿ ಲಕ್ಷ್ಮೀದೇವಿ, ಆರ್ ಬಿ ಐ ಬ್ರಾಹ್ಮಣ ಸಂಘದ ಅಧ್ಯಕ್ಷ ಎಸ್ ದಿನೇಶ್ ರವರುಗಳು ಅಭಿನಂದನೆ ಸಲ್ಲಿಸಿದರು.**

# ಜಗದ್ಗುರು ರಮಾನಂದಾಚಾರ್ಯ ಸ್ವಾಮಿ ರಾಮಭದ್ರಾಚಾರ್ಯರಿಗೆ ಜ್ಞಾನಪೀಠ ಪ್ರಶಸ್ತಿ



ಹಿಂದೂ ಆಧ್ಯಾತ್ಮಿಕ ಗುರು, ಶಿಕ್ಷಣತಜ್ಞ, ಸಂಸ್ಕೃತ ವಿದ್ವಾಂಸ, ಕವಿ, ಸಾಹಿತಿ, ಬ್ರಹ್ಮಚಾರಿ ಮಧ್ಯಪ್ರದೇಶದ ಚಿತ್ರಕೂಟ ತುಳಸೀಪೀಠದ ಸಂಸ್ಥಾಪಕರಾದ ರಮಾನಂದಾಚಾರ್ಯ ಸ್ವಾಮಿ ರಾಮಭದ್ರಾಚಾರ್ಯರಿಗೆ ಈ ಸಲದ ಅತ್ಯಂತ ಪ್ರತಿಷ್ಠಿತ 58ನೇ "ಜ್ಞಾನಪೀಠ ಪ್ರಶಸ್ತಿ" ಯನ್ನು ನೀಡಿ ಗೌರವಿಸಲಾಗಿದೆ.

ಉತ್ತರ ಪ್ರದೇಶದ ಶಾಂತಿಕುಂಜ್‌ನ ಗ್ರಾಮದಲ್ಲಿ ಶ್ರೀಮಾತಾ ಶಚೀದೇವಿ ಹಾಗೂ ಪಂಡಿತ್ ಶ್ರೀ ರಾಜದೇವ್ ಮತ್ತು ಅವರ ಪುತ್ರರಾಗಿ 14.01.1950ರಂದು ಜನಿಸಿದರು. ಗಿರಿಧರ್ ಎಂಬ ನಾಮ ಹೊಂದಿದ್ದ ಅವರು ಎರಡು ತಿಂಗಳ ಹಸುಗೂಸಾಗಿದ್ದಾಗ ಕಣ್ಣುಗಳನ್ನು ಕಳೆದುಕೊಂಡರು. ಬ್ರೈಲ್ ಭಾಷೆ ಕಲಿತ ಶ್ರೀಯುತರು ಹುಟ್ಟು ಪ್ರತಿಭಾಶಾಲಿಯಾಗಿದ್ದು ಜಸ್‌ಪುರದ ಆದರ್ಶ ಗೌರೀಶಂಕರ ಸಂಸ್ಕೃತ ಕಾಲೇಜಿನಲ್ಲಿ ಓದಿ ವಿಶಿಷ್ಟ ಶ್ರೇಯಾಂಕದಲ್ಲಿ ಉತ್ತರ ಮಧ್ಯಮಾ ಪರೀಕ್ಷೆಯಲ್ಲಿ ತೇರ್ಗಡೆಯಾದರು. ವಾರಣಾಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಿಂದ ಪದವಿ ಹಾಗೂ ಸ್ನಾತಕೋತ್ತರ ಸಂಸ್ಕೃತ ಪದವಿಗಳಲ್ಲಿ (1971–76), ವಿದ್ಯಾವಾರಿಧಿ ಎಂಬ ಡಾಕ್ಟರೇಟ್ ಪದವಿಯನ್ನು, ಪಂಡಿತ ರಾಮಪ್ರಸಾದ್ ತ್ರಿಪಾಠಿ ಮಾರ್ಗದರ್ಶನದಲ್ಲಿ ಪಡೆದು ನಂತರ 1987ರಲ್ಲಿ ಡಿ.ಲಿಟ್ (ವಾಚಸ್ಪತಿ) ಪದವಿಗೆ ಭಾಜನರಾದರು. ಕಾವ್ಯ, ನಾಟಕ, ವ್ಯಾಕರಣ, ವಿಷಯಗಳಿಗೆ ಸಂಬಂಧಿಸಿದಂತೆ 240ಕ್ಕೂ ಹೆಚ್ಚು ಗ್ರಂಥಗಳನ್ನು ಸಂಸ್ಕೃತ, ಹಿಂದಿ, ಅವಧಿ ಭಾಷೆಗಳಲ್ಲಿ ಬರೆದಿದ್ದು ಪ್ರಕಟವಾಗಿವೆ. ಒಟ್ಟು 22 ಭಾಷೆಗಳಲ್ಲಿ, ಮಾತನಾಡುವ ಸಾಮರ್ಥ್ಯ ಹೊಂದಿದ್ದು, ರಾಮಾಯಣ, ತುಲಸೀ ರಾಮಾಯಣ ಬಗ್ಗೆ ಕಥಾ ಪ್ರಸಂಗ ಕಾರ್ಯಕ್ರಮಗಳನ್ನು ಆಯೋಜಿಸಿ ಉಪನ್ಯಾಸ ಮಾಡಿದ್ದಾರೆ. ಜಗದ್ಗುರು ರಾಮಭದ್ರಾಚಾಯರು ವಿಕಲಾಂಗ ವಿಶ್ವವಿದ್ಯಾಲಯವನ್ನು 2001ರಲ್ಲಿ ಸ್ಥಾಪಿಸಿ ಅದರ ಸಂಸ್ಥಾಪಕ ಕುಲಾಧಿಪತಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಭಾರತ ಸರ್ಕಾರವು ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ (2015). ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಸದಸ್ಯತ್ವ ನೀಡಲಾಗಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಹಿಮಾಚಲ್ ಪ್ರದೇಶ ಸರ್ಕಾರಗಳು ಪ್ರಶಸ್ತಿಗಳನ್ನು ನೀಡಿವೆ. ಬೆಂಗಳೂರಿನ ಎಸ್. ವ್ಯಾಸ ಯೋಗ ವಿಶ್ವವಿದ್ಯಾಲಯವು ಸನ್ಮಾನಿಸಿದೆ. ಶ್ರೀವೈಷ್ಣವ ಸಂಪ್ರದಾಯದ ವಿಪ್ರ ಶ್ರೇಷ್ಠರಾದ ಜಗದ್ಗುರು ರಮಾನಂದಾಚಾರ್ಯರಿಗೆ ನಮ್ಮೆಲ್ಲರ ಅಭಿವಂದನೆಗಳು.

# ಉಪಕುಲಪತಿಗಳಾಗಿ ಪ್ರೊ: ಎಂ.ಕೆ. ಶ್ರೀಧರ್ ನೇಮಕ



ವಿಪ್ರನುಡಿ ಮಾಸಿಕ ಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ. ಎಂ.ಕೆ. ಶ್ರೀಧರ್ ಅವರನ್ನು ಈಗ ಎಸ್. ವ್ಯಾಸ ಯೋಗ ವಿಶ್ವವಿದ್ಯಾಲಯದಲ್ಲಿ ಉಪ ಕುಲಪತಿಗಳಾಗಿ ನೇಮಿಸಲಾಗಿದೆ. ಶ್ರೀಯುತರು ಆ ವಿಶ್ವವಿದ್ಯಾಲಯದ ನಿಕಟಪೂರ್ವ ವಿಶಿಷ್ಠ ಪ್ರಾಧ್ಯಾಪಕರು, ನಿಕಟಪೂರ್ವ ಕುಲಸಚಿವರು, ಯೋಗ ಮತ್ತು ಆಧ್ಯಾತ್ಮ ವಿಭಾಗದ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾಜಿ ಕುಲಸಚಿವರು, ಪ್ರಸಾರಾಂಗದ ಉಪ ನಿರ್ದೇಶಕರಾಗಿದ್ದರು. ಅಮೆರಿಕಾದ ಪ್ರತಿಷ್ಠಿತ ಫುಲ್‌ಬ್ರೈಟ್ ವಿದ್ವಾಂಸರಾಗಿದ್ದು, ಅಮೆರಿಕಾದ ಹಾರ್ವರ್ಡ್, ಬರ್ಕ್ಲಿ, ಸ್ಟೋನಿಬ್ರೂಕ್, ಸಿನ್‌ಸಿನ್ನಾಟಿ, ಇಂಗ್ಲೆಂಡ್‌ನ ಅಕ್ಸ್‌ಫರ್ಡ್ ಮತ್ತು ಭಾರತದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಅಹ್ವಾನಿತ ಉಪನ್ಯಾಸಗಳನ್ನು ನೀಡಿದ್ದಾರೆ. ಬಸವನಗುಡಿ ನ್ಯಾಷನಲ್ ಪದವಿ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರು ಹಾಗೂ ಫ್ಲಾರಿಡಾ ಹಿಂದೂ ಯೂನಿವರ್ಸಿಟಿಯಲ್ಲಿ ಸಹಪ್ರಾಧ್ಯಾಪಕರಾಗಿದ್ದರು. ಅಮೆರಿಕ, ಇಂಗ್ಲೆಂಡ್, ಯುರೋಪ್, ಸೌತ್ ಈಸ್ಟ್ ಏಷ್ಯಾ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ, ಭಾರತದಲ್ಲಿ ಒಟ್ಟು 90 ಸಂಶೋಧನ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶ್ರೀಯುತರ 38 ಲೇಖನಗಳು ರಾಷ್ಟ್ರ, ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಹತ್ತು ಸಂಶೋಧಕರಿಗೆ ಪಿ.ಹೆಚ್.ಡಿ. ಮಾರ್ಗದರ್ಶನ ಮಾಡಿದ್ದಾರೆ. ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಇವರ 30 ಗ್ರಂಥಗಳು ಪ್ರಕಟವಾಗಿವೆ. ಹಿಂದೂಯಿಸಂ ವಿಶ್ವಕೋಶ, ಕನ್ನಡ–ಇಂಗ್ಲಿಷ್ ನಿಘಂಟುಗಳ ಸಂಪಾದಕರಾಗಿದ್ದರು. ಸಂಸ್ಕೃತ ಭಾಷೆ – ಸಾಹಿತ್ಯ, ಪರಿಸರ ವಿಜ್ಞಾನ, ಸಾಹಸ, ಭಾರತೀಯಶಾಸ್ತ್ರ, ದರ್ಶನಗಳು, ಸೃಜನಶೀಲತೆ ಬಗ್ಗೆ ಇವರ 65 ವಿಡೀಯೋಗಳು ಸಂಚಲನೆಯಲ್ಲಿವೆ. ದೂರದರ್ಶನ ವಾಹಿನಿಗೆ 100ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರಿಗೆ ಐದು ರಾಜ್ಯಪ್ರಶಸ್ತಿ, ನಾಲ್ಕು ರಾಷ್ಟ್ರಪ್ರಶಸ್ತಿ ಹಾಗೂ ಮೂರು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ. ಮಹಾಸಭೆಯ ಪರವಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು.

# ಮಹಾಸಭಾ ಕೇಂದ್ರ ನಿಧಿಗೆ ದೇಣಿಗೆ ನೀಡಿರುವ ದಾನಿಗಳು



ಬೆಂಗಳೂರಿನ
ಶ್ರೀಯುತ ಎಂ.ಆರ್. ಸೇತುರಾಮ್
ಮತ್ತು
ಡಾ॥ ವಿಜಯ ಭರತ್‌ರವರು
ಮಹಾಸಭೆಯ ಕೇಂದ್ರ ನಿಧಿಯಿಂದ
ಅಶಕ್ತ ಮಹಿಳೆಯರಿಗೆ,
ವಿಶೇಷ ಚೇತನಗರಿಗೆ ನೀಡುತ್ತಿರುವ
ಮಾಸಾಶನ ನಿಧಿಗೆ
ರೂ. 40,000/–ಗಳನ್ನು
ನೀಡಿ ಹರಿಸಿದ್ದಾರೆ.
ಶ್ರೀಯುತರಿಗೆ ಮಹಾಸಭೆಯ
ಕೃತಜ್ಞತೆಗಳು.


**ಜಾಹಿರಾತು**

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**
**ದೂರವಾಣಿ : 2672 2267, 98866 55755**

## Sidvin Hygiene Solutions

Attiguppe, Bengaluru, Karnataka

www.sidvinhygiene.com

**Manufaturers & Distributors of :**

- Bio Medical Dust Bins
- Steel Dust Bins
- Garbage Bins
- Hospital Medical Furniture
- Hospital Trolley



*Sudarshan S Bapat*
*Chief of Sidvin Hygiene Solutions*








sidvin.hygiene@gmail.com Cell: 8105386245

*Best Wishes to Abhijathe - 2024 From Sidvin Hygiene Solutions*

*For More details reach out to : sidvin.hygiene@gmail.com , Contact No 8105386245*



ಜಾಹಿರಾತು

## ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಶುಭಾಶಯಗಳೊಂದಿಗೆ



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ,
ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ,
ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

### ಸಂಘದ ಆಡಳಿತ ಮಂಡಳಿ ಸದಸ್ಯರು

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

## ಶ್ರದ್ಧಾಂಜಲಿ



ಶಾಂತಾರಾಮ ಹೆಗಡೆ ಶೀಗೇಹಳ್ಳಿ, ಸಿರ್ಸಿ ಇವರು ಇತ್ತೀಚೆಗೆ ನಿಧನರಾಗಿದ್ದಾರೆ. ಸರಳ ಮತ್ತು ಸಜ್ಜನ ವ್ಯಕ್ತಿಯಾಗಿದ್ದ ಶಾಂತರಾಮ್ ಹೆಗಡೆಯವರು ಸಹಕಾರಿ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಬಹಳಷ್ಟು ಸೇವೆ ಮಾಡಿದ್ದಾರೆ. ಇವರ ಸೇವೆಯನ್ನು ಸ್ಮರಿಸಿ ಇರವರ ಕುಟುಂಬಸ್ಥರಿಗೆ ಸಂತಾಪವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಸೂಚಿಸುತ್ತಿದ್ದೇವೆ.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿ.**

ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ**

ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ, 2ನೇ ಹಂತ, ಮೈಸೂರು – 570 023

**ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ**

ತ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ) ಅಪರ, ಪೂರ್ವ, ಅಂತ್ಯೇಷ್ಠಿ ಕರ್ಮಾದಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಗ್ಗೆ ಪ್ರಾತಃಕಾಲ 6.00 ರಿಂದ 6.30 ವೇದ ಪಠಣ, 6.30 ರಿಂದ 7.00 ವರೆಗೆ ಭಗವದ್ಗೀತಾ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**

**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**

**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ : 8088799540 / 8861998817**

ನಿಮ್ಮ

**ಡಾ. ಬಿ.ಆರ್. ನಟರಾಜ್ ಜೋಯಿಸ್**
ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ

# ಶತಮಾನದ ಚೇತನ – ನಿಟ್ಟೂರು ಶ್ರೀನಿವಾಸರಾಯರು

– ಸುರೇಶ್ ಮೂನ



ಉಲುಚುಕಮ್ಮೆಯವರಾದ ನಿಟ್ಟೂರು ಶ್ರೀನಿವಾಸರಾಯರು ಸುಮಾರು ಎರಡು ಮೂರು ದಶಕಗಳ ಹಿಂದಿನ ಪೀಳಿಗೆಯ ಬಹುತೇಕರಿಗೆ ತಿಳಿದವರಾಗಿದ್ದರು. ಆದರೆ ಇಂದಿನ ಯುವ ಪೀಳಿಗೆಯವರಿಗೆ ಇವರ ಶಿಸ್ತು ಬದ್ಧ ಜೀವನ, ಪ್ರಾಮಾಣಿಕತೆ, ನಿಷ್ಠೆ, ಬದ್ಧತೆ, ಸಾಮಾಜಿಕ ಕಳಕಳಿ ಮುಂತಾದ ಸದ್ಗುಣಗಳಿಂದ ಕೂಡಿದ ಆದರ್ಶ ವ್ಯಕ್ತಿತ್ವದ ಪರಿಚಯ ಅಪರೂಪವೇ. ಬಹುಮುಖಿ ವ್ಯಕ್ತಿತ್ವದ ಈ ಮಹಾನ್ ಚೇತನದ ಪರಿಚಯ ಮತ್ತು ಒಡನಾಟ ನನಗೂ ಇತ್ತೆಂಬುದು ಹೆಮ್ಮೆಯ ಸಂಗತಿ. 2010ರಲ್ಲಿ ಉಲುಚುಕಮ್ಮೆ ಬ್ರಾಹ್ಮಣ ಮಹಾ ಸಭಾ ತನ್ನ ಸಾಧಕರ ಮಾಲೆ ಸರಣಿಯಲ್ಲಿ ಈ ಮಹನೀಯರ ಬಗ್ಗೆಯೂ ಕೃತಿಯನ್ನು ಪ್ರಕಟಿಸಿದೆ. ಅವರ ಪುತ್ರರಾದ ಶ್ರೀ ಎನ್ ಎಸ್ ಸುಬ್ಬಣ್ಣ ಅವರೇ ಇದನ್ನು ಬರೆದಿದ್ದಾರೆ. ಇದಲ್ಲದೆ ಇವರ ಬಗ್ಗೆ ಇನ್ನು ಎರಡು ಮಹತ್ವಪೂರ್ಣ ಕೃತಿಗಳು ಪ್ರಕಟವಾಗಿವೆ.

ನಿಟ್ಟೂರು ಶ್ರೀನಿವಾಸರಾಯರು ಶಾಮಣ್ಣ ಮತ್ತು ಸೀತಮ್ಮ ದಂಪತಿಗಳಿಗೆ ಪುತ್ರರಾಗಿ 1903 ರ ಆಗಸ್ಟ್ 24 ರಂದು ಬೆಂಗಳೂರಿನಲ್ಲಿ ತಮ್ಮ ಸೋದರ ಮಾವ ಎಂ.ಎನ್. ಕೃಷ್ಣರಾವ್ ಅವರ ಮನೆಯಲ್ಲಿ ಜನಿಸಿದರು. ಎಂ ಎನ್ ಕೃಷ್ಣರಾವ್ ಮುಂದೆ ದಿವಾನರಾಗಿಯೂ ಕಾರ್ಯ ನಿರ್ವಹಿಸಿದರು. ಇವರ ಹೆಸರಿನಲ್ಲಿ ಬಸವನಗುಡಿಯಲ್ಲಿ ಇಂದಿಗೂ ಎಂ ಎನ್ ಕೃಷ್ಣರಾವ್ ಪಾರ್ಕ್ ಇದೆ.

ಶ್ರೀನಿವಾಸರಾಯರ ಹೆಸರು ಶ್ರೀನಿವಾಸ ಎಂದಿತ್ತು. ಮುಂದೆ ಬೆಂಗಳೂರಿನಲ್ಲಿ ಕೊಲಿಜಿಯೇಟ್ ಹೈಸ್ಕೂಲಿನಲ್ಲಿ ಎಂಟ್ರೆನ್ಸ್ ತರಗತಿಗೆ ಸೇರಿದಾಗ ಶ್ರೀನಿವಾಸರಾವ್ ಎಂಬ ಇನ್ನು ಕೆಲವು ಹುಡುಗರು ಇದ್ದರು. ಈ ವಿದ್ಯಾರ್ಥಿಗಳನ್ನು ಸುಲಭವಾಗಿ ಗುರುತಿಸಲು ತರಗತಿಯ ಉಪಾಧ್ಯಾಯರು ನಿಟ್ಟೂರು ಶ್ರೀನಿವಾಸರಾವ್ ಎಂದು ದಾಖಲು ಮಾಡಿಕೊಂಡರು. ಈ ಹೆಸರನ್ನು ಮುಟುಕು ಮಾಡಿ ಸ್ನೇಹಿತರು ಇವರನ್ನು ನಿಟ್ಟೂರು ಎಂದೇ ಕರೆಯಲಾರಂಭಿಸಿದರು. ಮುಂದೆ ಇವರು ನಿಟ್ಟೂರು ಶ್ರೀನಿವಾಸರಾಯರು ಎಂದೇ ಪ್ರಸಿದ್ಧರಾದರು.

ಕೊಲಿಜಿಯೇಟ್ ಹೈಸ್ಕೂಲಿನ ನಂತರ ಸೆಂಟ್ರಲ್ ಕಾಲೇಜಿಗೆ ಸೇರಿ ಬಿಎಸ್ಸಿ ಪದವಿಗಾಗಿ ನಾಲ್ಕು ವರ್ಷಗಳ ಕಾಲ ಶಿಕ್ಷಣ ಪಡೆದರು. ಆಗ ಆ ಕಾಲೇಜಿನ ಪ್ರಿನ್ಸಿಪಲ್ ಆಗಿದ್ದ ಮೆಟ್ ಕಾಫ್ ಮತ್ತು ಫಿಸಿಕ್ಸ್ ಪ್ರೊಫೆಸರ್ ಬಿ ವೆಂಕಟೇಶಾಚಾರ್ಯರು ನಿಟ್ಟೂರರನ್ನು ಒಬ್ಬ ಪ್ರತಿಭಾವಂತ ವಿದ್ಯಾರ್ಥಿ ಎಂದು ಪರಿಗಣಿಸಿದ್ದರು. ಬಿಎಸ್ಸಿ ನಂತರ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಉನ್ನತ ಶಿಕ್ಷಣವನ್ನು ಪಡೆಯಬೇಕೆಂಬ ಹಂಬಲ ಅವರಿಗಿತ್ತು. ಆದರೆ ಕಾರಣಾಂತರಗಳಿಂದ ಅಲ್ಲಿಗೆ ಸೇರಲಾಗದೆ 1924 ರಲ್ಲಿ ಮದರಾಸಿನ ಲಾ ಕಾಲೇಜ್ ಸೇರಿದರು. 1927 ರಲ್ಲಿ ಬಿ ಎಲ್ ಪರೀಕ್ಷೆಯನ್ನು ಮುಗಿಸಿ ಕಾನೂನು ಕ್ಷೇತ್ರದ ಪದವೀಧರರಾದರು. ಬೆಂಗಳೂರಿಗೆ ಹಿಂತಿರುಗಿ ಪ್ರಾಮಾಣಿಕತೆ, ನಿಷ್ಠೆ, ಪರಿಶ್ರಮ ಮುಂತಾದ ಸದ್ಗುಣಗಳ ಮೂಲಕ ತಮ್ಮ ಕ್ಷೇತ್ರದಲ್ಲಿ ಹಂತ ಹಂತವಾಗಿ ಮೇಲೇರಿ ಜಸ್ಟಿಸ್ ಶ್ರೀನಿವಾಸರಾಯರು ಆದರು. ವಿಭಿನ್ನ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಆಸಕ್ತಿ, ಜವಾಬ್ದಾರಿಗಳ ಸಮರ್ಪಕ ನಿರ್ವಹಣೆ, ಜನಗಳ ಜೊತೆ ಸ್ನೇಹಪೂರ್ವಕ ಒಡನಾಟ. ಇವುಗಳಿಂದಾಗಿ ನಿಟ್ಟೂರು ಮುಂದೆ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದರು. ನಿಜಕ್ಕೂ ಒಬ್ಬ ವ್ಯಕ್ತಿ ಇಷ್ಟು ದೊಡ್ಡ ಪ್ರಮಾಣದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬಹುದು ಎಂಬುದು ಇಂದಿನ ಪೀಳಿಗೆಯವರಿಗೆ ಮಾದರಿಯಾಗಿದೆ.

ನಿಟ್ಟೂರರು ಇನ್ನು ಕೊಲಿಜಿಯೇಟ್ ಹೈಸ್ಕೂಲಿನಲ್ಲಿದ್ದಾಗಲೇ ಸೆಂಟ್ರಲ್ ಕಾಲೇಜ್‌ನ ಕರ್ನಾಟಕ ಸಂಘ ದ ಸಂಬಂಧವನ್ನು ಹೊಂದಿದ್ದರು. ನಂತರ ಎರಡು ವರ್ಷಗಳ ಕಾಲ ಅದರ ಕಾರ್ಯದರ್ಶಿಯಾಗಿಯೂ ಆಗಿದ್ದರು. ಪ್ರಿನ್ಸಿಪಾಲ್ ಮೆಟ್ ಕಾಫ್ ಮತ್ತು ಸೆಲ್ ಇವರುಗಳ ನಿಕಟ ಸಂಪರ್ಕವು ಇತ್ತು. ಹೀಗಾಗಿ ಈ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು. ಇನ್ನು 19 ವರ್ಷಗಳು ಆಗಿದ್ದಾಗಲೇ ತಮ್ಮ ಗುರುಗಳಾದ ಟಿ ಎಸ್ ವೆಂಕಣ್ಣಯ್ಯ ಅವರ ಸಲಹೆಯಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿ ನಂತರ ಕಾರ್ಯಕಾರಿ ಸಮಿತಿಗೂ ಬಂದರು. ಪರಿಷತ್ತಿನ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾ ಅಲ್ಲಿನ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಇದ್ದ ಇವರಿಗೆ ಬೆಂಗಳೂರಿನ ಹಾಗೂ ನಮ್ಮ ನಾಡಿನ ಹಲವಾರು ಕಿರಿಯ ಹಿರಿಯ ಸಾಹಿತಿಗಳ, ಕಲಾವಿದರ ಹಾಗೂ ವಿದ್ವಾಂಸರುಗಳ ನಿಕಟ ಸಂಪರ್ಕ ಬೆಳೆಯಿತು.

ಡಾ. ಡಿ ವಿ ಗುಂಡಪ್ಪ ಅವರ ಆತ್ಮೀಯ ಮಿತ್ರರೂ ಆಗಿದ್ದ ಇವರು ಅವರ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಪ್ರಾರಂಭದ ಹಂತದಿಂದ ತಮ್ಮ ಜೀವನದ ಕೊನೆಗಾಲದವರೆಗೂ ಇದ್ದು ಅದರ ಬೆಳವಣಿಗೆಗೆ ಪ್ರಮುಖವಾಗಿ ಕಾರಣರಾದರು. ಬೆಂಗಳೂರಿನ ಮತ್ತೊಂದು ಪ್ರಸಿದ್ಧ ನಾಟಕ ಸಂಸ್ಥೆಯಾದ ಅಮೆಚೂರ್ ಡ್ರಾಮಾಟಿಕ್ ಅಸೋಸಿಯೇಷನ್ [ಎ ಡಿ ಎ] ಸಂಸ್ಥೆಯೊಂದಿಗೆ 1919 ರಿಂದಲೇ ನಿಕಟ ಸಂಪರ್ಕವಿತ್ತು. ಈ ಸಂಸ್ಥೆಯು ರಂಗಭೂಮಿಯ ಚಟುವಟಿಕೆಯ ಜೊತೆಗೆ 'ರಂಗಭೂಮಿ' ಎಂಬ ನಿಯತಕಾಲಿಕೆಯನ್ನು ಪ್ರಕಟಿಸುತ್ತಿತ್ತು. ಅದರಲ್ಲೂ ಇವರ ಸಕ್ರಿಯ ಪಾತ್ರವಿತ್ತು.

ಶತಮಾನಕ್ಕೂ ಹಳೆಯ ಪ್ರತಿಷ್ಠಿತ ಮಿಥಿಕ್ ಸೊಸೈಟಿಯೊಂದಿಗೆ ಒಡನಾಟವಿತ್ತು .ಅದರ ಪ್ರಪ್ರಥಮ ಗೌರವ ಸದಸ್ಯರು ಆಗಿದ್ದರು. ಹೈಕೋರ್ಟ್ಗೆ ನಡೆದು ಹೋಗುವಾಗಲೆಲ್ಲ ಇಲ್ಲಿಗೂ ಬಂದು ಅಧ್ಯಯನಕ್ಕಾಗಿ ಅಲ್ಲಿಗೆ ಬರುತ್ತಿದ್ದ ಬಿ ಎಂ ಶ್ರೀಕಂಠಯ್ಯ, ದೇವುಡು ಮುಂತಾದ ಸಾಹಿತಿಗಳೊಂದಿಗೆ ಸ್ವಲ್ಪಕಾಲ ಸಮಾಲೋಚನೆ ನಡೆಸುತ್ತಿದ್ದರು. ಈ ಸಂಸ್ಥೆಯ ಯಾವ ಕಾರ್ಯಕ್ರಮಗಳನ್ನು ಅವರು ತಪ್ಪಿಸುತ್ತಿರಲಿಲ್ಲ

ಗಾಂಧಿ ಸ್ಮಾರಕ ನಿಧಿ, ಗಾಂಧಿ ಸ್ಮಾರಕ ಪ್ರತಿಷ್ಠಾನ, ಪೃಥ್ವಿ ಜೀವನ ಕೇಂದ್ರ, ಬಿಎಂ ಪ್ರತಿಷ್ಠಾನ. ಇಂಡಿಯನ್ ನ್ಯಾಷನಲ್ ಸೆಂಟರ್ ಆಫ್ ವರ್ಲ್ಡ್ ಯೂನಿಯನ್, ಬೆಂಗಳೂರು ಅರಬಿಂದೋ ಸೊಸೈಟಿ, ವಿಜಿಲ್ ಇಂಡಿಯಾ, ಕರ್ನಾಟಕ ಪ್ರಕೃತಿ ಚಿಕಿತ್ಸಾ ಪರಿಷತ್, ತಾಳವಾದ್ಯ ಕೇಂದ್ರ, ಸೀನಿಯರ್ ಸಿಟಿಜನ್ಸ್ ಕ್ಲಬ್, ಪೀಪಲ್ಸ್ ಟ್ರಸ್ಟ್, ಸುಮಂಗಲಿ ಸೇವಾಶ್ರಮ ಟ್ರಸ್ಟ್ ,ಹೀಗೆ ಹತ್ತಾರು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿಯೂ, ಅಧ್ಯಕ್ಷರಾಗಿಯೂ, ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಾ ಅವುಗಳ ಏಳಿಗೆಗೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಗಾಂಧೀಜಿಯವರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದ ನಿಟ್ಟೂರು ನಮ್ಮ ನಾಡಿನ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರಮುಖ ಬೆಂಬಲಿಗರಾಗಿದ್ದರು.

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿವೆ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಇವರು ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಸನ್ಮಾನಿತರಾಗಿದ್ದಾರೆ.

ನಿಟ್ಟೂರರನ್ನು ಸಂಪರ್ಕಿಸಿದ ಯಾರೇ ಆಗಲಿ ಅವರಲ್ಲಿನ ಎರಡು ಪ್ರಮುಖ ಗುಣಗಳಿಗೆ ಮಾರು ಹೋಗುತ್ತಿದ್ದರು. ಒಂದು ಅವರ ಅಪೂರ್ವ ಸಜ್ಜನಿಕೆ. ಎರಡನೆಯದು ಅವರ ಅಪಾರ ನೆನಪಿನ ಶಕ್ತಿ. ಸರ್ಕಾರದ, ಸಂಘ-ಸಂಸ್ಥೆಗಳ, ಬಂಧುಮಿತ್ರರ ಕಾರ್ಯಕ್ರಮಗಳಿಗೆ ಇವರನ್ನು ಸಾಮಾನ್ಯವಾಗಿ ಆಹ್ವಾನಿಸುತ್ತಿದ್ದರು. ಬೆಳಗ್ಗೆ ಆ ಸಮಾರಂಭಗಳಿಗೆ ಹೋಗುವ ಸಮಯವನ್ನು ನಿಗದಿಪಡಿಸಿಕೊಂಡು, ಆಹ್ವಾನ ಪತ್ರಿಕೆಗಳನ್ನು ಅದೇ ರೀತಿ ಜೋಡಿಸಿಕೊಂಡು ತಮ್ಮ ಕಾರಿನಲ್ಲಿ ಹೋಗುತ್ತಿದ್ದರು. ಇವರ ಆಗಮನವೇ ಆಹ್ವಾನ ಮಾಡಿದವರಿಗೆ ಒಂದು ಹೆಮ್ಮೆಯ ಸಂಗತಿ ಆಗಿರುತ್ತಿತ್ತು ಅಲ್ಲಿ ಒಂದು 10 ನಿಮಿಷ ಇದ್ದು ಅವರನ್ನು ಆಶೀರ್ವದಿಸಿ ಅಥವಾ ಶುಭಕೋರಿ ಮುಂದೆ ತೆರಳುತ್ತಿದ್ದರು.

ಇನ್ನು, ಅವರ ನೆನಪಿನ ಶಕ್ತಿಯಂತೂ ಅತ್ಯದ್ಭುತವಾಗಿತ್ತು. ಸಭೆ ಸಮಾರಂಭಗಳಲ್ಲಿ ಮಾತನಾಡಬೇಕಾದರೆ ಹಲವಾರು ದಶಕಗಳ ಹಿಂದಿನ ಸಂಗತಿಗಳನ್ನು ನೆನಪಿಸಿಕೊಂಡು ಸಭಿಕರಿಗೆ ಹೇಳುತ್ತಿದ್ದರು. ಅವರಿಗೆ ಸುಮಾರು 90 ವರ್ಷಕ್ಕೂ ಹೆಚ್ಚು ವಯಸ್ಸಾಗಿದ್ದಾಗ ಮಿಥಿಕ್ ಸೊಸೈಟಿಯಲ್ಲಿ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರ ಬಗ್ಗೆ ನಡೆದ ಸಮಾರಂಭದಲ್ಲಿ ಸುಮಾರು ಅರ್ಧ ಗಂಟೆಗಳ ಕಾಲ ಅವರ ಬಗ್ಗೆ ಒಂದು ಸಣ್ಣ ಕಾಗದವನ್ನು ಕೈಯಲ್ಲಿ ಇಟ್ಟುಕೊಳ್ಳದೆ ನಿರರ್ಗಳವಾಗಿ ಮಾತನಾಡಿದ್ದರು.

ಇಂತಹ ಮಹನೀಯರ ಒಡನಾಟ ನನಗೆ ದೊರೆತಿದ್ದು ನನ್ನ ಪುಣ್ಯ ಎಂದೇ ಹೇಳಬೇಕು. ಏಕೆಂದರೆ ನಾನು ಬೆಂಗಳೂರಿನ ಬಗ್ಗೆ ಅಧ್ಯಯನ ಮಾಡುವ ಸಂದರ್ಭದಲ್ಲಿ ಅನೇಕ ವೇಳೆ ಎನ್ಸೈಕ್ಲೋಪೀಡಿಯಾದಂತೆ ಇದ್ದ ಇವರನ್ನುಭೇಟಿ ಮಾಡಿ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದೆ. ಹಾಗೆ ಹೋಗುವಾಗ ಸ್ವಲ್ಪವಾದರೂ ಹೋಂವರ್ಕ್ ಮಾಡಿಕೊಂಡು ಹೋಗಬೇಕಾಗಿತ್ತು. ಏಕೆಂದರೆ ನಾನು ಯಾವುದೇ ವಿಷಯವನ್ನು ಕೇಳಿದರೂ ಅದಕ್ಕೆ ಸಂಬಂಧಿಸಿದ ವ್ಯಕ್ತಿ ಅಥವಾ ಸಂದರ್ಭದ ಉಲ್ಲೇಖ ಮಾಡಿ ಇದು ನಿಮಗೆ ಗೊತ್ತಿಲ್ಲವೇ ಎಂದು ಕೇಳಿ ಬಿಡುತ್ತಿದ್ದರು . ಆಗ ಸ್ವಲ್ಪಮಟ್ಟಿಗಾದರೂ ಉತ್ತರಿಸಲು ನನ್ನ ಬಳಿಯು ಒಂದಿಷ್ಟು ವಿಷಯ ಇರಬೇಕಾಗಿತ್ತು.

ಬಹಳ ವರ್ಷಗಳ ಹಿಂದೆಯೇ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ದೊಡ್ಡದೊಂದು ಕಟ್ಟಡವನ್ನು ಸರ್ಕಾರ ಕಟ್ಟಲು ತೀರ್ಮಾನಿಸಿತು. ಇದು ಈ ನಗರದ ಹಸಿರು ಸಂಪತ್ತಿಗೆ ಮಾರಕವಾಗುತ್ತದೆ ಎಂದು ಸಾರ್ವಜನಿಕರು ಪ್ರತಿನಿತ್ಯ ಪಾರ್ಕಿಗೆ ಬಂದು ವಿರೋಧ ವ್ಯಕ್ತಪಡಿಸುತ್ತಿದ್ದರು.

ಆಗ ನಾನು ಈ ಉದ್ಯಾನದ ಬಗ್ಗೆ ಅಧ್ಯಯನ ಮಾಡಿ ಒಂದು ಸ್ಥಿರ ಚಿತ್ರ ಪ್ರದರ್ಶನವನ್ನು ಸಿದ್ಧಗೊಳಿಸಿದೆ. ಅದನ್ನು ಪಾರ್ಕಿನ ಬಾಲ ಭವನದಲ್ಲಿ ಪ್ರದರ್ಶನ ಮಾಡುವ ಏರ್ಪಾಡು ಮಾಡಿದ್ದೆ.ಅದಕ್ಕೆ ಮುಖ್ಯ ಅತಿಥಿಯಾಗಿ ನಿಟ್ಟೂರರನ್ನು ಆಹ್ವಾನಿಸಿದ್ದೆ. ಅವರು ಸಂತೋಷದಿಂದ ಇದಕ್ಕೆ ಒಪ್ಪಿದರು. ಕಾರ್ಯಕ್ರಮ ಒಂದೆರಡು ದಿನ ಇರಬೇಕಾದರೆ ನ್ಯಾಯಾಲಯದಿಂದ ಈ ಪಾರ್ಕಿನ ಬಗ್ಗೆ ಯಾರು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾಗಲಿ, ವಿರೋಧ ಪಡಿಸುವುದಾಗಲಿ ಮಾಡಬಾರದೆಂಬ ಸೂಚನೆ ಬಂದಿತ್ತು. ಆ ವೇಳೆಗಾಗಲೆ ಪತ್ರಿಕೆಗಳಲ್ಲಿ ನನ್ನ ಕಾರ್ಯಕ್ರಮದ ಬಗ್ಗೆ ಪ್ರಕಟವಾಗಿ ಹೋಗಿತ್ತು. ನಾನು ನಿಟ್ಟೂರರ ಬಳಿ ಹೋಗಿ ನನ್ನ ಆತಂಕವನ್ನು ವ್ಯಕ್ತಪಡಿಸಿದೆ. ಕೂಡಲೇ ಅವರು, 'ನೀವು ಬೆಂಗಳೂರಿನ ಒಬ್ಬ ಪ್ರಜ್ಞಾವಂತ ನಾಗರಿಕ. ನಿಮ್ಮ ಅಭಿಪ್ರಾಯವನ್ನು ತಿಳಿಸಲು ಯಾರು ಅಡ್ಡಿ ಮಾಡಲು ಸಾಧ್ಯ. ನಾನು ಬರುತ್ತೇನೆ. ಮುಂದುವರಿಸಿ' ಎಂದು ಬಿಟ್ಟರು. ಒಂದೆರಡು ನಿಮಿಷ ಬಿಟ್ಟು, 'ಬೇಡಪ್ಪ. ನೀವು ಸರ್ಕಾರಿ ನೌಕರರು. ನಿಮ್ಮ ಅಭಿಪ್ರಾಯವನ್ನು ಪತ್ರಿಕೆಯವರು ಒಂದು ವೇಳೆ ಬೇರೆ ರೀತಿಯಲ್ಲಿ ವರದಿ ಮಾಡಿದರೆ ನ್ಯಾಯಾಲಯದ ನಿಂದನೆ ಎಂದು ಪರಿಗಣಿಸಿ ಬಿಡುತ್ತಾರೆ. ನಿಮಗೆ ತೊಂದರೆ ಆಗುತ್ತದೆ. ಕಾರ್ಯಕ್ರಮವನ್ನು ಮುಂದೆ ಹಾಕಿ'ಎಂದು ಸಲಹೆ ಮಾಡಿದರು. ನಾನು ಹಾಗೆ ಮಾಡಿದೆ. ಇವೆಲ್ಲಾ ಗಲಾಟೆಗಳು ಕಳೆದು ಒಂದೆರಡು ತಿಂಗಳ ನಂತರ ಬೇರೊಂದು ಜಾಗದಲ್ಲಿ ನಿಟ್ಟೂರು ಅವರನ್ನು ಆಹ್ವಾನಿಸಿ ಆ ಕಾರ್ಯಕ್ರಮವನ್ನು ನಡೆಸಿದೆ. ಅವರು ಬಹಳ ಸಂತೋಷಪಟ್ಟರು. ಅಲ್ಲದೆ ಅವರೇ ಈ ಕಾರ್ಯಕ್ರಮವನ್ನು ಮುಂದೂಡಲು ಬಂದ ಸಂದರ್ಭವನ್ನು ಸಭಿಕರಿಗೆ ತಿಳಿಸಿದರು.

ಸರಳ ಆದರೆ ದಿಟ್ಟ, ಸ್ಪಷ್ಟ ನಿಲುವಿನ ನಿಟ್ಟೂರರು ನನ್ನ ಈ ನಗರದ ಇತಿಹಾಸದ ಚಿಂತನೆಗೆ ಮತ್ತು ಬರವಣಿಗೆಗೆ ಸ್ಫೂರ್ತಿ ನೀಡಿದ್ದಾರೆ. ಅವರನ್ನು ನಾನೆಂದು ಮರೆಯಲಾರೆ. ಹೀಗೆ ಇನ್ನು ಅನೇಕ ವ್ಯಕ್ತಿಗಳಿಗೆ ನೆರವಾದ ಅಪೂರ್ವ ವ್ಯಕ್ತಿತ್ವ ಇವರದ್ದು. ಇಂದಿನ ಪೀಳಿಗೆಯವರಿಗೆ ಒಂದು ಅಮೂಲ್ಯ ರೋಲ್ ಮಾಡೆಲ್ ಆಗಿರುವ ಇವರು 2004 ರ ಆಗಸ್ಟ್ 12ರಂದು ತಮ್ಮ ಅರ್ಥಪೂರ್ಣ ಶತಮಾನದ ಜೀವನವನ್ನು ಪೂರ್ಣಗೊಳಿಸಿ ದೈವಾಧೀನರಾದರು.

# ಪಂಡಿತ್ ಗೇಂದಾಲಾಲ್ ದೀಕ್ಷಿತ್




**ಜನಿವಾರ ಧರಿಸಿ, ಮೂಗು ಹಿಡಿದು, ಸಂಧ್ಯಾವಂದನೆ ಮಾಡುತ್ತಾ ಕುಳಿತಿರುವವರಲ್ಲೂ, ಪುಳಿಚಾರು ತಿನ್ನುವವವರಲ್ಲೂ ಪೌರುಷತ್ವ, ಹೋರಾಟ, ಕ್ರಾಂತಿ, ಸಿಡಿಗುಂಡಿಗೆ, ನೇಣಿಗೆ ಎದೆಯೊಡ್ಡುವ ಪುರುಷಸಿಂಹತ್ವ, ವೀರತ್ವ ತುಂಬಿರುತ್ತದೆ ಎಂಬುದುಕ್ಕೆ ಗೇಂದಾಲಾಲ್ ದೀಕ್ಷಿತನ ಬದುಕೇ ಸಾಕ್ಷೀಭೂತವಾಗಿದೆ"**

ಗುಂಡಿಕ್ಕಿ ಓಡು ಅಥವಾ ಎದುರಿಸಿ ಸಾಯಿ, ಸೆರೆ ಸಿಕ್ಕರೆ ಜೈಲು, ನೇಣುಗಂಬ, ಇಲ್ಲದಿದ್ದರೆ ಹೋರಾಟದಲ್ಲಿ ಸಾವು. ನಾವು ಸಾಯುತ್ತೇವೆ ದೇಶ ಎಚ್ಚೆತ್ತುಕೊಳ್ಳುತ್ತದೆ. ಇದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕ್ರಾಂತಿಕಾರಿ ಯುವಕರ ಬಾಯಲ್ಲಿ ಬರುತ್ತಿದ್ದ ನಿತ್ಯಮಂತ್ರ. ತಂದೆತಾಯಿಗಳ ಪ್ರೀತಿ, ಮೋಹ, ಮಮತೆ, ಆಸೆಗಣ್ಣು ಇದಾವುದನ್ನು ಲೆಕ್ಕಿಸದೆ ದೇಶ, ಸ್ವಾತಂತ್ರ್ಯ, ಹೋರಾಟ, ಜೈಲು, ಪ್ರಾಣತ್ಯಾಗ ಇವುಗಳನ್ನೇ ತಲೆಯಲ್ಲಿ ತುಂಬಿಸಿಕೊಂಡು ತಾಯಿ ಭಾರತಿಯ ವಿಮೋಚನೆಗೆ ಹೋರಾಡಿದ ಅನೇಕ ಯುವಕ ಕ್ರಾಂತಿಕಾರಿಗಳಲ್ಲಿ ಗೇಂದಾಲಾಲ್ ದೀಕ್ಷಿತ್ ಒಬ್ಬ. ಕೈಯಲ್ಲಿ ಜಪಮಾಲೆ, ಬಾಯಲ್ಲಿ ಮಂತ್ರ, ಜಪ, ತಪ; ಸಂಧ್ಯಾವಂದನೆ, ಪೂಜೆ, ಪುನಸ್ಕಾರಗಳಲ್ಲಿ ನಿರತರಾಗಿ ಪುರದ ಹಿತವನ್ನೇ ಬಯಸುವ ಪುರೋಹಿತ ಜನಾಂಗಕ್ಕೆ ಸೇರಿದ ಅಪ್ಪಟ ದೇಶಭಕ್ತ. ಗೇಂದಾಲಾಲ್ ದೀಕ್ಷಿತ ಜನ್ಮ ತಾಳಿದ್ದು ಆಗ್ರಾಜಿಲ್ಲೆಯ ಮಯಿ ಎಂಬ ಗ್ರಾಮದಲ್ಲಿ. ಜಮೀನ್ದಾರರಾದ ಬೋಲಾನಾಥ ದೀಕ್ಷಿತ್ ಮತ್ತು ವಿಚಿತ್ರಾದೇವಿಯವರ ಮಗನಾಗಿ ಭಾರತಮಾತೆಯ ಅಪೂರ್ವ ಮಕ್ಕಳಲ್ಲಿ ಒಬ್ಬನಾಗಿ 1890 ನವೆಂಬರ್ 30 ರಂದು ಜನಿಸುತ್ತಾನೆ. ಆದರೆ ದುರ್ವಿಧಿ ಇಣುಕಿ ದೀಕ್ಷಿತನ ಮೂರನೇ ವರ್ಷದಲ್ಲೇ ಅವನ ತಾಯಿ ವಿಚಿತ್ರಾದೇವಿ ಕಾಲವಾದರು. ಅವನ ತಂದೆಯೇ ಅವನಿಗೆ ತಾಯಿಯಾದರು. ಬಹಳ ಪ್ರೀತಿಯಿಂದ ಅವನನ್ನು ಸಾಕಿ ಸಲಹಿದರು .ಅವನಿಗೆ ಶಿಕ್ಷಣದ ವಯಸ್ಸಾದಾಗ ಮಯಿ ಗ್ರಾಮದಲ್ಲೇ ಹಿಂದಿ ಕಲಿಸುವ ವ್ಯವಸ್ಥೆ ಮಾಡಿದರು. ಪಕ್ಕದ ಊರು ಇಟಾವಾದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಓದು ಅಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದ. ಕಾಲೇಜು ಸೇರಿ ಉನ್ನತ ವ್ಯಾಸಂಗ ಮಾಡಿ ವೈದ್ಯನಾಗಬೇಕೆಂದು ಆಸೆ ಇತ್ತು. ಆದರೆ ಕಾರಣಾಂತರದಿಂದ ಅದು ಈಡೇರಲಿಲ್ಲ. ಓದು ನಿಂತಿತು. ಇನ್ನು ಕೈಗೊಂದು ಉದ್ಯೋಗ ಬೇಕಲ್ಲ. ಒಡೈಯ ಎಂಬ ಊರಿನಲ್ಲಿ ಇದ್ದಂಥ ದಯಾನಂದ್ ಆಂಗ್ಲೋ ವೇದಿಕ್ ಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಸೇರಿದ. ಮಕ್ಕಳಿಗೆ ಪಾಠ ಹೇಳುವುದು ಅವನಿಗೆ ಇಷ್ಟವಾಗಿತ್ತು.

– **ಕೆ.ಎನ್. ಛಾಯಾಪತಿ,** ಮಹಾಸಭಾ. ಉಪಾಧ್ಯಕ್ಷರು

1905 ನೆಯ ಇಸವಿಯಲ್ಲಿ ಭಾರತೀಯರನ್ನು ರೊಚ್ಚಿಗೆಬ್ಬಿಸುವ ಘಟನೆ ಬಂಗಾಳದಲ್ಲಿ ನಡೆಯಿತು. ಒಡೆದಾಳುವ ನೀತಿಗೆ ಹೆಸರಾಗಿದ್ದ ಕುತಂತ್ರಿ ಬ್ರಿಟಿಷರು, ಅಖಂಡವಾಗಿದ್ದ ಭಾರತವನ್ನು ತುಂಡರಿಸುವ ಮೊದಲ ಹೆಜ್ಜೆಯಾಗಿ ಪೂರ್ಣಬಂಗಾಳ ಪ್ರಾಂತ್ಯವನ್ನು ಎರಡು ತುಂಡು ಮಾಡುವ ಹರಸಾಹಸಕ್ಕೆ ಕೈ ಹಾಕಿದರು. ಇದು ಬಂಗಾಳವಿರಲಿ ಇಡೀ ಭಾರತೀಯರಿಗೇ ಸಿಡಿಲು ಬಡಿದಂತಾಯಿತು. ಒಂದೇ ಭಾಷೆ, ಒಂದೇ ಸಂಸ್ಕೃತಿ ಉಳ್ಳವರಾಗಿ ಎಷ್ಟೋ ವರ್ಷಗಳಿಂದ ಅಣ್ಣ ತಮ್ಮಂದಿರಂತೆ ಬಾಳುತ್ತಿದ್ದವರು ಈಗ ಬೇರೆ ಬೇರೆ ಬದುಕಲು ಹೇಗೆ ಸಾಧ್ಯ. ಬಂಗಾಳಿಗರು ರೋಷದಿಂದ ದಂಗೆ ಎದ್ದರು. ವಿದ್ಯಾರ್ಥಿಗಳು ಶಾಲೆಯನ್ನು ತೊರೆದರು. ಸರ್ಕಾರಿ ನೌಕರರು ನೌಕರಿಗೆ ಬಹಿಷ್ಕಾರ ಹಾಕಿ ರಸ್ತೆಗಿಳಿದರು. ಅದರೂ ಆಂಗ್ಲಸರ್ಕಾರ 1905 ಅಕ್ಟೋಬರ್ 16ರಂದು ಬಂಗಾಳವನ್ನು ಅಧಿಕೃತವಾಗಿ ತುಂಡರಿಸಿಯೇ ಬಿಟ್ಟಿತು.ಭಾರತೀಯರು ಆ ದಿನವನ್ನು ಶೋಕ ದಿನವೆಂದು ಕರೆದು ಬಂಗಾಳವನ್ನು ಬಂದ್ ಮಾಡಿಸಿ ಹರತಾಳ ನಡೆಸಿದರು. ಬ್ರಿಟಿಷರನ್ನು ಭಾರತದಿಂದ ತೊಲಗಿಸುವ ಪ್ರತಿಜ್ಞೆ ಮಾಡಿ ಕೈಗೆ ಕಂಕಣ ಕಟ್ಟಿಕೊಂಡರು.ಎಲ್ಲರ ಬಾಯಲ್ಲಿ *ವಂದೇ ಮಾತರಂ* ರಾಷ್ಟ್ರೀಯ ಘೋಷಣೆ ಮೊರೆಯಿತು.ಇದು ಬ್ರಿಟಿಷರ ಅವಿವೇಕದ ಕ್ರಮವಾದರೆ ಭಾರತೀಯರಿಗೆ ನಿದ್ದೆಯಿಂದ ಎಬ್ಬಿಸಿ ಎಂದು ಸ್ವದೇಶೀ ಭಾವನೆ ಜಾಗೃತಗೊಳಿಸಿ ಸ್ವದೇಶಿ ಚಳುವಳಿಯ ಪ್ರಾರಂಭಕ್ಕೆ ನಾಂದಿಯಾಯಿತು. ಅಷ್ಟೇ ಅಲ್ಲ ದೇಶಾದ್ಯಂತ ಕಾಡ್ಗಿಚ್ಚಿನಂತೆ ಹರಡತೊಡಗಿತು.ಇದನ್ನೆಲ್ಲಾ ಗಮನಿಸುತ್ತಿದ್ದ ಗೇಂದಾಲಾಲನಿಗೆ ಶ್ರೀರಾಮನಿಗಾಗಿ ಆಂಜನೇಯನಲ್ಲಿ ಶಕ್ತಿ ಸಂಚಯವಾದಂತೆ ದೇಶಭಕ್ತಿಯ ಕಿಚ್ಚು ಹತ್ತಿಕೊಂಡಿತು.

ಸೀತಾಮಾತೆಯ ಬಂಧ ವಿಮುಕ್ತಿಗಾಗಿ ಮಾರುತಿ ಲಂಕೆಗೆ ಹಾರಿದಂತೆ ಭಾರತಮಾತೆಯ ಮುಕ್ತಿಗಾಗಿ ಹೋರಾಟದ ಅಗ್ನಿಕುಂಡಕ್ಕೆ ಗೇಂದಾಲಾಲ ಹಾರಿದನು.ಮನಬಂದಂತೆ ಆಳುತ್ತಿದ್ದ ಆಂಗ್ಲರನ್ನು ಕಂಡು ಅವನಿಗೆ ತಡೆಯಲಾರದ ಕೋಪ ಆವರಿಸಿತು. ಆಂಗ್ಲರು ನಡೆಸುತ್ತಿದ್ದ ದೌರ್ಜನ್ಯ, ಅತ್ಯಾಚಾರ, ಹಿಂಸೆಗಳನ್ನು ಸಹಿಸಲಾಗಲಿಲ್ಲ. ಈ ಬಿಸಿ ರಕ್ತದ ತರುಣ ಗೇಂದಾಲಾಲನಿಗೆ ಕೇವಲ ಶಾಂತಿಮಂತ್ರದಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಿಲ್ಲ ಎಂದೆನಿಸಿತು. ಅವರನ್ನು ಬಗ್ಗು ಬಡಿಯಲು,ಧ್ವಂಸ ಮಾಡಲು ಮುಳ್ಳಿಗೆ ಮುಳ್ಳು ಎಂಬಂತೆ ಹಿಂಸಾ ಮಾರ್ಗವೇ ಅನಿವಾರ್ಯ. ಮದ್ದು, ಗುಂಡು, ಬಂದೂಕು, ಪಿಸ್ತೂಲು, ಬಾಂಬು ಇವುಗಳಿಂದ ಉತ್ತರಿಸುವುದೇ ಬ್ರಿಟಿಷರಿಗೆ ಯೋಗ್ಯಮಾರ್ಗ

ಎನಿಸಿತು.

ಸ್ವದೇಶಿ ಚಳುವಳಿ ಮಹಾರಾಷ್ಟ್ರದಲ್ಲಿ ಪಸರಿಸಿತು. ಪ್ರಸಿದ್ಧ ನಾಯಕರಾದ ಜನಿವಾರಧಾರಿ ಲೋಕಮಾನ್ಯ ಬಾಲಗಂಗಾಧರ ತಿಲಕರ ಮುಂದಾಳುತನದಲ್ಲಿ ದೇಶಭಕ್ತರೆಲ್ಲ ಒಂದಾಗಿದ್ದರು. ಅವರು ಜನರನ್ನು ತಮ್ಮ ತೀಕ್ಷ್ಣ ಬರವಣಿಗೆಯಿಂದ ಬಡಿದೆಬ್ಬಿಸುತ್ತಿದ್ದರು. ವೀರ ಶಿವಾಜಿಯ ಹೋರಾಟ, ದೇಶಭಕ್ತಿಗಳ ಬಗ್ಗೆ ಜನರಿಗೆ ತಿಳಿಸಿ ರಾಷ್ಟ್ರಭಕ್ತಿಯನ್ನು, ಪೌರುಷವನ್ನು ತುಂಬಿಸುತ್ತಿದ್ದರು. ಶಿವಾಜಿ ಜಯಂತಿಯನ್ನು ಆಚರಿಸುತ್ತಾ, ಜನರಿಗೆ ಆಂಗ್ಲರ ದಬ್ಬಾಳಿಕೆಯನ್ನು ವಿವರಿಸುತ್ತಾ ಹೋರಾಟಕ್ಕೆ ಸಜ್ಜುಗೊಳಿಸುತ್ತಿದ್ದರು. ತಿಲಕರ ಬರವಣಿಗೆ, ಭಾಷಣ, ಹೋರಾಟದ ಮೇಲೆ ತುಂಬಾ ಪರಿಣಾಮ ಬೀರಿತು. ಶಿವಾಜಿಯ ಬದುಕು ಅವನಿಗೆ ಆದರ್ಶವಾಯಿತು. ಶತೃಗಳನ್ನು ನಾಶ ಮಾಡಲು ಯಾವ ರೀತಿ ಉಪಾಯ ಮಾಡಬೇಕು ಎಂಬುದನ್ನು ಶಿವಾಜಿಯಿಂದ ಕಲಿಯಬೇಕೆಂದೆನಿಸಿತು. ಈ ದುಷ್ಟ ಆಂಗ್ಲರನ್ನು ದೇಶದಿಂದ ಹೊರಗಟ್ಟ ಬೇಕಾದರೆ ಕೇವಲ ಒಬ್ಬನಿಂದ ಅಸಾಧ್ಯ ಎಂದು ಯುವಕರನ್ನು ಸಂಘಟಿಸಿ ಒಂದು ಸಂಘ ಕಟ್ಟಬೇಕು ಎಂದು ನಿಶ್ಚಯಿಸಿದ. ಆ ಸಂಸ್ಥೆಗೆ ಶಿವಾಜಿ ಹೆಸರಿಟ್ಟರೆ ಯುವಕರಲ್ಲಿ ಜಾಗೃತಿ ಮೂಡಿ ದೇಶದ ಕೆಲಸಕ್ಕೆ ಟೊಂಕ ಕಟ್ಟಿ ನಿಲ್ಲುತ್ತಾರೆ ಎಂದು ಭಾವಿಸಿ ಕೂಡಲೇ ಒಂದು ಸಂಸ್ಥೆ ಸ್ಥಾಪಿಸಿ ಅದಕ್ಕೆ "ಶಿವಾಜಿ ಸಮಿತಿ" ಎಂದು ಹೆಸರಿಟ್ಟ. ದೆಹಲಿಯಲ್ಲಿಯ ಯುವಕರಲ್ಲಿ ನವೋತ್ಸಾಹ, ಧೈರ್ಯ ಸಾಹಸ ಬರುವಂತೆ ಮಾಡುವುದೇ ದೀಕ್ಷಿತನ ಉದ್ದೇಶವಾಗಿತ್ತು. ತನ್ನ ಸಂಘಟನೆಗೆ, ಹೋರಾಟಕ್ಕೆ ದೇಶದ ವಿದ್ಯಾವಂತರು ಧನಿಕರು ಸಹಕರಿಸುತ್ತಾರೆ ಎಂದು ನಂಬಿದ್ದ. ವಿದ್ಯಾವಂತರಿಗೆ ಯೋಚನೆ ಮಾಡುವ, ವಿಚಾರ ಮಾಡುವ ಶಕ್ತಿ ಇರುತ್ತದೆ. ಹಾಗಾಗಿ ಅವರು ಬೆಂಬಲಿಸುತ್ತಾರೆ. ಧನಿಕರಿಗೆ ತಮ್ಮ ಹೊಟ್ಟೆಪಾಡಿನ ಚಿಂತೆ ಇರುವುದಿಲ್ಲ ಹಾಗಾಗಿ ಅವರು ಸಮಯ ಕೊಡುತ್ತಾರೆ ಧನಸಹಾಯವನ್ನೂ ಮಾಡುತ್ತಾರೆ. ಸಮಯವನ್ನೂ ದೇಶಸೇವೆಗೆ ಮೀಸಲಿಡುತ್ತಾರೆ. ಆಗ ನನ್ನ ಕೆಲಸಕ್ಕೆ ಬೆಂಬಲ ಸಿಗುತ್ತದೆ ಎಂಬುದು ಅವನ ನಂಬಿಕೆ. ಆದರೆ ಅವನ ನಿರೀಕ್ಷೆ ಸುಳ್ಳಾಯಿತು. ಇವನ ಕ್ರಾಂತಿಕಾರಿಕ ಯೋಜನೆಗೆ ಅವರಾರು ಬೆಂಬಲ ನೀಡಲಿಲ್ಲ. ನೂರಾರು ವರ್ಷಗಳ ದಾಸ್ಯದ ಪರಿಣಾಮ ಆತ್ಮಸ್ಥೈರ್ಯ ಕಳೆದುಕೊಂಡು ಜನ ಕುಗ್ಗಿ ಹೋಗಿದ್ದರು. ಹೆಚ್ಚಿನ ಪಾಲು ಜನರಿಗೆ – ತಮ್ಮ ಸಂಸಾರದ ಯೋಜನೆ, ನೆಮ್ಮದಿಯಾಗಿರುವ ಯೋಚನೆ. ಹೀಗಾಗಿ ತಮ್ಮ ಮನೆ ಮಠ ಹೆಂಡತಿ ಮಕ್ಕಳು ಇದರ ಸುತ್ತಲೇ ಗಿರಿಕಿ ಹೊಡೆಯುತ್ತಾ ಇರುತ್ತಿದ್ದರು. ಚಿಂತೆ ಇಲ್ಲ ಸ್ವಂತಕ್ಕೆ ತೊಂದರೆ ಮಾಡಿಕೊಳ್ಳಬಾರದೆಂಬ ಭಾವನೆ. ದೇಶಕ್ಕೆ ಹೋರಾಡಿ ಸ್ವಾತಂತ್ರ್ಯ ಗಳಿಸಬೇಕು ಎಂಬ ಯೋಚನೆಯೇ ಇರಲಿಲ್ಲ. ಈ ಪರಿಯ ಜನರನ್ನು ಕಂಡು ಗೇಂದಾಲಾಲನಿಗೆ ಬಹಳ ದುಃಖವಾಯಿತು. ಇನ್ನಾರ ಮೇಲೆ ಭರವಸೆಯಿಟ್ಟು ಹೋರಾಡಲಿ ಎಂಬ ಚಿಂತೆ ಶುರುವಾಯಿತು. ಆದರೆ ಅವನು ಧೃತಿಗೆಡಲಿಲ್ಲ.

ಯಾರಿಂದಲೂ ಸಹಕಾರ ದೊರಕದಾಗ ಗೇಂದಾಲಾಲನಿಗೆ ಡಕಾಯಿತರನ್ನೇಕೆ ಈ ಕಾರ್ಯಕ್ಕೆ ಉಪಯೋಗಿಸಿಕೊಳ್ಳಬಾರದು ಎಂಬ ಹೊಸ ಆಲೋಚನೆ ಮೂಡಿತು. ಧ್ಯೇಯಸಾಧನೆ ಮತ್ತು ತಾಯಿ ವಿಮೋಚನೆಗೋಸ್ಕರ ದಾರಿ ಯಾವುದಾದರೇನು ಗುರಿ ಸಾಧನೆ ಮುಖ್ಯ. ತಾನು ನಂಬಿದ ಜನರ ಉದಾಸೀನತೆ, ಹೆದರಿಕೆ, ಅಪನಂಬಿಕೆ, ಸ್ವಾರ್ಥ ಕಂಡು ಬೇಸರ ಮತ್ತು ದುಃಖವಾದರೂ ಅದನ್ನು ಪಕ್ಕಕ್ಕೆ ಸರಿಸಿ ದೇಶದ ಕೆಲಸ ನಿಲ್ಲಬಾರದು ಎಂದೆನಿಸಿದೆ. ಚಂಬಲ್ ಕಣಿವೆಯ ಡಕಾಯಿತರು ಸಾಹಸವಂತರು ಕೆಚ್ಚೆದೆಯವರು. ಸರ್ಕಾರಕ್ಕೆ ಹೆದರದೆ ಪೋಲೀಸರಿಗೂ ಹೆದರದೆ ಪ್ರಯಾಣಿಕರಲ್ಲಿ ಇರಬಹುದಾದ ಕತ್ತಿ ಚಾಕು ರಿವಲ್ವಾರ್‌ಗಳಿಗೂ ಹೆದರದೆ ಇಡೀ ಪ್ರದೇಶವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡವರು. ಡಕಾಯಿತರ ಬಗ್ಗೆ ಗೌರವ ಇಲ್ಲದಿರುವುದು ಸಹಜವಾದದ್ದೆ. ಆದರೆ ಅವರಲ್ಲಿ ಒಳ್ಳೆಯವರೂ ಇರುತ್ತಾರೆ. ಎಲ್ಲರೂ ಕೆಟ್ಟ ಕೆಲಸ ಮಾಡಿ ಡಕಾಯಿತರಾಗಿರುವುದಿಲ್ಲ. ಅನಿವಾರ್ಯ ಪರಿಸ್ಥಿತಿಗೆ ಒತ್ತಡಕ್ಕೆ ಒಳಗಾದವರೂ ಇರುತ್ತಾರೆ. ಬ್ರಿಟಿಷರ ಕಾಲುತುಳಿತ ತಡೆಯಲಾರದೆ, ಬಡತನ ಅನುಭವಿಸಲಾಗದೆ ಅನೇಕರು ಡಕಾಯಿತರಾಗಿದ್ದೂ ಉಂಟು. ಬ್ರಿಟಿಷ್‌ನವರ ವಿರುದ್ಧದ ಹೋರಾಟದಲ್ಲಿ ಪೋಲೀಸರು ಆ ಊರಿನ ಅನೇಕ ಪೈಲ್ವಾನರು, ಯುವಕರನ್ನು ದಸ್ತಗಿರಿ ಮಾಡಿ ಹಿಂಸೆ ನೀಡುತ್ತಿದ್ದರು. ಅದರಿಂದ ತಪ್ಪಿಸಿಕೊಳ್ಳಲು ಊರು ಬಿಟ್ಟು ಗುಡ್ಡ, ಕಾಡು, ಮೇಡುಗಳಲ್ಲಿ ಆಶ್ರಯ ಪಡೆದು ಅನಿವಾರ್ಯವಾಗಿ ಅವರೂ ಸಹ ಡಕಾಯಿತರಾಗಿದ್ದರು. ಹೋರಾಟಕ್ಕೆ ಸಾಹಸಿಗಳು ಬೇಕು ಅನ್ನಿಸಿದಾಗ ಗೆಂದಾಲಾಲನಿಗೆ ನೆನಪಾಗಿದ್ದು ಈ ಡಕಾಯಿತರೇ. ಅವರು ಸಮಾಜದಿಂದ ದೂರವಿರಬಹುದು ಆದರೆ ಅವರಿಗೆ ತಿಳಿಹೇಳಿ ಅವರ ವ್ಯಕ್ತಿಶಕ್ತಿಯನ್ನು ದೇಶದ ಸ್ವಾತಂತ್ರ್ಯ ಚಳುವಳಿಗೆ ಏಕೆ ಉಪಯೋಗಿಸಿಕೊಳ್ಳಬಾರದು. ಅಡ್ಡಾದಿಡ್ಡಿ ಹರಿಯುತ್ತಿದ್ದ ನದಿಗೆ ಕಟ್ಟೆ ಕಟ್ಟಿ ನೀರನ್ನು ಕಾಲುವೆಗಳ ಮೂಲಕ ಹರಿಸಿ ಹಸಿರು ಕಾಣುವುದಿಲ್ಲವೆ ? ಡಕಾಯಿತರ ಜೊತೆ ಸೇರಿಕೊಂಡು ಶಸ್ತ್ರಾಸ್ತ್ರ ಸಂಗ್ರಹಣೆ ಮಾಡಬಹುದು. ಸರಕಾರಕ್ಕೆ ಸಾಕಷ್ಟು ತೊಂದರೆ ಕೊಟ್ಟು ದೇಶದ ಜನರ ಗಮನ ಸೆಳೆಯಬಹುದು ಎಂದು ಗೇಂದಾಲಾಲ್ ನಿರ್ಧರಿಸಿದ. ಆದರೆ ಅವರನ್ನು ಭೇಟಿಯಾಗುವುದು ಸುಲಭದ ಕೆಲಸವಾಗಿರಲಿಲ್ಲ. ಗುಡ್ಡ ಗಾಡುಗಳಲ್ಲಿ ಅವರು ವಾಸಿಸುತ್ತಾರೆ. ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿರುತ್ತಾರೆ. ಯಾರಾದರೂ ಕಂಡರೆ ಅನುಮಾನ ಬಂದರೆ ಗುಂಡಿಟ್ಟು ಕೊಂದೇ ಬಿಡುತ್ತಾರೆ. ಆದರೂ ಧೈರ್ಯಗೆಡದ ಗೇಂದಾಲಾಲ್ ಕಾಡುಮೇಡು ಸುತ್ತಾಡಿದ. ಆಗಲೇ ಗೇಂದಾ ಲಾಲನಿಗೆ ಪಂಚಮಸಿಂಗ್ ಎಂಬ ಡಕಾಯಿತನ ಪರಿಚಯವಾಯಿತು. ಅವನಿಗೆ ತುಂಬಾ ಶಕ್ತಿ ಇತ್ತು. ಬೇಕಾದಷ್ಟು ಶಸ್ತ್ರಾಸ್ತ್ರಗಳಿದ್ದವು. ಗೇಂದಾಲಾಲ್ ಅವನ ಮನಸ್ಸು ಗೆದ್ದನು. ಹಾಗಾಗಿ ಪಂಚಮಸಿಂಗನ ಜೊತೆ ಇದ್ದ ಅನೇಕ ಡಕಾಯಿತರು ಗೇಂದಾಲಾಲನ ಜೊತೆ ಕೆಲಸ ಮಾಡಲು ಒಪ್ಪಿದರು. ಇದೇ ರೀತಿ ಲಕ್ಷ್ಮಣಾನಂದ ಎಂಬ ಭೀಮಕಾಯದ ಯುವಕ ಪರಿಚಿತನಾದ.

ಅವನು ಯಾವುದಕ್ಕೂ ಹೆದರದೆ ಪ್ರಾಣ ಭಯವಿಲ್ಲದೆ ಮುನ್ನುಗ್ಗುತ್ತಿದ್ದ. ಗೇಂದಲಾಲನಿಗೆ ಇವನ ಸ್ನೇಹದಿಂದ ಭೀಮಬಲ ಬಂದಂತಾಯಿತು. ಗೇಂದಾಲಾಲ್ ನಿಧಾನವಾಗಿ ಪಂಚಮಸಿಂಗ್ ಮತ್ತು ಲಕ್ಷ್ಮಣಾನಂದರ ಸಹಾಯದಿಂದ ಒಂದು ಯುವಕಪಡೆಯನ್ನು ಕಟ್ಟಿದ. ಗ್ವಾಲಿಯರ್‌ನಿಂದಲೇ ಆ ಪಡೆಯ ಕೆಲಸ ಪ್ರಾರಂಭಿಸಿದ. ಸರ್ಕಾರಿ ಕೆಲಸ ಸರಿಯಾಗಿ ನಡೆಯದಂತೆ ತಡೆಯೊಡ್ಡುತ್ತಿದ್ದರು. ಜನರನ್ನು ಬ್ರಿಟಿಷರ ವಿರುದ್ಧ ಎತ್ತಿ ಕಟ್ಟಲು ಪ್ರಚೋದನೆ ಕೊಡಲಾರಂಭಿಸಿದರು. ಗೇಂದಾಲಾಲನ ದಳವನ್ನು ಸದೆ ಬಡಿಯಲು ಪೋಲೀಸರಿಂದ ಸಾಧ್ಯವಾಗುತ್ತಿರಲಿಲ್ಲ. ಗೆಂದಾಲಾಲನ ದಳ ದಿನದಿಂದ ದಿನಕ್ಕೆ ಬೆಳೆಯಿತು. ಹೊಸ ಹೊಸ ಯುವಕರು ಸೇರತೊಡಗಿದರು. ಸರ್ಕಾರದ ಖಜಾನೆಗಳನ್ನು ದೋಚಿದರು. ಇವರ ಚಟುವಟಿಕೆ ಸಮುದ್ರದ ಅಲೆಗಳಂತೆ ಭೋರ್ಗರೆಯುತ್ತಾ ಪ್ರವಾಹ ನುಗ್ಗುವಂತೆ

ನುಗ್ಗಿ ಹರಡಿಕೊಂಡಿತು. ಆಂಗ್ಲರನ್ನು ದೇಶದಿಂದ ಹೊರಗಟ್ಟಿ ಅವರನ್ನು ಗುಂಡಿಕ್ಕಿ ಕೊಲ್ಲಿ ಎಂಬ ದಳದ ಕೂಗು ಎಲ್ಲೆಡೆಯೂ ಮಾರ್ದನಿಸಿತು. ಹೀಗೆ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದ ರೀತಿಯನ್ನು ಕಂಡು ಸರ್ಕಾರಕ್ಕೆ ಆತಂಕವಾಯಿತು. ಗೇಂದಾಲಾಲನ ಕ್ರಾಂತಿಕಾರಿಕ ಚಟುವಟಿಕೆ ಸರ್ಕಾರದ ಅಧಿಕಾರ ಮತ್ತು ಪ್ರತಿಷ್ಠೆಗೆ ಸವಾಲಾಗಿತ್ತು. ಸರ್ಕಾರ ಈ ಚಟುವಟಿಕೆಯಲ್ಲಿ ಇದ್ದವರನ್ನೆಲ್ಲಾ ದೇಶದ್ರೋಹಿಗಳೆಂದು ಸಾರಿತ್ತು. ಅವರನ್ನು ಹಿಡಿಯಲು ಸರ್ವಪ್ರಯತ್ನ ಮಾಡಿತು. ಪೋಲೀಸರು ಮತ್ತು ಸೈನಿಕರು ಗೇಂದಾಲಾಲ್ ಮತ್ತು ಅವನ ದಳವನ್ನು ಪತ್ತೆ ಹಚ್ಚಲು ಶುರು ಮಾಡಿದರು. ಪೃಥ್ವಿರಾಜ್ ಚವಾಣ್, ಚಂದ್ರಶೇಖರ ಆಜಾದ್ ಇರಬಹುದು, ಕಿತ್ತೂರು ಚೆನ್ನಮ್ಮ ಇವರೆಲ್ಲರೂ ಸ್ವಜನ ದ್ರೋಹಿಗಳಿಂದಲೇ ದ್ರೋಹಕ್ಕೆ ಒಳಗಾಗಿ ಸೆರೆಸಿಕ್ಕಿದರು. ಪ್ರಾಣತೆತ್ತರು. ಈ ರೀತಿಯ ದ್ರೋಹ ಗೇಂದಾಲಾಲನಿಗೂ ಆಯಿತು. 1918ರ ಜನವರಿ 31ನೇ ತಾರೀಕು ಗ್ವಾಲಿಯರ್ ಹತ್ತಿರ ಬಿಂಧು ಎಂಬ ಕಾಡುಗಳಲ್ಲಿ ಗೇಂದಾಲಾಲನ ದೊಡ್ಡ ಗುಂಪೊಂದು ಹೋಗುತ್ತಿತ್ತು. ಎರಡು ಮೂರು ದಿವಸ ನಡೆದರೂ ಕಾಡು ಮುಗಿಯಲಿಲ್ಲ. ಮೂರು ದಿವಸಗಳ ಕಾಲ ಯಾರಿಗೂ ಊಟ ತಿಂಡಿಗಳಿರಲಿಲ್ಲ. ಹಸಿವಿನಿಂದ ಎಲ್ಲರೂ ಬಳಲಿ ಬೆಂಡಾಗಿದ್ದರು. ಒಂದೆಡೆ ಕೂತುಬಿಟ್ಟರು. ಎಲ್ಲರಿಗೂ ಹಸಿವು, ಸುಸ್ತು, ನೀರಡಿಕೆ. ಆಗ ಅವರಲ್ಲಿದ್ದ ಹಿಂದೂಸಿಂಗ್ ಎಂಬುವನು ಹತ್ತಿರದಲ್ಲಿ ಹೋಗಿ ತಿಂಡಿ ತರುವೆನೆಂದು ಹೊರಟನು. ಎಲ್ಲರೂ ಕಾಯುತ್ತಿದ್ದರು. ಸ್ವಲ್ಪ ಸಮಯದ ನಂತರ ಎಲ್ಲರಿಗೂ ಬಿಸಿ ಬಿಸಿ ಪೂರಿ ತಂದನು. ಎಲ್ಲರೂ ಗಬಗಬನೆ ತಿಂದರು. ಸ್ವಲ್ಪ ಸಮಯದ ನಂತರ ಅನೇಕರು ತಲೆ ಸುತ್ತುತ್ತಿದೆ ಎಂದು ಉರುಳಿ ಕೊಂಡರು. ಎಲ್ಲೋ ಮೋಸವಾಗಿದೆ, ಪೂರಿಯಲ್ಲಿ ಏನೋ ಬೆರೆಸಿರಬಹುದು ಎಂಬ ಅನುಮಾನದಿಂದ ಪೂರಿ ತಂದ ಹಿಂದೂಸಿಂಗನನ್ನ ಹುಡುಕಿದರು. ಅವನು ಎಲ್ಲರಿಗೂ ನೀರು ತರಲು ತೆರಳಿ ಹಿಂದೂಸಿಂಗ್ ದ್ರೋಹ ಮಾಡಿದ್ದಾನೆ, ನಾವಿರುವ ಸುಳಿವನ್ನು ಸರ್ಕಾರಕ್ಕೆ ತಿಳಿಸಿದ್ದಾನೆ ಎಂದು ಅರಿವಾಯಿತು. 500ಮಂದಿ ಸೈನಿಕರು, ಪೋಲೀಸರು ಈ ಗುಂಪನ್ನು ಸುತ್ತುವರಿದು ನಿಂತರು. ಗುಂಡಿನ ಚಕಮಕಿ ಶುರುವಾಯಿತು. ಬ್ರಿಟಿಷ್ ಸೈನಿಕರ ಶಕ್ತಿ ಹೆಚ್ಚು ಇದ್ದುದರಿಂದ ಗೇಂದಾಲಾಲ್ ಗುಂಪು ನೆಲ ಕಚ್ಚಿತು. ಅನೇಕರು ಸತ್ತು ಬಿದ್ದರು. ಬಲಗೈ ಬಂಟ ಲಕ್ಷ್ಮಣಾನಂದ ಸತ್ತು ಹೋದ. ಗೇಂದಾಲಾಲನ ಒಂದು ಕಣ್ಣು ಕಿತ್ತು ಹೋಯಿತು. ಅವನೂ ಸೇರಿದಂತೆ ಬದುಕಿದ್ದವರನ್ನೆಲ್ಲ ಸೆರೆ ಹಿಡಿದರು. ಗ್ವಾಲಿಯರ್ ಜೈಲಿಗೆ ತಂದರು. ಸರಿಯಾಗಿ ಆಹಾರವಿಲ್ಲ, ಜೈಲಿನಲ್ಲಿ ಚಿತ್ರಹಿಂಸೆ ತಾಳಲಾರದೆ ಗೇಂದಾಲಾಲನ ಆರೋಗ್ಯ ಕೆಟ್ಟಿತು. ಕ್ಷಯರೋಗಕ್ಕೆ ತುತ್ತಾದನು. ಅವನನ್ನು ಗ್ವಾಲಿಯರ್ ಜೈಲಿನಿಂದ ಮೈನುಪುರಿ ಜೈಲಿಗೆ ವರ್ಗಾಯಿಸಿದರು. ಗೇಂದಾಲಾಲ್ ಉಪಾಯವಾಗಿ ತಪ್ಪಿಸಿ ಕೊಂಡನು. ಅನೇಕ ಊರುಗಳಲ್ಲೆಲ್ಲಾ ಅಲೆದಾಡಿದ. ಕೊನೆಗೆ ಆಗ್ರಾಕ್ಕೆ ಬಂದು ಅನಾಥನಂತೆ ಒದ್ದಾಡಿದ. ಅವನ ಸಹಾಯಕ್ಕೆ ಯಾರು ಬರಲಿಲ್ಲ. ದೇಹ ಕ್ಷೀಣಿಸುತ್ತಾ ಹೋಯಿತು. ಕೊನೆಗೆ ಯಾರೋ ಇವನನ್ನು ಅನಾಥ ರೋಗಿಯೆಂದು ದೆಹಲಿಯ ಇರ್ವಿನ್ ಆಸ್ಪತ್ರೆಗೆ ಸೇರಿಸಿದರು. 1920 ಡಿಸೆಂಬರ್ 21 ರಂದು ಗೇಂದಾಲಾಲ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ. ದೇಶಪ್ರಿಯ, ಸಾಹಸಿ, ಅನಾಥನಾಗಿ ಸತ್ತರೂ ಮತ್ತೆ ಈ ದೇಶದಲ್ಲಿ ಹುಟ್ಟುತ್ತೇನೆ ಎಂದು ಕೊನೆಯುಸಿರೆಳೆದಿದ್ದ.


ಜಾಹಿರಾತು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ____________________

ವಿಳಾಸ ____________________

ಸದಸ್ಯತ್ವದ ಸಂಖ್ಯೆ : __________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

ಚಂದಾದಾರರ ಸಹಿ/–

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301l
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

# ಆಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ ಸಾಗದು

– ಎಂ.ಆರ್. ವೆಂಕಟರಾಮಯ್ಯ

ಭಾರತ ಮಾತೆ ದುರ್ಜಲಳು, ನಿಶ್ಯಕ್ತಳು, ಬಲಹೀನೆ ಎಂಬ ಹಣೆ ಪಟ್ಟಿಯನ್ನು ಯಾರಿಂದಲೂ ಕಟ್ಟಿಸಿಕೊಳ್ಳಲಿಲ್ಲ, ಎಂದೂ ಯಾರಿಗೂ ತಲೆ ಬಾಗಿಸಿ ನಡೆದಿದ್ದಿಲ್ಲ. ಬದಲಿಗೆ ವೀರಮಾತೆಯಾಗಿ ಹೆಮ್ಮೆಯಿಂದ ತಲೆ ಎತ್ತಿ ನಡೆದಿದ್ದಾಳೆ. ಕೋಟ್ಯಂತರ ಸಂತಾನಕ್ಕೆ ಜನ್ಮವಿತ್ತಿದ್ದಾಳೆ. ಈ ಮಾತಿಗೆ ಪುಷ್ಠಿಯಾಗಿ ನಮ್ಮ ಪುರಾಣಗಳ ಪುಟಗಳನ್ನು ತಿರುವಿದರೆ ಕಾಣಿಸುತ್ತಾರೆ ಶ್ರೀರಾಮ, ಶ್ರೀ ಕೃಷ್ಣರಂತಹ ಪುರುಷೋತ್ತಮರು, ರಾಮಾಯಣ ಕಾಲದ ಹನುಮಂತನಿಂದ ಆದ ಸಮುದ್ರ ಲಂಘನ, ಲಂಕಾದಹನ, ಸಂಜೀವಿನಿ ಪರ್ವತ ಹೊತ್ತು ತಂದ ಪ್ರಕರಣ, ಕೃಷ್ಣಾವತಾರದ ಕಾಲದ ಗೋವರ್ಧನ ಗಿರಿ ಎತ್ತಿದ ಪ್ರಸಂಗ, ಕಾಳಿಂಗ ಮರ್ದನ, ಕಂಸ ಚಾಣೂರರ ಮರ್ದನ, ಭಗೀರಥ ಮುನಿಯು ಗಂಗೆಯನ್ನು ಭೂ ಲೋಕಕ್ಕೆ ತಂದ ಗಂಗಾವತರಣ ಹೀಗೆ ಉಲ್ಲೇಖಿಸುತ್ತಾ ಹೊರಟರೆ ಪುಟಗಳು ಬೆಳೆಯುತ್ತವೆ.

ಇವರಲ್ಲಿ ಅಂದಿದ್ದ ಗುಣ ಎಂದರೆ 'ಯಾವುದೂ ಅಸಾಧ್ಯವಲ್ಲ, ಎಲ್ಲವೂ ಸಾಧ್ಯ' ಎಂಬ ಧೃಢ ಆತ್ಮವಿಶ್ವಾಸ; ಧನಾತ್ಮಕ ಗುಣ."ಆಗುತ್ತೆ," ಎಂಬ ಪದಕ್ಕೆ ವಿರುದ್ಧವಾದದ್ದೇ "ಆಗೊಲ್ಲ" ಎಂಬ ಋಣಾತ್ಮಕ ಗುಣ. ಈ ಎರಡರ ಪೈಕಿ, ಮೊದಲು ಧನಾತ್ಮಕ ಭಾವನೆಗಳನ್ನು ಮೈಗೂಡಿಸಿಕೊಂಡ ಜನರ ವ್ಯವಹಾರ ರೀತಿಯನ್ನು ಗಮನಿಸೋಣ. ಈ ವರ್ಗದ ಜನರು ತಮ್ಮ ಬುದ್ಧಿ, ಶಕ್ತಿ, ಸಾಮರ್ಥ್ಯಗಳಲ್ಲಿ ತುಂಬಾ ವಿಶ್ವಾಸ ಉಳ್ಳವರು. ಅರ್ಥಾತ್ ಆತ್ಮವಿಶ್ವಾಸ ಹೆಚ್ಚಾಗಿವುಳ್ಳವರು. ಅದೆಂತಹಾ ವಿಷಯ, ಕೆಲಸವೇ ಆಗಲಿ, 'ಉಹೂಂ, ಇದು ಆಗೊಲ್ಲಾ' ಎಂಬ ಮಾತೇ ಇವರ ಜೀವನ ನಿಘಂಟಿನಲ್ಲಿ ಕೊಂಡಿರುವುದಿಲ್ಲ, 'ಇಂಪಾಸಿಬಲ್' ಎಂಬುದು ಮೂರ್ಖರ ನಿಘಂಟಿನಲ್ಲಿ ಮಾತ್ರ ಇರಲು ಸಾಧ್ಯ ಎಂಬುದು ಇವರ ಮಂತ್ರ. ವಿಷಯ, ಕೆಲಸದ ಮಾತು ಕೇಳಿದ ಕೂಡಲೇ, 'ಓ ಆಗಬಹುದು, ಮಾಡೋಣ, ವೈ ನಾಟ್, ಡನ್' ಎನ್ನುತ್ತಾ ಕಾರ್ಯಕ್ಷೇತ್ರಕ್ಕೆ ಸೀದಾ ಇಳಿಯುವವರೇ.

ಕಾರ್ಯ ನಿರ್ವಹಣೆಯ ಮಾರ್ಗದಲ್ಲಿ ಅದೆಂತಹ ಎಡರು ತೊಡರುಗಳೇ ಬರಲಿ, 'ಧೈರ್ಯಂ ಸರ್ವತ್ರ ಸಾಧನಂ' ಎನ್ನುತ್ತಾ ಅವನ್ನು ಧೈರ್ಯದಿಂದ ಎದುರಿಸಿ ಮುನ್ನುಗ್ಗುವವರು ಇವರು, 'ಎವ್ವೆರಿ ಫೈಲ್ಯೂರ್ ಈಸ್ ಎ ಸ್ಟೆಪಿಂಗ್ ಸ್ಟೋನ್ ಫಾರ್ ಫ್ಯೂಚರ್ ಸಕ್ಸಸ್ 'ಟ್ರೈ ಟ್ರೈ ಅಗೈನ್' ಎನ್ನುತ್ತಾ ವಿಜಯ ಸಾಧಿಸುವವರೆಗೆ ಕೈ ಹಿಡಿದ ಕೆಲಸ ಬಿಡದ ಸಾಧಿಸುವ ಛಲದಂಕ ಮಲ್ಲರು, ಈಗ ಎಲ್ಲಕ್ಕೂ "ಆಗೊಲ್ಲಾ" ಎನ್ನುವವರ ಕಡೆ ನೋಡೋಣ, ಇವರದು ಋಣಾತ್ಮಕ ಗುಣ. ಇವರಲ್ಲಿ ಆತ್ಮವಿಶ್ವಾಸ ಕಡಿಮೆ. ಅನುಮಾನ, ಸಂಶಯ ಜಾಸ್ತಿ. ಕೀಳರಿಮೆ, ಕೆಲಕ್ಕೆ ಕೈ ಹಾಕಿ ಅಕಸ್ಮಾತ್ ಜಯ ಗಳಿಸಲಾಗದಿದ್ದರೆ, ! ಅವಮಾನ. ಕಷ್ಟ ನಷ್ಟ ಸಂಭವಿಸಬಹುದು, ನಮಗ್ಯಾಕೆ ಈ ರಿಸ್ಕ್ , ಪಂಚಾಯತಿ ಎಲ್ಲಾ ! ಎನ್ನುವ 'ಈಸಿ ಗೋಯಿಂಗ್ ಲೈಫ್ ಸ್ಟೈಲ್' ನವರು. ಸುಖ ಜೀವನ ಸಾಗಿಸೋಣ ಎಂಬ ತತ್ತ್ವ ಪಾಲಕರು. ಈ ಎರಡನೆಯ ವರ್ಗದವರ ವಿಷಯ ಪಕ್ಕಕ್ಕಿರಲಿ.

ಈಗ ಮೊದಲ ವರ್ಗ, ಆಂದರೆ . ಧನಾತ್ಮಕ ಗುಣವನ್ನು ಹೊಂದಿ ಕೈ ಇಟ್ಟ ಕೆಲಸದಲ್ಲಿ ಅದ್ಭುತ ವಿಜಯ ಸಾಧಿಸಿದ ಒಬ್ಬ ಮಹಾನ್ ವ್ಯಕ್ತಿಯ ಯಶೋಗಾಥೆ ಗಮನಿಸೋಣ. ಮನೆಯವರೊಂದಿಗೆ ವಿರಸ ಬೆಳೆದ ಕಾರಣ ಮನೆ ತ್ಯಜಿಸಿ ಹಳ್ಳಿಯೊಂದರಲ್ಲಿ ವಾಸವಾಗಿದ್ದನು ಈ ಯುವಕ. ಈತನ ಪತ್ನಿ ಫಲ್ಗುಣಿ ದೇವಿ. ಪ್ರತಿ ದಿನವೂ ಪತಿ ಕಾಡಿಗೆ ತೆರಳುವ ಮುನ್ನ ಆಹಾರದ ಬುತ್ತಿ ಕಟ್ಟಿ ಕೊಟ್ಟು ಆತ ಕಡಿದ ಮರಗಳನ್ನು ಹೊತ್ತು ತಂದು ಮಾರುಕಟ್ಟೆಯಲ್ಲಿ ದಂಪತಿಗಳಿಬ್ಬರೂ ಮಾರಿ ಹಣ ಗಳಿಸಿ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದರು. ಇವರಿದ್ದ ಹಳ್ಳಿಯಿಂದ ಪಟ್ಟಣಕ್ಕೆ ಹೋಗಬೇಕಿದ್ದರೆ ಮಾರ್ಗದಲ್ಲಿದ್ದ ಸುಮಾರು 200 ಅಡಿ ಎತ್ತರದ ಗುಡ್ಡವನ್ನು ದಾಟಬೇಕಿತ್ತು. ಅದೊಂದು ದಿನ ಕೆಲಸದಲ್ಲಿದ್ದ ಸಮಯದಲ್ಲಿ ಫಲ್ಗುಣಿ ದೇವಿಯು ಗುಡ್ಡದ ಬೃಹತ್ ಗಾತ್ರದ ಕಲ್ಲು ಎಡವಿ ಬಿದ್ದು ಗಾಯಗೊಂಡಳು. ಅವರಿದ್ದ ಹಳ್ಳಿಯಲ್ಲಿ ಚಿಕಿತ್ಸೆ ಕೊಡಿಸಲು ಆಸ್ಪತ್ರೆ ಇರದ ಕಾರಣ, ಪಟ್ಟಣದಲ್ಲಿದ್ದ ಆಸ್ಪತ್ರೆಗೆ ಸೇರಿಸಲು ಎತ್ತರದ ಗುಡ್ಡ ದಾಟಬೇಕಿತ್ತು ಅಥವಾ ರಸ್ತೆ ಪ್ರಯಣಕ್ಕೆ ಬಹು ದೂರ ಕ್ರಮಿಸಿ ಪಟ್ಟಣಕ್ಕೆ ಸೇರಬೇಕಿತ್ತು. ಪತ್ನಿಯ ಮೇಲಿನ ಪ್ರೇಮ ಆತನನ್ನು ದೂರದ ದಾರಿ ಪಯಣಿಸಲು ಪ್ರೇರೇಪಿಸಿತು. ಕಷ್ಟಪಟ್ಟು ಪಟ್ಟಣದ ಆಸ್ಪತ್ರೆ ಸೇರಿ ಚಿಕಿತ್ಸೆ ಕೊಡಿಸಿದರೂ ಆಕೆ ಹೆಚ್ಚು ಕಾಲ ಬದುಕಲಿಲ್ಲ.

ಅಂದು ಗುಡ್ಡ ಹತ್ತಿ ಇಳಿಯುವ ಕಷ್ಟವಿಲ್ಲದೆ ಇದ್ದಿದ್ದರೆ ತಾನು ಸಕಾಲದಲ್ಲಿ ಪತ್ನಿಗೆ ಸೂಕ್ತ ಚಿಕಿತ್ಸೆ ಕೊಡಿಸಿ ಆಕೆಯನ್ನು ಬದುಕಿಸಿಕೊಳ್ಳಬಹುದಾಗಿತ್ತು. ಆದರೆ ಇದಕ್ಕೆ ಅಡ್ಡಿಯಗಿ ನಿಂತಿತ್ತು ಈ ದೈತ್ಯಾಕಾರದ ಗುಡ್ಡ. ತನ್ನ ಪತ್ನಿಯ ಸಾವಿಗೆ ಈ ಗುಡ್ಡವೇ ಕಾರಣ. ಇದೇ ನನ್ನ ಶತ್ರು ಎಂಬ ಕೋಪ ಮೂಡಿತು ನಮ್ಮೀ ಯುವಕನಿಗೆ. ತನಗಾದ ಕಷ್ಟ, ನಷ್ಟ, ದುಃಖ ತನ್ನ ಈ ಹಳ್ಳಿಯಲ್ಲಿ ಮತ್ಯಾರಿಗೂ ಆಗಬಾರದು ಎನಿಸಿತು. ಕೂಡಲೇ ಗುಡ್ಡ ಕಡಿದು ರಸ್ತೆ ಮಾಡಲು ಕೈಲಿ ಸುತ್ತಿ, ಉಳಿ ಹಿಡಿದು ಕೆಲಸಕ್ಕಿಳಿದನು. 'ಇಷ್ಟು ದೊಡ್ಡ ಗುಡ್ಡ!

ಇದನ್ನು ಕಡಿಯುವುದು ಸಾಮಾನ್ಯ ಕೆಲಸವೇ ! ಯಾರಿಂದಲೂ ಆಗದು. ಇವನಿಗೆ ಹುಚ್ಚು ಹಿಡಿದಿದೆಯಷ್ಟೇ' ಎಂದು ಆ ಹಳ್ಳಿಯ ಜನ ಹಾಸ್ಯ ಮಾಡಿದರು ಯುವಕನ ಕೆಲಸವನ್ನು ನೋಡಿ. 'ಯಾರೇ ಕೂಗಾಡಲಿ, ಯಾರೇ ಹೋರಾಡಲಿ' ಎಂಬಂತೆ ಯಾರ ಅಪಹಾಸ್ಯ ವನ್ನೂ ಲೆಕ್ಕಿಸದೆ ತನ್ನ ಗುರಿಯತ್ತ ಮನವಿಟ್ಟನು. ದಿನ ಬೆಳಗಾದರೆ ಗುಡ್ಡ ಕಡಿಯವ ಕೆಲಸದಲ್ಲೇ ಯುವಕ ನಿರತನಾದನು. ದಿನಗಳು ಉರುಳಿ ತಿಂಗಳುಗಳು, ತಿಂಗಳುಗಳು ಕಳೆದು ವರ್ಷಗಳಾದುವು. ಈ ವೇಳೆಗೆ ಅರ್ಧದಷ್ಟು ಗುಡ್ಡ ಕಡಿದಿದ್ದ. ತನ್ನ ಕೆಲಸ ಬಿಡದೆ ಛಲವಹಿಸಿ ಯುವಕನು ಕಾರ್ಯ ಮುಂದುವರಿಸಿದ. ಇವನ ಕೆಲಸದಿಂದ ಪ್ರೇರಿತರಾದ ಕೆಲವು ಯುವಕರೂ ಮಿತ್ರನೊಡನೆ ಕೈ ಜೋಡಿಸಿ ಗುಡ್ಡ ಕಡಿಯಲಾರಂಭಿಸಿದರು. ಮುಂದಿನ ಕೆಲವೇ ವರ್ಷಗಲ್ಲಿ ಗುಡ್ಡ ನೆಲಸಮವಾಗಿ ರಸ್ತೆಗೆ ದಾರಿ ಮಾಡಿತು.

"ಕಷ್ಟ ಪಟ್ಟರೆ ಫಲವುಂಟು, ಕೈ ಕೆಸರಾದರೆ ಬಾಯಿ ಮೊಸರು" ಎಂಬ ಅನುಭವಾಧಾರಿತ ಗಾದೆಗಳು ಸಾರ್ವಕಾಲಿಕ ಸತ್ಯ ಎಂಬು ಸಂದೇಶವನ್ನು ಪ್ರಸಕ್ತ ಪ್ರಸಂಗ ಸಾರಿತು. ಪರಿಣಾಮವಾಗಿ ಈ ಮೊದಲು ತಮ್ಮ ಹಳ್ಳಿಯಿಂದ ಪಟ್ಟಣ ತಲುಪಲು 55 ಕಿ ಮೀ ದೂರ ಪಯಣಿಬೇಕಿದ್ದ ತಮ್ಮವರಿಗೆ ಇದೀಗ ಕೇವಲ 15 ಕಿ ಮೀ ಪಯಣಿಸಿದರೆ ಪಟ್ಟಣ ಸೇರುವಂತಹ ಸೌಕರ್ಯವಾಯಿತು. ಇಷ್ಟೆಲ್ಲಾ ಪ್ರಸಂಗ ಓದಿದ ಮೇಲೆ 1960 ರಿಂದ 1983 ರ ವರೆಗೆ 22 ವರ್ಷಗಳ ಕಾಲ ಛಲದಂಕ ಮಲ್ಲನಂತೆ ಶ್ರಮಿಸಿ ತನ್ನೂರಿಗೆ ರಸ್ತೆ ಮಾಡಿದ ಈ ವೀರ ಯಾರು ಎಂಬುದನ್ನು ತಿಳಿಯುವ ಕುತೂಹಲ ನಿಮಗಿದೆಯೇ ! ? ಈತನೇ 1934 ರಲ್ಲಿ ಬಿಹಾರದ ಗೆಹಲಾರ್ನಲ್ಲಿ ಜನಿಸಿದ ದಶರಥ ಮಾಂಝೀ.

ಗಂಗೆಯನ್ನು ಭೂಲೋಕಕ್ಕೆ ತರಲು ಅಂದು ಆ ಭಗೀರಥನು ಎಷ್ಟು ಹರಸಾಹಪಟ್ಟನೋ ಅಷ್ಟೇ ಕಷ್ಟಪಟ್ಟಿದ್ದ ಈ ಮಾಂಝೀ ತನ್ನೂರಿಗೆ ರಸ್ತೆ ಮಾಡಲು. ಈ ಕಾರಣದಿಂದ ಈತ ತನ್ನವರ ಬಾಯಲ್ಲಿ "ಭಗೀರಥ ಮಾಂಝೀ' ಎಂದು ಪ್ರಸಿದ್ಧಿಯಾದನು. 2007 ರ ಆಗಸ್ಟ್ 17 ರಂದು ತನ್ನ 72 ನೇ ವಯಸ್ಸಿನಲ್ಲಿ ಕ್ಯಾನ್ಸರಿಂದ ಮಾಂಝೀ ಜನರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆದನು. ದಂತಕತೆಯಾದನು. "ಆಗದು ಎಂದು ಕೈಕಟ್ಟಿ ಕುಳಿತಿದ್ದರೇ !? " ಹಳ್ಳಿಯ ಗುಡ್ಡ ಕಡಿಯಲಾಗುತ್ತಿತ್ತೇ ? ರಸ್ತೆ ಆಗುತ್ತಿತ್ತೇ ! ಅದಕ್ಕಾಗಿಯೇ ನಮ್ಮಲ್ಲಿ ಯಾವಾಗಲೂ ಧನಾತ್ಮಕ ಭಾವನೆ ಬೆಳೆಸಿಕೊಳ್ಳಬೇಕು. ಇದಕ್ಕೆಲ್ಲಾ ಛಲ, ದೃಢ ಮನಸ್ಸು ಕಾರಣ.

"ಮನಸ್ಸಿದ್ದರೆ ಮಾರ್ಗ, ವೇರ್ ದೇರೀಸ್ ಎ ವಿಲ್, ದೇರೀಸ್ ಎ ವೇ" ಎಂಬ ಹಳೇ ಗಾದೆ ನೆನಪಿಸಿಕೊಳ್ಳಬೇಕು. ನಾವೆಂದೂ ಆಶಾವಾದಿಗಳಾಗಿರಬೇಕೇ ಹೊರತು ನಿರಾಶಾವಾದಿಗಳಾಗಿರಬಾರದು. ಎಲ್ಲಾ ಕಾರ್ಯಗಳಿಗೂ ನಂಬಿಕೆ, ಶ್ರದ್ಧೆ, ಆತ್ಮ ವಿಶ್ವಾಸ ಅಗತ್ಯ. ಕಾರ್ಯದ ಯಶಸ್ಸಿಗೆ ಯಾವುದೇ ಸಲಕರಣೆ, ಸೌಲಭ್ಯ, ಮುಖ್ಯವಲ್ಲ, ಬದಲಿಗೆ, ಎಲ್ಲಕ್ಕಿಂತಾ ಹೆಚ್ಚಾಗಿ, ಸಾಧಕನ ಮನೋನಿರ್ಧಾರ, ಛಲ, ದೃಢತೆ ಇದ್ದಲ್ಲಿ ಉಳಿದೆಲ್ಲಾ ನಗಣ್ಯ. "ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾಧಯೇತ್। ಆತ್ಮೈವಹ್ಯಾತ್ಮನೋ ಬಂಧುಃ ಆತ್ಮೈವ ರಿಪುರಾತ್ಮನ ಃ" (ಗೀ ಅ 6 ಶ್ಲೋ 5) ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು. ಇದಕ್ಕಾಗಿ ಬೇರಾರೂ ಬರುವುದಿಲ್ಲ ಎಂದು ಶ್ರೀ ಕೃಷ್ಣ ಪರಮಾತ್ಮನು ಉಪದೇಶಿಸಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಮುನ್ನಡೆದರೆ ಪುರುಷ ಪ್ರಯತ್ನದೊಂದಿಗೆ ದೈವ ಕೃಪೆಯೂ ಸೇರಿ ಕಾರ್ಯಸಿದ್ಧಿಯಾಗುವುದು. ಇದೇ ಸಂದರ್ಭದಲ್ಲಿ "ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ, ಜಗ್ಗದೆಯೇ ಕುಗ್ಗದೆಯೇ ನುಗ್ಗಿ ನುಗ್ಗಿ ನಡೆ ಮುಂದೆ" ಎಂದಿರುವ ಸ್ವಾಮಿ ವಿವೇಕಾನಂದರ ಎಂಬ ವೀರವಾಣಿಯನ್ನು ನಮ್ಮದಾಗಿಸಿಕೊಂಡು ಕಾರ್ಯಪ್ರವೃತ್ತರಾಗೋಣ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**

**ಬನಶಂಕರಿ 2ನೆ ಹಂತ, ಬೆಂಗಳೂರು-70.**

**ದೂರವಾಣಿ : 080-26770066/26771695**

**ಸಮಯ : ಸಂಜೆ 5.00 ರಿಂದ 7.00 ರವರೆಗೆ**

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**

**ಮೊ. : 9916325902**

**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**

**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

**– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್**

ವಧೂವರರ ಗೃಹಸ್ಥಜೀವನದ ಶುಭಾರಂಭವು ವಿವಾಹ ಸಂಸ್ಕಾರದಿಂದಷ್ಟೆ. ಬ್ರಹ್ಮಚರ್ಯಾಶ್ರಮದಲ್ಲಿದ್ದು ಗುರುಕುಲವಾಸವನ್ನು ಮಾಡಿ ತಾನು ಆತ್ಮೋದ್ಧಾರದ ಮಾರ್ಗವನ್ನು ಕಂಡುಕೊಂಡು ಒಬ್ಬ ಕನ್ಯೆಯನ್ನು ಆತ್ಮಮಾರ್ಗದಲ್ಲಿ ಕರೆದೊಯ್ಯುವ ಕಾರ್ಯ ವಿವಾಹ. ಈ ಸಂಸ್ಕಾರವನ್ನು ಕಲ್ಯಾಣ, ಪರಿಣಯ ಮೊದಲಾದ ಪದಗಳಿಂದಲೂ ವ್ಯವಹರಿಸುತ್ತಾರೆ. ಭಗವಂತನ ಮಂಗಳಮಯವಾದ ನೆಲೆಯತ್ತ ಕನ್ಯೆಗೆ ಯಾತ್ರೆ ಆರಂಭವಾಗುವ ಸಂದರ್ಭವಿರುವುದರಿಂದ ಕಲ್ಯಾಣವೆಂಬ ವ್ಯವಹಾರ. ಈ ಮಂಗಳಮಯವಾದ ಯಾತ್ರೆಯಲ್ಲಿ ಆತ್ಮಕಲ್ಯಾಣದ ಜೊತೆಗೆ ಇಂದ್ರಿಯಕಲ್ಯಾಣವೂ ಉಂಟು. ವರನು ವರಣೀಯನಾದ ಭಗವಂತನಲ್ಲಿ ನೆಟ್ಟ ಮನಸ್ಸುಳ್ಳವನಾಗಿರಲು ಅವನನ್ನು ವರಿಸುವ ಕನ್ಯೆಯು ಪತಿಯನ್ನೇ ಸರ್ವಸ್ವವನ್ನಾಗಿ ಭಾವಿಸುವುದರ ಮೂಲಕ ಪತಿವ್ರತಳಾಗಿ ಪತಿಗೂ ಪತಿಯಾದ ಪರಮಪತಿಯಾದ ಭಗವಂತನಲ್ಲೇ ಲಕ್ಷ್ಯವುಳ್ಳವಳಾಗಿರುತ್ತಾಳೆ.

ಭಗವಂತನಲ್ಲಿ ತನ್ಮಯನಾಗಿ ಭಗವದ್ರೂಪನಾದ ಒಬ್ಬ ಗುರುವಿನಲ್ಲಿ ಅನನ್ಯಭಾವವನ್ನು ತಳೆಯುವ ಶಿಷ್ಯನು ಗುರುವಿನದ್ವಾರಾ ಪರಮಗುರುವಾದ ಪರಮಾತ್ಮನನ್ನು ಸೇರುವಂತೆ ಕನ್ಯೆಯು ತನ್ನ ಪತಿಯದ್ವಾರಾ ಜಗತ್ಪತಿಯತ್ತ ಸಾಗುತ್ತಾಳೆ. ಅಂತೆಯೇ ಪತಿಯ ದೆ ೀಹೇಂದ್ರಿಯಮನೋಧರ್ಮಗಳಿಗೆ ಕಿಂಚಿತ್ತೂ ವ್ಯತ್ಯಯವಾಗದಂತೆ ಆತನನ್ನೇ ಅವನ ವೀರ್ಯಾಣುವಿನ ರೂಪದಲ್ಲಿ ಧರಿಸಿ ಅವನ ಪ್ರತಿಬಿಂಬದಂತಹ ಸುಸಂತಾನವನ್ನು ಬೆಳಸುವುದರ ಮೂಲಕ ಸೃಷ್ಟಿಯ ನಡೆಯಲ್ಲಿ ತನ್ನ ಪಾತ್ರವನ್ನೂ ನಿರ್ವಹಿಸುತ್ತಾಳೆ. ಹೀಗೆ ಆತ್ಮಕಲ್ಯಾಣದೊಂದಿಗೆ ಇಂದ್ರಿಯಕಲ್ಯಾಣವೂ ಸಂಪನ್ನಗೊಳ್ಳುವುದು.

ತಾನು ಆತ್ಮಗುಣಸಂಪನ್ನನಾಗಿದ್ದು ತನ್ನಂತೆ ತನ್ನ ಸಂತಾನವು ಬೆಳೆಯಬೇಕೆಂಬುದು ವರನ ಸಹಜವಾದ ಸಂಕಲ್ಪ. ಅದು ಸಂಪನ್ನವಾಗಬೇಕಾದರೆ ಅವನನ್ನೇ ತನ್ನ ಚಿತ್ತದಲ್ಲಿ ಆಕೆ ಧರಿಸಬೇಕು. ಅವನಲ್ಲದೇ ಇನ್ನೊಬ್ಬನನ್ನು ತಿಳಿದೋ ತಿಳಿಯದೆಯೋ ಇಂದ್ರಿಯಕಾಮದಿಂದಲೋ ಸಂತಾನಕಾಮಳಾಗಿಯೋ ಚಿತ್ತದಲ್ಲಿ ಭಾವಿಸಿದರೆ ಆ ಪರಪುರುಷನ ವ್ಯಕ್ತಿತ್ವವೂ ಚಿತ್ತಭಿತ್ತಿಯಲ್ಲಿ ಮುದ್ರಿತವಾಗಿ ಬೆಳೆಯುವ ಸಂತಾನದಲ್ಲಿ ಆ ಪರಪುರುಷನ ಲಕ್ಷಣಗಳೂ ಸೇರಿ ಸಾಂಕರ್ಯದ ಸಂತಾನವಾಗುತ್ತದೆ. ಇಂತಹ ಸಾಂಕರ್ಯಗಳು ಉಂಟಾದಲ್ಲಿ 'ಸಂತಾನ' ಎಂಬ ವ್ಯವಹಾರವು ಸಾರ್ಥಕವಾಗುವುದಿಲ್ಲ. ಮೂಲವಸ್ತು ತನ್ನನ್ನೇ ತಾನು ವಿಸ್ತರಿಸಿಕೊಳ್ಳುವಂತಿದ್ದರೆ ಸಮ್ಯಕ್–ತಾನ–ಸಂತಾನ. ಮಾವಿನ ಬೀಜದಲ್ಲಿ ಮಾವಿನ ಚಿಗುರು–ಕಾಂಡ–ಕೊಂಬೆ–ಎಲೆ–ಹೂವು–ಹಣ್ಣು ಹೀಗೆ ಮಾವಿನ ತನವೇ ವಿಕಾಸವಾದರೆ ಅದು ಸೃಷ್ಟಿ ಸಹಜವೆನಿಸಿಕೊಳ್ಳುತ್ತದೆ. ಮಧ್ಯದಲ್ಲಿ ಬದನಿಕೆ ಏರ್ಪಟ್ಟರೆ ಅದನ್ನು ಮಾವಿನ ಸಂತಾನವೆಂದು ಕರೆಯಲಾಗುವುದಿಲ್ಲ. ಅದನ್ನು ತೆಗೆದುಹಾಕು ಎಂಬ ಮಾತಿಗೆ ವಿಷಯವಾಗುತ್ತದೆ. ಬದನಿಕೆಯನ್ನಾದರೂ ಗುರುತಿಸಿದವನು ಮಾವಿನಿಂದ ಕಿತ್ತು ತೆಗೆಯಬಹುದು. ಆದರೆ ಸಂತಾನದಲ್ಲಿ ಸಂಕರವು ಏರ್ಪಟ್ಟರೆ ಅದನ್ನು ಬೇರ್ಪಡಿಸುವ ಕಾರ್ಯ ಸಾಧ್ಯವೇ ಇಲ್ಲ. ಆ ಸಂಕರವೇ ಮುಂದು ಮುಂದಿನ ಪೀಳಿಗೆಗಳಲ್ಲಿ ಬೆಳೆಯಲಾರಂಭಿಸುತ್ತದೆ. ಅದೊಂದು ಶಾಖೆಯಾಗಿ ಉಳಿದುಬಿಡುತ್ತದೆ! ಆ ಸಂತಾನದಲ್ಲಿ ದೇಹ ಹಾಗು ನಾಡಿಮಾರ್ಗಗಳಲ್ಲಿ ಸಾಂಕರ್ಯವೇರ್ಪಡುವುದರಿಂದ ಅನೇಕ ಸಮಸ್ಯೆಗಳುಂಟು. ಆ ಸಂತತಿಗಳು ಏಕಮುಖವಾಗಿ ಆತ್ಮಮಾರ್ಗದಲ್ಲಿ ಸಾಗುವ ಬಗ್ಗೆಯೂ ಆತ್ಮಾನುಭವದ ತಂಪನ್ನು ನಿರ್ವಿಕಾರವಾಗಿ ಇಂದ್ರಿಯಭೂಮಿಕೆಯವರೆಗೆ ತರುವ ಬಗ್ಗೆಯೂ ಸಲ್ಲದಾಗುತ್ತವೆ. ಸಂಕರವಾಗದೇ ಒಂದು ಸಂತಾನವು ಶುದ್ಧವಾಗಿಏರ್ಪಡಬೇಕಾದರೆ ಆತ್ಮಕಲ್ಯಾಣವೂ ಏರ್ಪಡಬೇಕಾದರೆ ವೃಕ್ಷವನ್ನು ಲತೆಯು ಅವಲಂಬಿಸುವಂತೆ ಕನ್ಯೆಯು ವರನನ್ನು ಅವಲಂಬಿಸಬೇಕಾಗುತ್ತದೆ. ವರನೂ ಸಹ ಕನ್ಯೆಗೆ ಅವಲಂಬನವನ್ನು ನೀಡುವುದರ ಮೂಲಕ ತನ್ನನ್ನೇ ತಾನು ಸಂತಾನದ ರೂಪದಲ್ಲಿ ನಿರ್ವಿಕಾರವಾಗಿ ಬೆಳೆಸಿಕೊಳ್ಳುತ್ತಾನೆ. ಅದರಲ್ಲಿ ಅವನ ಕರಣ–ಕಳೇಬರಗಳ ಸಾರ್ಥಕತೆಯುಂಟು.

ತಾನೊಮ್ಮೆ ಆತ್ಮಮಾರ್ಗದ ಅವಲಂಬನೆಯುಳ್ಳವನಾಗಿ ಬದುಕಿದರೂ ತನ್ನ ಬದುಕಿನ ಅವಧಿಯಲ್ಲಿ ಸತ್ಯದರ್ಶನವನ್ನು ಮಾಡಿ ಜೀವನದ ಪೂರ್ಣತೆಯನ್ನು ಪಡೆಯಲಾರದೆ ಹೋಗಲೂಬಹುದು. ಆದರೆ ವಿಕಾರರಹಿತವಾದ ಸಂತಾನವನ್ನು ಪಡೆಯುವುದರಲ್ಲಿ ಅವನ ಆತ್ಮಮಾರ್ಗದ ಸಂರಕ್ಷಣೆಯುಂಟು. ಕಾರಣ ಅವನ ಸಂತತಿಯಲ್ಲಿ ಮುಂದೆ ಯಾರಾದರೂ ಸತ್ಯದರ್ಶನವನ್ನು ಪಡೆದರೆ ಅದರ ಪರಿಣಾಮವು ಈತನ ಮೇಲೂ ಉಂಟು. ಕನ್ಯೆಯನ್ನು ವರಿಸುವಾಗ ಅಂತಹ ಸಂಕಲ್ಪವಿದೆ. 'ದಶಪೂರ್ವೇಷಾಂ ದಶಾಪರೇಷಾಂ ಆತ್ಮನಶ್ಚೈಕವಿಂಶತಿ ಕುಲೋತ್ತಾರಣಾರ್ಥಮ್' ತನ್ನ ಮುಂದಿನ ಹತ್ತುತಲೆ, ಹಿಂದಿನ ಹತ್ತುತಲೆ ಹಾಗೂ ತಾನೂ ಸೇರಿ ಇಪ್ಪತ್ತೊಂದು ತಲೆಗಳ ಉದ್ಧಾರಕ್ಕಾಗಿ ಈ ಕನ್ಯೆಯನ್ನು ವರಿಸುತ್ತೇನೆ ಎಂಬ ಸಂಕಲ್ಪ. ಹೀಗೆ ತನ್ನ ಸಂತತಿಯ ಬೆಳವಣಿಗೆಯಲ್ಲಿ ಆತ್ಮೋದ್ಧಾರವುಂಟು.

ವಿವಾಹದೀಕ್ಷೆಯಾದಂದಿನಿಂದ ಅವಳು ಪತ್ನೀ ಎಂಬ ನಾಮಧೇಯವನ್ನು ಪಡೆಯುತ್ತಾಳೆ. ಪತಿಯು ಮಾಡುವ ಯಜ್ಞದಲ್ಲಿ ಸಹಭಾಗಿನಿಯಾಗಿರುವುದರಿಂದ 'ಪತ್ನೀ' ಎಂಬ ಪದ. ಅವನು ದೇವಯಜ್ಞವೇ ಮೊದಲಾದ ಐದು ಯಜ್ಞಗಳನ್ನು ನಡೆಸಬೇಕು. ಐದೂ ಯಜ್ಞಗಳಲ್ಲಿ ಆಕೆ ಸಹಭಾಗಿನಿಯಾಗಿರಬೇಕಾಗಿದೆ. ಆಕೆಯ ಅನುಮತಿಯೊಡನೆ ಅವನ ಕಾರ್ಯಸಂಪನ್ನವಾಗಬೇಕು. ಅವಳು ಪುರುಷನಿಗೆ ಅವಿಭಾಜ್ಯವಾದ ಭಾಗದಂತಾಗಬೇಕು. ಅದನ್ನೇ ಸ್ಮೃತಿಯು–

**ಅರ್ಧಂ ಭಾರ್ಯಾ ಮನುಷ್ಯಸ್ಯ ಭಾರ್ಯಾ ಶ್ರೇಷ್ಠತಮಾ ಸಖಾ ।**
**ಭಾರ್ಯಾ ಮೂಲಂ ತ್ರಿವರ್ಗಸ್ಯ ಭಾರ್ಯಾ ಮೂಲಂ ತರಿಷ್ಯತಃ ॥**

ಮನುಷ್ಯನಿಗೆ ಭಾರ್ಯೆ ಅರ್ಧಭಾಗ. ಅವಳು ಅವನಿಗೆ

ಶ್ರೇಷ್ಠತಮಳಾದ ಸಖಿ. ಭಾರ್ಯೆಯೇ ಧರ್ಮ–ಅರ್ಥ–ಕಾಮಗಳೆಂಬ ತ್ರಿವರ್ಗಸಾಧನೆಗೆ ಮೂಲ. ಸಂಸಾರ ಸಾಗರವನ್ನು ದಾಟುವವನಿಗೆ ಭಾರ್ಯೆ ಮೂಲಸಾಧನ ಎಂದು ಸಾರುತ್ತದೆ.

ಜಾಯಾ ಎಂಬ ಪದವೇ ಪುರುಷನು ತನ್ನ ಪತ್ನಿಯಲ್ಲಿ ರೇತೋಯಜ್ಞದ ಮೂಲಕ ಮತ್ತೊಮ್ಮೆ ಹುಟ್ಟಿಬರುತ್ತಾನೆ ಎಂಬರ್ಥದಲ್ಲಿ ಬೆಳೆದಿದೆ–

**ಪತಿರ್ಭಾರ್ಯಾಂ ಸಂಪ್ರವಿಶ್ಯ ಗರ್ಭೋಭೂತ್ವೇಹ ಜಾಯತೇ ।**
**ಜಾಯಾಯಾಸ್ತದ್ಧಿ ಜಾಯಾತ್ವಂ ಯದಸ್ಯಾಂ ಜಾಯತೇ ಪುನಃ ॥**

ಪತಿಯು ತಾನೇ ಸ್ವತಃ ಗರ್ಭರೂಪವನ್ನು ಧರಿಸಿ ಭಾರ್ಯೆಯನ್ನು ಪ್ರವೇಶಿಸಿ ಪುತ್ರನಾಗಿ ಜನಿಸುತ್ತಾನೆ. ತಾನೇ ಪುನಃ ಹುಟ್ಟಿಬರಲು ಸಾಧನಳಾದ್ದರಿಂದ ಮಡದಿಗೆ ಜಾಯಾ ಎಂಬ ಹೆಸರು.

ಉತ್ಕೃಷ್ಟವಾದ ಕ್ಷೀರವನ್ನು ಗೋವಿನ ಕೆಚ್ಚಲಿನಿಂದ ಒಂದು ಪಾತ್ರೆಗೆ ಸಂಗ್ರಹಿಸಬೇಕಾದರೆ ಆ ಪಾತ್ರೆ ಕ್ಷೀರವನ್ನು ಧರಿಸಲು ಯೋಗ್ಯವೇ? ಎಂದು ಪರಿಶೀಲಿಸಬೇಕಾಗುತ್ತೆ. ಸ್ವಲ್ಪ ಮಾತ್ರ ಉಪ್ಪು, ಹುಳಿ, ಕಿಲುಬು ಪಾತ್ರದಲ್ಲಿ ಸೇರಿದ್ದರೂ ಸಹ ಕ್ಷೀರವು ಕೆಲವೇ ನಿಮಿಷಗಳಲ್ಲಿ ತನ್ನ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಒಂದು ಸಣ್ಣ ವಿಷಯವನ್ನು ಮನಸ್ಸಿನಿಂದ ಧರಿಸಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ದಾಟಿಸಬೇಕಾದರೆ ಮೂಲದ ಸ್ವರೂಪ ವ್ಯತ್ಯಾಸವಾಗಿಬಿಡುವುದುಂಟು! ಹೀಗಿರುವಾಗ ಪುರುಷನ ಜ್ಞಾನ, ವಿಜ್ಞಾನಗಳನ್ನೂ ಆ ಜ್ಞಾನ, ವಿಜ್ಞಾನಗಳ ಒಡಲಾದ ಮನೋಭೂಮಿಕೆಯನ್ನೂ, ಇಂದ್ರಿಯಸಂಪತ್ತನ್ನೂ, ಇದೆಲ್ಲದರ ಆಶ್ರಯವಾದ ದೇಹವನ್ನೂ– ಯಾವ ದೇಹವು ನಾಡೀನಿಬಂಧನವಾಗಿ ಜ್ಞಾನವಿಜ್ಞಾನಗಳ ಹರಿವಿಗೆ ದ್ವಾರವಾಗಿರುವುದೋ ಆ ದಿವ್ಯಯಾನವನ್ನು ವಿಕಾರವಿಲ್ಲದಂತೆ ಒಂಭತ್ತು ತಿಂಗಳ ಕಾಲ ತನ್ನ ಗರ್ಭದಲ್ಲಿ ಧರಿಸಿ ಲೋಕಕ್ಕೆ ತಂದುಕೊಡಬೇಕಾದರೆ ಆಕೆಗೆ ಹಿರಿದಾದ ಪಾತ್ರತೆಯಿರಲೇಬೇಕು. ಆಕೆಯು ಪ್ರಕೃತಿಮಾತೆಯಾಗಿ ಜ್ಞಾನವಿಜ್ಞಾನಗಳ ಕಂಪುತಂಪುಗಳೊಡಗೂಡಿದ ಸುಂದರವಾದ ಸಂತಾನ–ಸುಮನಸವನ್ನು ಕಿಂಚಿತ್ತೂ ಬಾಡದಂತೆ ತನ್ನೊಡಲಿನಲ್ಲಿ ಬರಮಾಡಿಕೊಂಡು ಭಗವತ್ಪಾದದಲ್ಲಿ ಸಮರ್ಪಿಸುವ ಭಕ್ತೆಯಾಗಿದ್ದಾಳೆ.

ಹೀಗಿರುವುದರಿಂದ ವಧೂವರರ ಹೊಂದಾಣಿಕೆ ಕೇವಲ ಭೌತಿಕ ಜೀವನಕ್ಕೆ ಮಾತ್ರ ಸೀಮಿತವಾಗಿಲ್ಲ. ಏಳು ಲೋಕಗಳ ಯಾತ್ರೆಯಲ್ಲಿ ಅವರು ಪರಸ್ಪರ ಪೋಷಕರಾಗಿದ್ದು ಜೀವನದ ಸಾರ್ಥಕ್ಯವನ್ನು ಪಡೆಯುವ ಹೆಜ್ಜೆಯುಳ್ಳವರು. ಸಪ್ತಪದಿಯ ಸಂಸ್ಕಾರದೊಂದಿಗೆ ವಿವಾಹ ಕರ್ಮದ ಮುಕ್ತಾಯ. ಸಪ್ತಪದಿಯ ಆ ಏಳುಹೆಜ್ಜೆಗಳು ಲೌಕಿಕ ಜೀವನದ ಏಳು ಹೆಜ್ಜೆಗಳಲ್ಲ. ಭೂಃ, ಭುವಃ, ಸುವಃ, ಮಹಃ, ಜನಃ, ತಪಃ, ಸತ್ಯಂ ಎಂಬುದಾಗಿ ಕರೆಯಲ್ಪಡುವ ಏಳು ಊರ್ಧ್ವಲೋಕಗಳನ್ನು ಅವನೊಡನೆ ಕ್ರಮಿಸುವ ನಡೆ. ಅಷ್ಟುದೂರದವರೆಗೂ ಸಖ್ಯವಿರಬೇಕಾದರೆ ಎಷ್ಟು ಅಂಶಗಳ ಹೊಂದಾಣಿಕೆ ಅಗತ್ಯವೆಂಬುದನ್ನು ಭಾವಿಸಬೇಕು.

ಜ್ಯೋತಿಶ್ಶಾಸ್ತ್ರವು ವೇದಚಕ್ಷುಃ ಎಂದು ಕರೆಯಲ್ಪಡುವ ವೇದಪುರುಷನ ಕಣ್ಣಿನ ಸ್ಥಾನದಲ್ಲಿರುವ ಶಾಸ್ತ್ರ. ಅದು ಭೌತಿಕ ಕ್ಷೇತ್ರದ ಬಗ್ಗೆ ಒಂದು ನೋಟವನ್ನು ನೀಡುವುದು ಮಾತ್ರವಲ್ಲ, ದೈವಿಕ–ಆಧ್ಯಾತ್ಮಿಕಕ್ಷೇತ್ರದವರೆಗೂ ದರ್ಶನಮಾಡಿಸಬಲ್ಲದು. ಜನ್ಮಾಂತರದಿಂದ ಪಡೆದಿರುವ ಸಂಸ್ಕಾರಗಳು, ಈ ಜನ್ಮದಲ್ಲಿ ಪಡೆದುಕೊಂಡಿರುವ ದೇಹಪ್ರಕೃತಿ ಹಾಗೂ ಮನಃಪ್ರಕೃತಿ, ಶುಭಾಶುಭಕರ್ಮಗಳು, ಯೋಗಭೋಗಮಯವಾದ ಜೀವನಕ್ಕೆ ದೈವದ ಅನುಕೂಲ ಪ್ರತಿಕೂಲಭಾಗಗಳು ಹೀಗೆ ಅತ್ಯಂತ ವ್ಯಾಪಕವಾದ ವಿಷಯಗಳನ್ನು ಮನವರಿಕೆ ಮಾಡಬಲ್ಲದು. ವಧೂವರರ ಜೀವನವು ಎಲ್ಲ ಎಡರು–ತೊಡರುಗಳನ್ನು ದಾಟಿ ಮುಂದೆ ಸಾಗಬೇಕಾದರೆ ಪರಸ್ಪರರ ಪೋಷಣೆ ಅಗತ್ಯ. ಒಬ್ಬರಿಗೆ ಬರಬಹುದಾದ ತೊಡಕುಗಳನ್ನು ಇನ್ನೊಬ್ಬರು ಬಗೆಹರಿಸುವಂತಿರಬೇಕಾಗಿದೆ. ಅಪ್ರಯತ್ನವಾಗಿಯೇ ಮೈ–ಮನಸ್ಸು–ಬುದ್ಧಿಗಳಿಗೆ ಸಂಬಂಧದ ಕಾರಣದಿಂದ ಪರಿತೋಷ ದೊರೆಯಬೇಕು. ಪ್ರಕೃತಿಗಳಿಗೆ ಒಂದಕ್ಕೊಂದು ಬಂಧವೇರ್ಪಡಬೇಕು. ಈ ನೇರದಲ್ಲಿ ಹೊಂದಾಣಿಕೆಯ ಚಿಂತನೆ ಶಾಸ್ತ್ರದಲ್ಲಿ ಬೆಳೆದುಬಂದಿದೆ.

ವಧೂವರರ ಹೊಂದಾಣಿಕೆಯ ವಿಷಯದಲ್ಲಿ ಹಲವಾರು ದೃಷ್ಟಿಕೋನಗಳಿಂದ ಜ್ಯೋತಿಶ್ಶಾಸ್ತ್ರವು ನಿರ್ಣಯವನ್ನು ಕೊಡುವುದಾಗಿದೆ. ಅವುಗಳಲ್ಲಿ ಅತ್ಯಂತ ಪ್ರಧಾನವಾದ ಒಂದು ಅಂಶ ಗ್ರಹಮೈತ್ರ. ಗ್ರಹಮೈತ್ರವೆಂಬ ಪದ ಯಾವ ಅಭಿಪ್ರಾಯದಲ್ಲಿ ಹುಟ್ಟಿಕೊಂಡಿದೆ ಎಂಬುದು ಅರಿವಾದರೆ ಇದರ ಅನುಸಂಧಾನ ಎಷ್ಟು ಅರ್ಥವತ್ತಾಗಿದೆ ಎಂಬುದು ಮನದಟ್ಟಾಗಬಹುದು.

ಗ್ರಹಗಳೆಂದೊಡನೆಯೇ ನಮ್ಮ ಬುದ್ಧಿಯು, ಖಗೋಳದಲ್ಲಿ ಗೋಚರಿಸುವ ಮಂಗಳ, ಬುಧ ಮೊದಲಾದ ಆಕಾಶಕಾಯಗಳತ್ತ ಹರಿಯುವುದು. ಅದಕ್ಕೆ ಇಂದಿನ ಆಧುನಿಕ ವಿಜ್ಞಾನದ ಚಿಂತನೆಯೇ ಕಾರಣವಾಗಿದೆ. ಭಾರತೀಯ ಋಷಿಮಹರ್ಷಿಗಳ ಹೃದಯವು ಮರೆಯಾಗಿದೆ. ಈ ವಿದ್ಯೆಯನ್ನು ಲೋಕಕ್ಕೆ ತಂದ ಅವರ ಹೃದಯವನ್ನು ಅರಿತುಕೊಳ್ಳಬೇಕಾಗಿದೆ.

ಗ್ರಹವೆಂಬುದು ಪ್ರತಿಯೊಬ್ಬನ ಪಿಂಡಾಂಡ–ದೇಹದಲ್ಲೂ ಕೆಲಸ ಮಾಡುತ್ತಿರುವ ಶಕ್ತಿಗಳು. ಅವು ಸಪ್ತಧಾತುಗಳನ್ನು ಧರಿಸುತ್ತಿರುವ ದೈವೀಶಕ್ತಿಗಳು. ಯಾವ ನಮ್ಮ ಈ ದೇಹವು ಪೃಥ್ವೀ, ಅಪ್, ತೇಜಸ್ಸು, ವಾಯು, ಆಕಾಶವೆಂಬ ಪಂಚಭೂತಗಳಿಂದ ನಿರ್ಮಾಣವಾಗಿದೆಯೋ ಅಂತಹ ಈ ದೇಹದ ಧಾರಣೆಗೆ ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜಾ, ಅಸ್ಥಿ, ಶುಕ್ರ ಎಂಬ ಸಪ್ತಧಾತುಗಳೂ ಕಾರಣವಾಗಿವೆ. ಧಾತು ಎಂಬ ಪದವೇ ಮೂಲವಸ್ತು, ಧಾರಣೆಯ ಸಾಧನ ಎಂಬ ಅರ್ಥವನ್ನು ಕೊಡುತ್ತಿದೆ. ದೇಹವನ್ನು ಅವುಗಳೇ ಧಾರಣೆ ಮಾಡುತ್ತಿರುವುದರಿಂದ ಧಾತು ಎಂಬ ವ್ಯವಹಾರ. ಯಾವ ಏಳು ಶಕ್ತಿಗಳು ಈ ಧಾತುಗಳಿಗೂ ಮೂಲದಲ್ಲಿ ಮೂಲಶಕ್ತಿಯಾಗಿ ಕೆಲಸ ಮಾಡುತ್ತಿದೆಯೋ ಅವುಗಳನ್ನೇ ಗ್ರಹವೆಂದು ವ್ಯವಹರಿಸಿದ್ದಾರೆ. ಸೂರ್ಯನು ಮೂಳೆಗಳಿಗೆ ಅಧಿಪತಿಯಾಗಿದ್ದಾನೆ. ಚಂದ್ರನು ರಸ ಹಾಗೂ ರಕ್ತಕ್ಕೂ, ಕುಜನು ಮಜ್ಜಾಧಾತುವಿಗೂ, ಬುಧನು ಮಾಂಸ ಮತ್ತು ಚರ್ಮಕ್ಕೂ, ಗುರುವು ಮೇದಸ್ಸಿಗೂ, ಶುಕ್ರನು ವೀರ್ಯ ಮತ್ತು ಆರ್ತವಧಾತುವಿಗೂ ಶನಿಯು ಸ್ನಾಯುವಿಗೂ ಅಧಿಪತಿಗಳಾಗಿದ್ದಾರೆ. ಹೀಗೆ ಸಪ್ತಧಾತುಗಳ ಮೇಲೆ ಗ್ರಹಗಳ ಆಧಿಪತ್ಯವಿದೆ.

**ಮುಂದುವರೆಯುವುದು...**


Dr. B.N.V. JYOTHY MEMORIAL EDUCATIONAL TRUST®
ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್
JYOTHY INSTITUTE OF COMMERCE AND MANAGEMENT
Affiliated to Bangalore University, Approved by Govt. of Karnataka
Off Kanakapura Road, Thataguni, Bengaluru - 560082
Courses Offered
M.Com, B.Com, BBA & BCA
99013 42233 | www.jyothyicm.org
JICM Campus
JICM Building
Hostel
Auditorium
JYOTHY SKILL LABS
Cirruss Global
Aviation Services Pvt. Ltd.
Since 2014
SCHOOL OF AVIATION
Off Kanakapura Road, Thataguni, Bengaluru - 560082
Courses Offered
Diploma in Airport Operations and Ground Handling
& Diploma in Cabin Crew Management
Course Duration : 2 Months
100% Guaranteed Placement
Regular and Weekend Batches Available in Bengaluru & Hubballi
For more details, contact : 99013 42233


ಹಾರ್ದಿಕ ಶುಭಾಶಯಗಳೊಂದಿಗೆ
ಶ್ರೀ ಸಿ.ಎಸ್.ಕೃಷ್ಣಸ್ವಾಮಿ
ಸಂಸ್ಥಾಪಕರು
ಶ್ರೀಮತಿ ಲಕ್ಷ್ಮಿ ಶ್ರೀಕೇಶವ
ಪ್ರಾಂಶುಪಾಲರು
ಶ್ರೀ ರಾಮಕೃಷ್ಣ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆ
Sri Ramakrishna Vidyalaya
English Medium Baby Sitting/Kindergarten/Primary & High School
HOLY KIDS
HOLY MOTHER
SRI RAMA KRISHNA VIDYALAYA
100% Results in SSLC since 16 years
10th Cross, K.R. Puram / 4th Cross, Ravindranagara, Hassan. E-Mail: hpsramakrishnavidyalaya@gmail.com Ph: 08172-232804


REVA UNIVERSITY
Bengaluru, India
ELEVATE
YOUR FUTURE
PROGRAMMES OFFERED
• ENGINEERING
• ARCHITECTURE
• COMMERCE
• MANAGEMENT
• ARTS & HUMANITIES
• COMPUTER SCIENCE & APPLICATIONS
• APPLIED SCIENCE
• ALLIED HEALTH SCIENCE
• LAW
• PERFORMING ARTS
KNOW MORE

## ಹಾವೇರಿ ಜಿಲ್ಲೆಯಲ್ಲಿ – ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚಟುವಟಿಕೆ





## ಪುಸ್ತಕ ಲೋಕಾರ್ಪಣೆ ಸಮಾರಂಭ ಸಿದ್ದಾಪುರ





## ದಾವಣಗೆರೆಯ ವಸ್ತು ಪ್ರದರ್ಶನ ಮತ್ತು ಆಹಾರ ಮೇಳ – 2024





## ಚಿಕ್ಕಬಳ್ಳಾಪುರ
## ಜ್ಞಾನಮುದ್ರ ವಿಪ್ರ ಮಹಿಳಾ ಮಂಡಳಿಯ ಉದ್ಘಾಟನೆ



## ಆಚಾರ್ಯತ್ರಯರ ಜಯಂತಿ ಆಚರಣೆ



PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 09-03-2024 Date of Publishing 08-03-2024




If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar